# ಅಧ್ಯಾಯ 4

# ಕ್ರಿಸ್ತನು, ನಮ್ಮ ಮಹಾಯಾಜಕನು

## (ಭಾಗ 1)

### ಕ್ರಿಸ್ತನ ವಿಶ್ರಾಂತಿ (3:7-4:13) (ಮುಂದುವರೆದ ಭಾಗ)

ಇಬ್ರಿಯರಿಗೆ ಪತ್ರಿಕೆಯು ಎಚ್ಚರಿಸುವಿಕೆಯ ಹದಿಮೂರು ಹೇಳಿಕೆಗಳನ್ನು ಒಳಗೊಂಡಿರುತ್ತದೆ. ಈ ಬುದ್ಧಿವಾದಗಳು ಗ್ರೀಕ್ ಪದರಚನೆಯ ಮೂಲಕ ಸ್ಪಷ್ಟವಾಗಿ ಗುರುತಿಸಲ್ಪಟ್ಟವುಗಳಾಗಿದ್ದು ಅದು "ಮಾಡೋಣ" ಎಂಬ ಸಾಮಾನ್ಯ ಪದದಿಂದ ಅನುವಾದಿಸಲ್ಪಟ್ಟಿರುತ್ತದೆ (4:1, 11, 14, 16; 6:1; 10:22, 23, 24; 12:1, 28; 13:13, 15). ಮೊದಲನೆಯದ್ದು "ಭಯ ಪಡೋಣ" ಎಂದು ಪ್ರಸ್ತಾಪಿಸುತ್ತದೆ, ಅದನ್ನು ಕೆಲವರು ನಕಾರಾತ್ಮಕ ಭಾವವೆಂದು ಪರಿಗಣಿಸುತ್ತಾರೆ, ಹೇಗೂ, ಭಯವು ಜ್ಞಾನ ಮತ್ತು ತಿಳುವಳಿಕೆಗೆ ಮೂಲವಾಗಿರುತ್ತದೆ (ಜ್ಞಾನೋಕ್ತಿ 1:7; 9:10), ಅವುಗಳು ಅತ್ಯಂಥ ಸಕಾರಾತ್ಮಕ ಗುಣಗಳಾಗಿರುತ್ತವೆ. ಪ್ರತಿಯೊಂದು ಬುದ್ಧಿವಾದವು ವಾಚಕನನ್ನು ಉನ್ನತವಾದ ಜೀವನ ಸ್ಥಿತಿಗೆ ಬರುವಂತೆ ಕರೆಯುವದಾಗಿರುತ್ತದೆ. 3:1ರಿಂದ ಆರಂಭವಾಗುವ ಈ ವಿಭಾಗದ ಪರಾಕಾಷ್ಠೆಯು 4:1-13 ಆಗಿರುತ್ತದೆ, ಅದು ಇಬ್ರಿಯರಿಗೆ ಪತ್ರಿಕೆಯ ಪ್ರಥಮ ವಾಚಕರಿಗೆ ಮೋಶೆಗಿಂತಲೂ ಯೇಸುವು ಶ್ರೇಷ್ಠನೆಂಬುದನ್ನು ಒಪ್ಪಿಕೊಂಡು ಯೆಹೂದಿಮತವನ್ನು ಹಿಂದಕ್ಕೆ ಬಿಡುವಂತೆ ಆದೇಶಿಸುತ್ತದೆ.

#### ಇಸ್ರಾಯೇಲ್ಯರ ವಾಗ್ದಾನವು ಕ್ರೈಸ್ತರಿಗೆ ಮುಕ್ತವಾಗಿರುತ್ತದೆ (4:1-13)

ಸಬ್ಬತ್ ವಿಶ್ರಾಂತಿಯ ಕುರಿತು ಮೂರು ಬುದ್ಧಿವಾದಗಳು (4:1-4)

**[1]ಹೀಗಿರಲಾಗಿ ದೇವರ ವಿಶ್ರಾಂತಿಯಲ್ಲಿ ಸೇರಬಹುದೆಂಬ ವಾಗ್ದಾನವು ಇನ್ನೂ ಇರುವಲ್ಲಿ ನಿಮ್ಮೊಳಗೆ ಯಾವನಾದರೂ ಆ ವಾಗ್ದಾನದ ಫಲವನ್ನು ಹೊಂದದೆ ತಪ್ಪುವವನಾದಾನೋ ಎಂದು ನಾವು ಭಯಪಡೋಣ. [2]ಅವರಿಗೆ ಶುಭವರ್ತಮಾನವು ಸಾರೋಣವಾದಂತೆಯೇ ನಮಗೂ ಸಾರೋಣವಾಯಿತು; ಆದರೆ ಆ ಕಾಲದಲ್ಲಿ ಕೇಳಿದವರು ನಂಬದೆ ಹೋದ ಕಾರಣ ಆ ವಾಕ್ಯದಿಂದ ಅವರಿಗೆ ಪ್ರಯೋಜನವಾಗಲಿಲ್ಲ. [3]ದೇವರ ಕೆಲಸಗಳು ಲೋಕಾದಿಯಿಂದ ಮುಗಿದು ಹೋಗಿ [ಆತನ ವಿಶ್ರಾಂತಿಯು ಸಿದ್ಧವಾಗಿದ್ದರೂ] ಆತನು –**

**ನನ್ನ ವಿಶ್ರಾಂತಿಯಲ್ಲಿ ಇವರು ಸೇರುವದೇ ಇಲ್ಲವೆಂದು**
**ಕೋಪಗೊಂಡು ಪ್ರಮಾಣಮಾಡಿದೆನು**

**ಎಂಬದಾಗಿ ಹೇಳಿದನಷ್ಟೆ. ನಂಬಿರುವ ನಾವಾದರೋ ಆ ವಿಶ್ರಾಂತಿಯಲ್ಲಿ ಸೇರುತ್ತಲೇ ಇದ್ದೇವೆ.**

**[4]ಒಂದು ಸ್ಥಳದಲ್ಲಿ ಏಳನೆಯ ದಿವಸವನ್ನು ಕುರಿತು – ದೇವರು ತನ್ನ ಸೃಷ್ಟಿಕಾರ್ಯಗಳನ್ನೆಲ್ಲಾ ಮುಗಿಸಿಬಿಟ್ಟು ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡನೆಂದು ಬರೆದದೆ.**

ನಮ್ಮ ಈಗಿನ ವಾಕ್ಯಭಾಗವಾದ 4:1-4, ವಾಚಕನಿಗೆ ಆತನ ಸಬ್ಬತ್ ವಿಶ್ರಾಂತಿಯ ಕುರಿತು ಮೂರು ಬುದ್ಧಿವಾದಗಳನ್ನು ಕೊಡುತ್ತದೆ. ನಾವು ಅದನ್ನು "ನಮ್ಮ ಸಬ್ಬತ್ ವಿಶ್ರಾಂತಿಯ 'ಪಡೋಣ'" ಎಂದು ಕರೆಯಬಹುದು.

**ವಚನ 1**. 4ನೇ ಅಧ್ಯಾಯವನ್ನು ಆರಂಭಗೊಳಿಸುವ **ಹೀಗಿರಲಾಗಿ** ಎಂಬದು ಈ ಅಧ್ಯಾಯವು 3ನೇ ಅಧ್ಯಾಯದಲ್ಲಿನ ವಾದವನ್ನು ಮುಂದುವರೆಸುತ್ತದೆಂಬುದನ್ನು ತೋರಿಸುತ್ತದೆ. 3:12-19ರ ಎಚ್ಚರಿಕೆಗಳು 4ನೇ ಅಧ್ಯಾಯದಲ್ಲಿರುವ ಯೋಚನೆಗಳೊಂದಿಗೆ ಮುಕ್ತಾಯಗೊಳಿಸಲ್ಪಡುತ್ತವೆ ಮತ್ತು ಅವುಗಳಿಗೆ ವಿರುದ್ಧವಾಗಿರುವದಿಲ್ಲ. **ಭಯಪಡೋಣ** ಎಂಬುದನ್ನು "ನಾವು ದಾರಿ ತಪ್ಪಿಸಲ್ಪಡದಿರೋಣ" ಎಂದಷ್ಟೆ ವಿಕೃತಗೊಳಿಸತಕ್ಕದ್ದಲ್ಲ; ಪರಿಸ್ಥಿತಿಯು ಅದಕ್ಕಿಂತಲೂ ಎಷ್ಟೋ ಹೆಚ್ಚು ಕೆಟ್ಟದ್ದಾಗಿರುತ್ತದೆ.

*ಮೊದಲ ಆದೇಶವು "ಭಯ" ಪಡಬೇಕೆಂದು ವಾಗ್ದಂಡನೆ. ಅದು ವಾಚಕನನ್ನು ಅವನ ಅಥವಾ ಅವಳ ಪರಿಸ್ಥಿತಿಯ ಸ್ವಭಾವಕ್ಕೆ ಒಂದು ಸಮಗ್ರವಾದ ಗೌರವವನ್ನು ಹೊಂದಿರಬೇಕೆಂದು ಬೇಡಿಕೊಳ್ಳುತ್ತದೆ.*

ಇಬ್ರಿಯರಿಗೆ ಪತ್ರಿಕೆಯಲ್ಲಿ "ಭಯ" ಒಂದು ಪ್ರಾಮುಖ್ಯವಾದ ಭಾವನೆಯಾಗಿರುತ್ತದೆ. ದೇವರಿಗೆ ಸಮರ್ಪಕವಾಗಿ ಭಯಪಡುವವನು ನಂಬಿಗಸ್ತನಾಗಿರುವನು ಮತ್ತು **ತನ್ನ ವಿಶ್ರಾಂತಿ**ಯನ್ನು ತಪ್ಪುವವನಾಗಿರುವದಿಲ್ಲ.

1ರಿಂದ 4 ವಚನಗಳ ತನಕ ಇರುವ "ವಿಶ್ರಾಂತಿ" (κατάπαυσις, *katapausis*) ಎಂಬ ಪದವು ಹಲವಾರು ಅರ್ಥಗಳನ್ನು ಹೊಂದಿರುವ ಸಾಧ್ಯತೆಯಿದೆ. ಮೊದಲನೆಯದಾಗಿ, 3ನೇ ವಚನದಲ್ಲಿರುವ ವರ್ತಮಾನಕಾಲರೂಪವು ಇಡೀ ಕ್ರೈಸ್ತ ಯುಗಕ್ಕೆ ಅನ್ವಯವಾಗುವದಾದರೆ, ಅದರ ಅರ್ಥವು "ದೇವರ ಶಾಂತಿ" ಎಂಬಂತಹ ಒಂದು ಅರ್ಥವನ್ನು ಕೊಡಬಲ್ಲದು (ಫಿಲಿಪ್ಪಿ 4:7). ಬೇರೆ ಮಾತುಗಳಲ್ಲಿ ಹೇಳುವದಾದರೆ, ಅದು ವರ್ತಮಾನಕಾಲದ ಸ್ವಾಸ್ಥ್ಯವಾಗಿರುತ್ತದೆ. F. F. Bruceನು ಆ ಯೋಚನೆಯನ್ನು ತಳ್ಳಿಹಾಕುತ್ತಾನೆ, 4:1-3ರಲ್ಲಿ ವಿಶ್ರಾಂತಿಯು "ಮುಂದೆ ಹೊಂದಿಕೊಳ್ಳಬೇಕಾಗಿರುವ ಒಂದು ಸಂಗತಿಯಾಗಿ ಇರುವದಾಗಿರುತ್ತದೆ," ವರ್ತಮಾನಕಾಲರೂಪವು "(ಆ) ವಿಶ್ರಾಂತಿಯಲ್ಲಿ ಪ್ರವೇಶಿಸುವದು ನಂಬುವವರಾದ ನಮಗಾಗಿ ಇರುವದು" ಎಂಬುದನ್ನು ಸೂಚಿಸುತ್ತದೆಂದು ಹೇಳುತ್ತಾನೆ.[1] ಎರಡನೆಯದಾಗಿ, ಅದು ಆರು ದಿನಗಳ ಸೃಷ್ಟಿಯ ಕಾರ್ಯದ ಬಳಿಕ ದೇವರು ಹೊಂದಿದ ವಿಶ್ರಾಂತಿಯನ್ನು ಸೂಚಿಸಬಹುದಾಗಿದೆ. ಮೂರನೆಯದಾಗಿ, ಅದು ಇಸ್ರಾಯೇಲ್ಯರ ವಾಗ್ದಾನ ದೇಶಕ್ಕೆ ಬಳಸಲ್ಪಟ್ಟಿದೆ. ನಾವು 3 ನೇ ವಚನದಲ್ಲಿ "ನನ್ನ ವಿಶ್ರಾಂತಿ" ಎಂದು ಓದುತ್ತೇವೆ, ಅದು ಕೀರ್ತನೆ 95:11ರಿಂದ ತೆಗೆದುಕೊಳ್ಳಲಾಗಿರುವ ಪದಗುಚ್ಛವಾಗಿದೆ. ಇಲ್ಲಿ, "ನನ್ನ ವಿಶ್ರಾಂತಿ" ಎಂಬುದು ದೇವರು ತನ್ನ ಸೃಷ್ಟಿಯ ಕಾರ್ಯವನ್ನು ಪೂರ್ತಿಗೊಳಿಸಿದ ನಂತರ ಹೊಂದಿದ ವಿಶ್ರಾಂತಿಯನ್ನು (ಆದಿಕಾಂಡ 2:2), ಮತ್ತು ವಾಗ್ದಾನ ದೇಶ ಎರಡನ್ನೂ ಸೂಚಿಸುವದಾಗಿದೆ. ನಾಲ್ಕನೆಯದಾಗಿ, ಈ ಪದಗಳ ಬಳಕೆಯನ್ನು ದಾಟಿ, ಇನ್ನೂ ಇರುವಂಥ ಒಂದು **ವಿಶ್ರಾಂತಿ** ಇರುತ್ತದೆ.[2] ಉಳಿದಿರುವಂಥ ಆ ವಿಶ್ರಾಂತಿಯು ಕ್ರೈಸ್ತ ಯುಗದ ನೀತಿಯುಳ್ಳ ನಂಬಿಗಸ್ತರಿಗಾಗಿ ಇರುವದಾಗಿದೆ.

ಆದಿಕಾಂಡದಲ್ಲಿ ಏಳನೆಯ ದಿನಕ್ಕೆ ಯಾವದೇ ಸಾಯಂಕಾಲವು ಪ್ರಸ್ತಾಪಿಸಲ್ಪಟ್ಟಿಲ್ಲವಾದ್ದರಿಂದ ದೇವರ ವಿಶ್ರಾಂತಿಯು ಇಂದಿನ ತನಕ ಮುಂದುವರೆದಿರುತ್ತದೆಂದು ಕೆಲವು

ರಬ್ಬಿಗಳು ನಂಬುತ್ತಾರೆ.[3] ದೇವರು ಪ್ರತಿ ಸಬ್ಬತ್ ದಿನದಂದು ವಿಶ್ರಮಿಸಿಕೊಂಡನು ಎಂದು ಇನ್ನು ಕೆಲವರು ನಂಬುತ್ತಾರೆ.[4] ಹೀಗೆ "ವಿಶ್ರಾಂತಿಯ ದಿನ"ಕ್ಕೆ ಯಾವ ಅಂತ್ಯವೂ ಇರಲಿಲ್ಲ. ಇಬ್ರಿಯರಿಗೆ ಪತ್ರಿಕೆಯ ಲೇಖಕನ ಕಳಕಳಿಯು ನಾಲ್ಕನೆಯ "ವಿಶ್ರಾಂತಿ" ಭಾವನೆ ಯಾಗಿತ್ತು – ಅದು ಪರಲೋಕದ ನಿತ್ಯವಾದ ವಿಶ್ರಾಂತಿ. ಈ "ವಿಶ್ರಾಂತಿ"ಯ ಬಗ್ಗೆಯೇ ಪತ್ರಿಕೆಯು ಪ್ರಾಥಮಿಕವಾಗಿ ಒತ್ತಿ ಹೇಳುತ್ತದೆ.

1ನೇ ವಚನದಲ್ಲಿನ "ಆತನ ವಿಶ್ರಾಂತಿ"ಯು ದೇವರು ತನ್ನ ದೇವಜನರಿಗೋಸ್ಕರ ಸಿದ್ಧಪಡಿಸಿರುವ ಬಹುಮಾನ, ಪರಲೋಕದ ವಿಶ್ರಾಂತಿ ಆಗಿರುತ್ತದೆ. ಅಷ್ಟುಮಾತ್ರವಲ್ಲದೆ, ಕ್ರೈಸ್ತರು ವಾಸ್ತವಿಕದಲ್ಲಿ ಈಗ ದೇವರ ವಿಶ್ರಾಂತಿಯಲ್ಲಿ ಪ್ರವೇಶಿಸಬಲ್ಲರು. "ಇದು ಕೇವಲ ದೇವರಿಂದ ಕೊಡಲ್ಪಟ್ಟಿರುವ ವಿಶ್ರಾಂತಿಷ್ಟೆ ಅಲ್ಲ; ಅದು ಆತನು ತನ್ನ ವಿಮೋಚಿಸಲ್ಪಟ್ಟವರ ಸಂಗಡ ಹಂಚಿಕೊಳ್ಳುವಂತಹ ದೇವರ ಸ್ವಂತ ವಿಶ್ರಾಂತಿಯಾಗಿರುತ್ತದೆ."[5] ನಾವು ಈಗ ವಿಶ್ರಾಂತಿಯ ಭರವಸೆಯನ್ನು ಹೊಂದಿದ್ದೇವೆ (ಮತ್ತಾಯ 11:28-30), ಅದನ್ನು "ದೇವರ ಶಾಂತಿ" ಎಂದು ಕರೆಯಬಹುದು (ಫಿಲಿಪ್ಪಿ 4:7) ಮತ್ತು ನಿತ್ಯವಾಗಿ (ಪ್ರಕಟನೆ 14:13) ಎಂದು ಕರೆಯಬಹುದು. ಹಳೆಯ ಒಡಂಬಡಿಕೆಯ ಇಸ್ರಾಯೇಲ್ಯರು ಪ್ರವೇಶಿಸಿದ ವಿಶ್ರಾಂತಿಯು ದೇವರ ನಿತ್ಯವಾದ ವಿಶ್ರಾಂತಿಯ ಛಾಯೆ ಮಾತ್ರವೇ ಆಗಿತ್ತು.

ಐಗುಪ್ತದಿಂದ ಹೊರಟ ಬಹುಪಾಲು ಇಸ್ರಾಯೇಲ್ಯರಿಗೆ ಏನು ಸಂಭವಿಸಿತೆಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡು – ಅಂದರೆ ಅವರು ವಾಗ್ದಾನ ಮಾಡಲ್ಪಟ್ಟ ವಿಶ್ರಾಂತಿಯಲ್ಲಿ ಪ್ರವೇಶಿಸುವದಕ್ಕೆ ವಿಫಲರಾಗಿದ್ದು – ನಾವು ಭಯ ಪಡತಕ್ಕದ್ದು. ಈ ಬುದ್ಧಿವಾದಗಳಿಗೆ ಏನಾದರೂ ನಿಜವಾದ ಅರ್ಥವು ಇರುವಂತಾಗಬೇಕೆಂದರೆ, ನಾವು ಅದರಿಂದ ತಪ್ಪಿಹೋಗುವ ಮತ್ತು ದೇವರ ಕೃಪೆಯನ್ನು ಕಳೆದುಕೊಳ್ಳುವ ಸಾಧ್ಯತೆಯನ್ನು ಒಪ್ಪಿಕೊಳ್ಳತಕ್ಕದ್ದು. ಇಸ್ರಾಯೇಲ್ಯರ ಒಂದು ಪೀಳಿಗೆಯು ಕಾನಾನ್ ದೇಶವನ್ನು ಪ್ರವೇಶಿಸುವದಕ್ಕೆ ವಿಫಲವಾಯಿತು. ಕ್ರೈಸ್ತರು ದೇವರ ನಿತ್ಯವಾದ "ವಿಶ್ರಾಂತಿ"ಯನ್ನು ಕಳೆದುಕೊಳ್ಳುವ ಯಾವದೇ ನಿಜವಾದ ಅಪಾಯವನ್ನು ಎದುರಿಸುತ್ತಿಲ್ಲವಾದರೆ, ಪ್ರೇರಿತ ಲೇಖಕನಿಂದ ಈ ಎಚ್ಚರಿಕೆಯ ಮಾತಿನ ಅಗತ್ಯತೆಯು ಇರುವದಿಲ್ಲ.

ಪ್ರತಿಯೊಬ್ಬ ಕ್ರೈಸ್ತನು ತನ್ನ ಪ್ರಾಥಮಿಕ ಗುರಿಯು ದೇವರ ವಿಶ್ರಾಂತಿಯಲ್ಲಿ ಪ್ರವೇಶಿಸುವದೇ ಆಗಿದೆಯೋ ಎಂಬುದನ್ನು ನಿರಂತರವಾಗಿ ಪರೀಕ್ಷಿಸಿಕೊಳ್ಳತಕ್ಕದ್ದು (2 ಕೊರಿಂಥ 13:5). ಗತಕಾಲದಿಂದ ಕಲಿತುಕೊಳ್ಳುವದು, ವಿಶೇಷವಾಗಿ ದೇವರು ತನ್ನ ಜನರೊಂದಿಗೆ ನಡೆದುಕೊಂಡ ರೀತಿಯ ಬಗ್ಗೆ ಕಲಿತುಕೊಳ್ಳುವದು ಅತ್ಯಂತ ಸಹಾಯಕಾರಿ ಆಗುತ್ತದೆ.[6] ಇಸ್ರಾಯೇಲ್ಯರು ದೇವರೊಂದಿಗೆ ಹೊಂದಿದ್ದ ಸಂಬಂಧದಲ್ಲಿ, ಭರವಸವಿಡುವ ನಂಬಿಕೆಯ ಕೊರತೆಯು ಎಷ್ಟೊಂದು ನಿರ್ಣಾಯಕವೆಂದು ಸಾಭಿತುಗೊಂಡಿತೆಂದರೆ ಅವರು ತಪ್ಪಿಹೋದರು ಮತ್ತು ನಾಶಗೊಂಡರು. ನಾವು ಸಹ ಹಾಗೆಯೇ ಮಾಡಬಲ್ಲೆವು ಎಂಬುದನ್ನು ಆ ವಾಸ್ತವಾಂಶವು ಸಾಭಿತುಪಡಿಸತಕ್ಕದ್ದು. 1 ಕೊರಿಂಥ 10:1-13ರಲ್ಲಿ ಪೌಲನ ಯೋಚನೆಯು ಅಂತಹದ್ದೇ ಆಗಿತ್ತು. ನಾವು ಅಂತಿಮ ಮುಕ್ತಾಯವನ್ನು ಕಳಕಳಿ ಮತ್ತು ದೃಢನಿರ್ಧಾರದೊಂದಿಗೆ ಅಂಗೀಕರಿಸಿಕೊಳ್ಳಬೇಕು: "ಆದಕಾರಣ ನಿಂತಿದ್ದೇನೆಂದು ನೆನಸುವವನು ಬೀಳದಂತೆ ಎಚ್ಚರಿಕೆಯಾಗಿರಲಿ" (ವ. 12). ಆತನ ಪರಿಭಾಷೆಯನ್ನು ಒಂದು ತಾರ್ಕಿಕ ಮುಕ್ತಾಯಕ್ಕೆ ಕೊಂಡೊಯ್ಯುವದಾದರೆ, ಇಸ್ರಾಯೇಲ್ಯರಿಗೆ ಅರಣ್ಯದಲ್ಲಿ ಶಾರೀರಿಕವಾಗಿ ಏನು ಸಂಭವಿಸಿತೋ ಅದು ನಮಗೆ ಆತ್ಮೀಕವಾಗಿ ಸಂಭವಿಸಬಲ್ಲದು ಎಂಬದೇ. ಬೇರೆ ಮಾತುಗಳಲ್ಲಿ ಹೇಳುವದಾದರೆ, ನಮ್ಮ ನಂಬಿಕೆಯು ಮುಗ್ಗರಿಸುವಾಗ ನಾವು ಪರಲೋಕದ ಮೇಲಿನ ನಮ್ಮ ಹಿಡಿತವನ್ನು

ಕಳಕೊಳ್ಳುವೆವು.

ಐಗುಪ್ತವನ್ನು ಬಿಟ್ಟು ಹೊರಟ ಬಳಿಕ, ಅಬ್ರಹಾಮನ ಸಂತತಿಯವರು ನೇರವಾಗಿ ವಾಗ್ದಾನ ದೇಶಕ್ಕೆ ಹೋಗಲಿಲ್ಲ. ಅವರು ಸಾಲು ಸಾಲಾದ ಪರೀಕ್ಷೆಗಳಿಗೋಸ್ಕರ ಅರಣ್ಯದೊಳಗೆ ನಡಿಸಲ್ಪಟ್ಟರು, ಮತ್ತು ಅವರು ಆ ಬಹುಪಾಲು ಪರೀಕ್ಷೆಗಳಲ್ಲಿ ಅನುತ್ತೀರ್ಣರಾದರು. ಅದೇ ರೀತಿಯಲ್ಲಿಯೇ, ನಾವು ನಮ್ಮ ಪರಲೋಕದ ವಿಶ್ರಾಂತಿಯೊಳಗೆ ತಕ್ಷಣವೇ ಹೋಗುವದಿಲ್ಲ. ಈ ಜೀವನದಲ್ಲಿ ಅರಣ್ಯದಂತಹ ಒಂದು ಸಾಮಾಜಿಕ ಜಗತ್ತಿನ ಮೂಲಕವಾಗಿ ಹಾದು ಹೋಗುವಂತೆ ಒತ್ತಾಯಿಸಲ್ಪಡುತ್ತೇವೆ, ಅದರಲ್ಲಿ ಅನೇಕರು ಕ್ರಿಸ್ತನಿಂದ ದೂರವಾಗಿ ಕಳೆದುಹೋಗಿರುತ್ತಾರೆ.

ಕ್ರಿಸ್ತನು ಹೊರಟು ಹೋಗಿ ಕೇವಲ ಮೂವತ್ತು ವರ್ಷಗಳ ವೇಳೆಯಲ್ಲಿ ಈ ಇಬ್ರಿಯರು ಬಳಲಿದವರಾಗುತ್ತಿದ್ದರೆ, ಎರಡು ಸಾವಿರ ವರ್ಷಗಳ ಬಳಿಕ ಕ್ರೈಸ್ತರು ವಿಶ್ರಾಂತಿಯನ್ನು ಹುಡುಕುವದರಲ್ಲಿ ಬಳಲಿ ಹೋಗಬಹುದೆಂಬುದು ಸ್ಪಷ್ಟವಾಗುತ್ತದೆ. ಒಬ್ಬನು ನಿರಾಶನಾಗಬಹುದು, ಉಗುರುಬೆಚ್ಚಗಾಗಬಹುದು, ಮತ್ತು ದೇವರ ನಿತ್ಯವಾದ ವಾಗ್ದಾನಗಳನ್ನು ತಪ್ಪಿಸಿಕೊಳ್ಳಬಹುದು. ಲವೊದಿಕೀಯದವರು ಉಗುರುಬೆಚ್ಚಗೆ ಆದರು ಮತ್ತು ರಕ್ಷಕನು ಅವರನ್ನು ಇನ್ನೇನು ಬಾಯೊಳಗಿಂದ "ಕಾರಲಿದ್ದನು" (ಪ್ರಕಟನೆ 3:14-16). ಅಬ್ರಹಾಮ ಮತ್ತು ಹಳೆಯ ಒಡಂಬಡಿಕೆಯ ಇತರ ಸೇವಕರು ವಾಗ್ದಾನಗಳ ನೆರವೇರಿಕೆಯಲ್ಲಿ ಅವರಿಗೆ ಏನು ಕೊಡಲ್ಪಡುವದೆಂಬುದನ್ನು ಸಂಪೂರ್ಣವಾಗಿ ತಿಳಿದವರಾಗಿರಲಿಲ್ಲ. ಹಾಗಿದ್ದರೂ, ಇವರೆಲ್ಲರೂ "ಅವುಗಳನ್ನು ದೂರದಿಂದ ನೋಡಿ ಉಲ್ಲಾಸದೊಡನೆ ವಂದಿಸಿ" ನಂಬಿಗಸ್ತರಾಗಿ ಉಳಿದರು (ಇಬ್ರಿಯ 11:13).

ಪತ್ರಿಕೆಯನ್ನು ಸ್ವೀಕರಿಸಿದವರಲ್ಲಿ ಯಾರೇ ಆಗಲಿ **ಅದನ್ನು ಹೊಂದದೆ ತಪ್ಪುವವನಾದನೋ** ಎಂಬುದು ಸೂಚಿಸುವದೇನೆಂದರೆ ಕೆಲವರು ತಪ್ಪುವವರಾಗುವ ಸಾಧ್ಯತೆಯ ಸಂಶಯವನ್ನು ವ್ಯಕ್ತಪಡಿಸುತ್ತದೆ. ಹಾಗಿರುವದು ನಿಜವಾದಲ್ಲಿ, ಎಚ್ಚರಿಸುವ ಯಾವ ಅಗತ್ಯವೂ ಇರುತ್ತಿರಲಿಲ್ಲ. NIVಯಲ್ಲಿ "ನಿಮ್ಮಲ್ಲಿ ಯಾವನೂ ಅದನ್ನು ತಪ್ಪಿಸಿಕೊಳ್ಳುವವನಾಗಿ ಕಾಣಲ್ಪಡದಂತೆ ಜಾಗ್ರತೆ ವಹಿಸಿರಿ" ಎಂದಿರುತ್ತದೆ. ಈ ವಾಕ್ಯಭಾಗದ ಸರಿಯಾದ ಅಭಿಪ್ರಾಯವೇನೆಂದರೆ "ಸೋಲಿನ ಕಾಣಿಸಿಕೊಳ್ಳುವಿಕೆಗಿಂತಲೂ ಖಚಿತವಾಗಿ ಬರುವ ನ್ಯಾಯತೀರ್ಪಿನ ತಿಳುವಳಿಕೆಯು ಭಯಪಡುವದಕ್ಕೆ ದೊಡ್ಡ ಕಾರಣವಾಗಿರುತ್ತದೆ."[7] 4ನೇ ಅಧ್ಯಾಯವನ್ನು ಅರಂಭಿಸುವ "ಹೀಗಿರಲಾಗಿ" ಎಂಬುದು ಈ ಅಧ್ಯಾಯವು 3ನೇ ಅಧ್ಯಾಯದ ವಾದವನ್ನು ಮುಂದುವರೆಸುತ್ತದೆಂಬುದನ್ನು ತೋರಿಸುತ್ತದೆ. 3:12-19ರಲ್ಲಿನ ಎಚ್ಚರಿಕೆಗಳು ಅಧ್ಯಾಯ 4ರಲ್ಲಿನ ಯೋಚನೆಗಳೊಂದಿಗೆ ಮುಕ್ತಾಯಗೊಳಿಸಲ್ಪಡುತ್ತವೆ. 1ನೇ ವಚನದಲ್ಲಿನ "ಭಯಪಡೋಣ" ಎಂಬುದನ್ನು "ನಾವು ದಾರಿ ತಪ್ಪಿಸಲ್ಪಡದಿರೋಣ" ಎಂಬುದಾಗಿ ವಿಕೃತಗೊಳಿಸಲ್ಪಡತಕ್ಕದ್ದಲ್ಲ. ದೇವರ ಸಿಂಹಾಸನದ ಮುಂದೆ ನಿಂತುಕೊಂಡು ನಾವು ದೇವರ ವಿಶ್ರಾಂತಿಯನ್ನು ತಪ್ಪಿಸಿಕೊಂಡಿದ್ದೇವೆಂಬುದನ್ನು ಗ್ರಹಿಸಿಕೊಳ್ಳುವದು ಎಷ್ಟು ದುರಂತಕರವಾದದ್ದು! ನಿಶ್ಚಯವಿರಲಿ, ನಾವೆಲ್ಲರೂ "ಕ್ರಿಸ್ತನ ನ್ಯಾಯಾಸನದ ಮುಂದೆ" ನಿಂತುಕೊಳ್ಳುವೆವು (2 ಕೊರಿಂಥ 5:10).

**ವಚನ 2.** *ಎರಡನೆಯ ಆದೇಶವು ನಮಗೆ ಕೊಡಲ್ಪಟ್ಟಿರುವ ವಾಕ್ಯಕ್ಕೆ ಕಿವಿಗೊಟ್ಟು ಅದರ ಪ್ರಕಾರ ಜೀವಿಸುವದು.* ನಮಗೆ ಸಂದೇಶವೊಂದು ಸಾರಲ್ಪಟ್ಟಿರುತ್ತದೆ, ಮತ್ತು ಅದನ್ನು ಸ್ವೀಕರಿಸಿಕೊಂಡು ಅದಕ್ಕೆ ವಿಧೇಯರಾಗುವದಕ್ಕೆ ಜಾಗ್ರತೆ ವಹಿಸಬೇಕು.

ಲೇಖಕನು **ನಮಗೆ ಶುಭವರ್ತಮಾನವು ಸಾರೋಣವಾಯಿತು** ಎಂದು ಹೇಳುತ್ತಾನೆ. KJVಯಲ್ಲಿ "ನಮಗೋಸ್ಕರ ಸುವಾರ್ತೆಯ ಸಾರಲ್ಪಟ್ಟಿತು" ಎಂದಿರುತ್ತದೆ. "gospel" (ಸುವಾರ್ತೆ) ಎಂಬ ಪದವು ಹಳೆಯ Anglo-Saxonನ "God's spel" (ದೇವರ – ಉಕ್ತಿ),

ಅಥವಾ "ದೇವರ ವಾಕ್ಯ" ಎಂದಾಗಿರುತ್ತದೆ. ಮೂಲ ಪದವು εὐαγγελίζω (*euangelizō*) ಎಂಬದರಿಂದ ತೆಗೆದುಕೊಳ್ಳಲ್ಪಟ್ಟಿದೆ, ಅದರರ್ಥವು "ಶುಭವಾರ್ತೆ" ಅಥವಾ "ಸಂತೋಷದ ಸುದ್ದಿಗಳ" ಸಾರಲ್ಪಡುವಿಕೆ ಎಂದಾಗಿರುತ್ತದೆ. ಇದು ಮನುಷ್ಯರಿಗೆ ದೇವರ ಪ್ರಕಟನೆಯನ್ನು ಸೂಚಿಸಿ ಹೇಳುವ ಹೊಸ ಒಡಂಬಡಿಕೆಯ ನೆಚ್ಚಿನ ಪದವಾಗಿರುತ್ತದೆ. ಈ ಅರ್ಥದಲ್ಲಿ "ಸುವಾರ್ತೆ"ಯು ಹಳೆಯ ಒಡಂಬಡಿಕೆಯ ಜನರಿಗೆ ಸಾರಲ್ಪಟ್ಟಿತು ಎಂದು ಹೇಳಬಹುದು, ಆದರೂ ಅವರ "ಶುಭವರ್ತಮಾನ"ವು ಭೂಲೋಕದ ವಿಶ್ರಾಂತಿಯನ್ನು ಒಳಗೊಂಡಿತ್ತು. ಹೊಸ ಒಡಂಬಡಿಕೆಯ "ಸುವಾರ್ತೆಯು" ಸಂಪೂರ್ಣ ವ್ಯತ್ಯಾಸವಾದ ಸ್ವಭಾವದ್ದಾಗಿದೆಯಾದರೂ, ಎರಡಕ್ಕೂ ಒಂದೇ ಪದವು ಬಳಸಲ್ಪಟ್ಟಿದೆ. ಇದರರ್ಥವು ಹಳೆಯ ಒಡಂಬಡಿಕೆಯಿಂದ ಹೊಸ ಒಡಂಬಡಿಕೆಯೊಳಗೆ ಮುಂದುವರೆದ ಒಂದೇ ಒಡಂಬಡಿಕೆಯಿದೆ ಎಂದಾಗಿರುವದಿಲ್ಲ.

ಪದಗುಚ್ಛದ ಅಕ್ಷರಶಃ ಅನುವಾದವು "ಅವರಿಗೆ ಮಾತ್ರವಲ್ಲದೆ ನಮಗೂ ಸುವಾರ್ತೆಯು ಸಾರೋಣವಾಯಿತು" ಎಂದಾಗಿರುತ್ತದೆ. 1 ಕೊರಿಂಥ 10:3, 4ರಲ್ಲಿ ಅದನ್ನು ಹೋಲುವಂತಹ ಭಾವನೆಯು ಕಂಡು ಬರುತ್ತದೆ, ಅದು ಹೀಗೆ ಹೇಳುತ್ತದೆ, "ಅವರೆಲ್ಲರೂ ದೈವಿಕವಾದ ಒಂದೇ ಆಹಾರವನ್ನು ತಿಂದರು; ಅವರೆಲ್ಲರೂ ದೈವಿಕವಾದ ಒಂದೇ ನೀರನ್ನು ಕುಡಿದರು; ಹೇಗಂದರೆ ಅವರ ಹಿಂದೆ ಹೋಗುತ್ತಿದ್ದ ದೈವಿಕವಾದ ಬಂಡೆಯೊಳಗಿಂದ ಬಂದ ನೀರನ್ನು ಕುಡಿಯುತ್ತಿದ್ದರು; ಆ ಬಂಡೆ ಕ್ರಿಸ್ತನೇ." ಖಂಡಿತವಾಗಿಯೂ, ಕೆಲವೊಂದು ಮೂಲಭೂತ ಅಂಶಗಳು ಒಂದೇ ಆಗಿರುತ್ತವೆ – ಇಸ್ರಾಯೇಲ್ಯರಿಗೂ ಕ್ರೈಸ್ತರಿಗೂ ಒಬ್ಬ ರಕ್ಷಕನ ಅಗತ್ಯವಿದೆ ಮತ್ತು ಆತನ ಮೇಲೆ ಮಾತ್ರವೇ ಅವಲಂಭಿತರಾಗಬೇಕು ಎಂಬುದು ಒಂದೇ ಆಗಿರುತ್ತದೆ. ಒಂದರ ಕೊಡುಗೆಯು ಒಂದು ತತ್ಕಾಲಿಕ ದೇಶವಾಗಿತ್ತು, ಆದರೆ ಇನ್ನೊಂದರ ಕೊಡುಗೆಯು ನಿತ್ಯಜೀವವಾಗಿದೆ.

"ಸುವಾರ್ತೆ ಸಾರಲ್ಪಡುವ" ಯೋಚನೆಯು ಸುವಾರ್ತೆಯಿಂದ ಕೆಲವು ಮಾತ್ರವೇ ಪರಿವರ್ತನೆಗೊಂಡಿದ್ದಾಗ್ಯೂ, ಒಂದು ಪಟ್ಟಣ ಅಥವಾ ಪ್ರಾಂತ್ಯವು ಸುವಾರ್ತೆ ಸಾರಲ್ಪಡುವದನ್ನು ಕೇಳಿಸಿಕೊಂಡಿದೆ ಎಂಬುದನ್ನು ಸೂಚಿಸುತ್ತದೆ. ಒಂದು ಪ್ರಾಂತ್ಯವು ಸುವಾರ್ತೆ ಸಾರಲ್ಪಟ್ಟದ್ದಾಗಿದೆ ಎಂದು ಅರ್ಹತೆಯನ್ನು ಪಡೆಯುವದಕ್ಕೆ ಇಂತಿಷ್ಟು ಶೇಕಡವಾರು ಜನರು ಪರಿವರ್ತೆಗೊಂಡಿರಬೇಕೆಂಬ ಅಗತ್ಯತೆಯಿಲ್ಲ. ಬದಲಾಗಿ, ಸುವಾರ್ತೆಯು ಜನರಿಗೆ ಲಭ್ಯಗೊಳಿಸಲ್ಪಟ್ಟಿರಬೇಕು.[8]

ಇಸ್ರಾಯೇಲ್ಯರು ಸಂದೇಶವನ್ನು ಬಹಳ ಮಟ್ಟಿಗೆ ತಿರಸ್ಕರಿಸಿದ್ದರಿಂದ, ಅದರಿಂದ **ಅವರಿಗೆ ಪ್ರಯೋಜನವಾಗಲಿಲ್ಲ**. ಈ ನಿರ್ಧಾರಕ್ಕೆ ಬರಲು ಕಾರಣವೇನೆಂಬುದನ್ನು ಲೇಖಕನು ಮುಂದಿಡುತ್ತಾ **ಕೇಳಿದವರು ನಂಬದೆ ಹೋದ ಕಾರಣ** ಎಂದು ಹೇಳುತ್ತಾನೆ.[9] ಕೇಳುವವರು ಕೇಳಲ್ಪಟ್ಟ ಸಂದೇಶದೊಂದಿಗೆ ನಂಬಿಕೆಯನ್ನು ಸೇರಿಸಿಕೊಳ್ಳಲಿಲ್ಲ, ಅದು ಅವರ ಜವಾಬ್ದಾರಿಯಾಗಿತ್ತು. ಈ ವಚನವು ನಮ್ಮ ನಂಬಿಕೆಯು ದೇವರಿಂದ ಬರುವ ವರವಾಗಿದೆ ಮತ್ತು ನಮ್ಮ ಸ್ವಂತ ಮಾನಸಿಕ ಪ್ರಯತ್ನದ ಫಲಿತವಲ್ಲ ಎಂಬ ಯೋಚನೆಯನ್ನು ಅಳಿಸಿ ಹಾಕುತ್ತದೆ.

ಅರಣ್ಯಕಾಂಡ 14:26-34 ವಚನಗಳು ಯೆಹೋಶುವ ಹಾಗೂ ಕಾಲೇಬರು ತಮ್ಮ ತೀರ್ಮಾನವನ್ನು ನಂಬಿಕೆಯ ಮೇಲೆ ಆಧಾರಗೊಳಿಸಿದ್ದರ ಕಾರಣದಿಂದ ಜನರು ಬಂಡಾಯವೆದ್ದು ಅವರಿಗೆ ಕಲ್ಲೆಸೆಯುವ ಬೆದರಿಕೆಯನ್ನೊಡ್ಡಿದ ಕಥೆಯನ್ನು ತಿಳಿಸುತ್ತವೆ. ಹಾಗಾದರೆ, ದೇವರು ಇಪ್ಪತ್ತು ವರ್ಷದೊಳಗಿನವರನ್ನು ಉಳಿಸುತ್ತೇನೆಂದು ಏಕೆ ವಾಗ್ದಾನ ಮಾಡಿದನು? ಆತನು ಹಿರಿಯ ಪೀಳಿಗೆಯವರಿಗಿಂತಲೂ ಯುವ ಪೀಳಿಗೆಯಲ್ಲಿ ಹೆಚ್ಚು ನಂಬಿಕೆಯನ್ನು (ಅಥವಾ ಸಂಭಾವ್ಯವಾದ ನಂಬಿಕೆಯನ್ನು) ಕಂಡದ್ದರಿಂದ ಅವರನ್ನು ಯೆಹೋಶುವ ಹಾಗೂ ಕಾಲೇಬರ ಸಂಗಡ ಪ್ರವೇಶಿಸುವಂತೆ ಅನುಮತಿಸಿದನೋ? ಒಬ್ಬನು

ದೇವರ ವಾಕ್ಯವನ್ನು ಕೇಳಿಸಿಕೊಳ್ಳಬೇಕು ಮತ್ತು ನಂತರ ಆತನು ಸಮರ್ಪಕವಾಗಿ ಅದರೊಂದಿಗೆ ನಂಬಿಕೆಯನ್ನು ಸಂಯೋಜನೆಗೊಳಿಸುವ ಮುನ್ನ ಅದರಂತೆ ನಡೆದುಕೊಳ್ಳುವಷ್ಟರ ಮಟ್ಟಿಗೆ ಅದರಲ್ಲಿ ವಿಶ್ವಾಸವನ್ನು ತೋರಬೇಕು. ಈ ವಾಕ್ಯಭಾಗದಿಂದ, ಜಾಗತಿಕ ರಕ್ಷಣೆಯ ಸಿದ್ಧಾಂತವು ಬೈಬಲಾಧಾರಿತವಲ್ಲ ಎಂಬುದನ್ನು ತಿಳಿಯುತ್ತೇವೆ.

ಇಂದು ಅನೇಕರು ಸುವಾರ್ತೆಯನ್ನು ಆಲಿಸುತ್ತಾರೆ ಮತ್ತು ಸಭೆಯ ಆರಾಧನೆಗಳಿಗೆ ಹಾಜರಾಗುತ್ತಾರೆ, ಆದಾಗ್ಯೂ ಅವರು ಸುವಾರ್ತೆಗೆ ಎಂದಿಗೂ ವಿಧೇಯತೆಯುಳ್ಳವರಾಗಿರುವದಿಲ್ಲ ಮತ್ತು ಆ ಕಾರಣದಿಂದ ಅದರಿಂದ ಪ್ರಯೋಜನವನ್ನು ಹೊಂದುವದಿಲ್ಲ. ಒಬ್ಬನು ತನ್ನ ಮುಂದಿಟ್ಟಿರುವ ಮೃಷ್ಟಾನ್ನ ಭೋಜನವನ್ನು ತಿನ್ನದೆ ಕ್ರಮೇಣದಲ್ಲಿ ಹಸಿವೆಯಿಂದ ಬಳಲಿ ಸತ್ತು ಹೋಗುವದು ಎಂಥ ಒಂದು ದುರಂತ! ಸುವಾರ್ತೆಯ ಸಂದೇಶದ ಔತಣದಲ್ಲಿ ತಿನ್ನುವ ಸದವಕಾಶಗಳನ್ನು ಹೊಂದಿರುವದು ಆದರೆ ಒಬ್ಬನ ಆತ್ಮಕ್ಕೆ ಕಸವನ್ನು ತಿನ್ನಿಸುವದು ನಿಜಕ್ಕೂ ದುರಂತವೇ ಸರಿ. ಕೇಳಿಸಿಕೊಂಡ ಸುವಾರ್ತೆಗೆ ನಂಬಿಕೆಯನ್ನು ಸೃಷ್ಟಿಸುವ ಶಕ್ತಿಯಿರುತ್ತದೆ; ಮತ್ತು ಅದರಂತೆ ಕ್ರಿಯೆ ಮಾಡಿದಾಗ ಅದು ರಕ್ಷಣೆಯನ್ನು ಉಂಟು ಮಾಡುತ್ತದೆ (ರೋಮಾ 10:17; 6:17, 18).

**ವಚನ 3.** *ಮೂರನೆಯ ಆದೇಶವು ನಂಬಿಕೆಯಲ್ಲಿ ಮುಂದುವರೆಯಿರಿ ಎಂಬುದು.* ಕ್ರೈಸ್ತ ನಡೆಯು ನಮ್ಮ ಕರ್ತನಲ್ಲಿ ಮತ್ತು ನಮಗೆ ಆತನು ನೀಡಿರುವ ಸಂದೇಶದಿಂದ ಸ್ಪೂರ್ತಿ ಹೊಂದಿರುತ್ತದೆ ಮತ್ತು ನಿರಂತರವಾಗಿ ಬೆಳೆಯುತ್ತದೆ.

1ನೇ ವಚನವು ನಮಗೆ ವಾಗ್ದಾನ ಮಾಡಲ್ಪಟ್ಟಿರುವ ವಿಶ್ರಾಂತಿ, ಅಂದರೆ ದೇವರ ವಿಶ್ರಾಂತಿಯ ಕುರಿತು ಮಾತಾಡುತ್ತದೆ. 2ನೇ ವಚನದಲ್ಲಿ ಆ ವಿಶ್ರಾಂತಿಯ ಶುಭವರ್ತಮಾನವು ಅರಣ್ಯದಲ್ಲಿ ಇಸ್ರಾಯೇಲ್ಯರಿಗೆ ಮತ್ತು ನಮಗೆ ಸಾರಲ್ಪಟ್ಟಿತೆಂದು ಹೇಳಲಾಗಿರುತ್ತದೆ. ಮನುಷ್ಯನು ತನ್ನ ವಿಶ್ರಾಂತಿಯಲ್ಲಿ ಪ್ರವೇಶಿಸಬೇಕು ಮತ್ತು ಆನಂದಿಸಬೇಕು ಎಂಬುದು ದೇವರ ಬಯಕೆಯಾಗಿದ್ದಿರಬೇಕು, ಇಲ್ಲವಾದರೆ ಆತನು ಅದನ್ನು ಸಿದ್ಧಗೊಳಿಸಿರುತ್ತಿರಲಿಲ್ಲ ಅಥವಾ ಅದರೊಳಗೆ ಪ್ರವೇಶಿಸುವಂತೆ ಜನರನ್ನು ಬೇಡಿಕೊಂಡಿರುತ್ತಿರಲಿಲ್ಲ. 3ನೇ ವಚನವು, ಎಲ್ಲಾ ಜನರು, ನಂಬಿಗಸ್ತರಾಗಿರುವದಾದರೆ ವಾಸ್ತವದಲ್ಲಿ **ವಿಶ್ರಾಂತಿಯನ್ನು ಸೇರುವರು** ಎಂಬುದರ ಘೋಷಣೆಯಾಗಿರುತ್ತದೆ. **ನಂಬಿರು**ವ ಎಂಬುದು ಭೂತಕಾಲರೂಪದಲ್ಲಿರುತ್ತದೆ; ಆದರೆ "ಸೇರುತ್ತಲೇ" ಎಂಬುದು ವರ್ತಮಾನಕಾಲರೂಪದಲ್ಲಿದ್ದು, "ಆತನು ಯೋಚಿಸುತ್ತಿರುವ ವಿಶ್ರಾಂತಿಯು ಈಗಾಗಲೆ ನೆರವೇರುವ ಪ್ರಕ್ರಿಯೆಯಲ್ಲಿರುತ್ತದೆ" ಎಂಬುದನ್ನು ಸೂಚಿಸುತ್ತದೆ.[10]

"ನಂಬಿರುವ ನಾವಾದರೋ" ಎಂಬುದು ವರ್ತಮಾನಕಾಲದ ಬದಲಾಗಿ ಭೂತಕಾಲರೂಪದಲ್ಲಿರುತ್ತದೆ, ಮತ್ತು ಪತ್ರಿಕೆಯ ವಾಚಕರ ಪರಿವರ್ತನೆಯನ್ನು ಸೂಚಿಸತಕ್ಕದ್ದು.[11] ಈ ಉಲ್ಲೇಖನವು ಕ್ರಿಸ್ತನಿಗೆ ಪರಿವರ್ತನೆಗೊಂಡವರ ವೈಶಿಷ್ಟ್ಯವಾದ ಬಣ್ಣನೆಯಾಗಿರುತ್ತದೆ. ಯೇಸುವಿನ ಪರಲೋಕಾರೋಹಣದ ಬಳಿಕ ಮೊದಲು ಪರಿವರ್ತನೆಗೊಂಡವರನ್ನು ಅಪೊಸ್ತಲರ ಕೃತ್ಯಗಳು 2ನೇ ಅಧ್ಯಾಯವು ಪೇತ್ರನು ಅವರಿಗೆ ಸಾರಿದ ಮಾತಿಗೆ "ಒಪ್ಪಿಕೊಂಡವರು" ಎಂದು ಬಣ್ಣಿಸುತ್ತದೆ. ಆ ಬಳಿಕ ಅವರಿಗೆ ದೀಕ್ಷಾಸ್ನಾನ ಮಾಡಿಸಲಾಯಿತು (ಅಪೊಸ್ತಲರ ಕೃತ್ಯಗಳು 2:38-41). ಫಿಲಿಪ್ಪಿಯದ ಸೆರೆಮನೆಯ ಅಧಿಕಾರಿ ಮತ್ತು ಆತನ ಕುಟುಂಬದವರಿಗೆ ಯೇಸುವಿನಲ್ಲಿ ನಂಬಿಕೆಯಿಡುವಂತೆ ಹೇಳಲಾಯಿತು (ಅಪೊಸ್ತಲರ ಕೃತ್ಯಗಳು 16:31); ಕರ್ತನ ವಾಕ್ಯವನ್ನು ಸಾರಲ್ಪಟ್ಟ ಬಳಿಕ, ಅವರು ತಕ್ಷಣವೇ ದೀಕ್ಷಾಸ್ನಾನ ಮಾಡಿಸಿಕೊಂಡರು (ಅಪೊಸ್ತಲರ ಕೃತ್ಯಗಳು 16:33). ಅವರ ಪರಿವರ್ತನೆಯನ್ನು ಅಂತಿಮವಾಗಿ "ದೇವರಲ್ಲಿ ನಂಬಿಕೆಯಿಟ್ಟವರಾಗಿ" ಎಂದು ಬಣ್ಣಿಸಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು

16:34). ಆದದರಿಂದ ಪರಿವರ್ತನೆಯನ್ನು ಒಬ್ಬನು "ನಂಬಿಕೆಯನ್ನಿಟ್ಟ" ಹಂತವೆಂದು ಕರೆಯುವದು ಮತ್ತು ಅದರಲ್ಲಿ ಸ್ಪಷ್ಟವಾಗಿ ಹೇಳದಯೇ, ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಕೊಳ್ಳುವ ಕ್ರಿಯೆಯನ್ನು ಸೇರ್ಪಡೆಯೊಳಿಸುವದು ಸೂಕ್ತವಾಗಿರುತ್ತದೆ. ರೋಮಾ 13:11ರಲ್ಲಿ ಪೌಲನು ಅಂತಿಮ ರಕ್ಷಣೆಯ ಸಮಯವನ್ನು ಸೂಚಿಸಿ "ನಾವು ಮೊದಲ ನಂಬಿದ ಕಾಲಕ್ಕಿಂತ ಸಮೀಪವಾಗಿದೆ" ಎಂದು ಹೇಳುತ್ತಾನೆ. ಆತನ ವಾಚಕರು "ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಾಗ" ಪೌಲನು ರೋಮಾ 6:3-5ರಲ್ಲಿ ಸೂಚ್ಯಾರ್ಥವಾಗಿ ಹೇಳಿರುವಂತೆ ಅವರ ರಕ್ಷಣೆಯು ಸಮೀಪವಾಯಿತು. ನಂಬಿಕೆಯಿಡುವ ಕ್ರಿಯೆಯಲ್ಲಿ ದೀಕ್ಷಾಸ್ನಾನದಲ್ಲಿ ವಿಧೇಯರಾಗುವದು ಸೇರಿರುತ್ತದೆಂಬುದು ಮತ್ತೊಂದು ಸಾರಿ ಸ್ಪಷ್ಟವಾಗುತ್ತದೆ, ಅದು ಒಬ್ಬನು ಕ್ರಿಸ್ತನೊಳಗೆ ಪ್ರವೇಶಿಸುವ ನಂಬಿಕೆಯ ಕ್ರಿಯೆಯಾಗಿರುತ್ತದೆ, ಆರನಲ್ಲಿಯೇ ರಕ್ಷಣೆಯು ಸಿಕ್ಕುವದಾಗಿದೆ.

ಮುಂದಿನ ಪದಗುಚ್ಛಕ್ಕಾಗಿ, KJV ಯು "ಅವರು ನನ್ನ ವಿಶ್ರಾಂತಿಯನ್ನು ಪ್ರವೇಶಿಸುವದಾದರೆ" ಎಂದು ಹೇಳುತ್ತದೆ. ಇದು ಭಾಷಾನುಗುಣವಾದ ಅರ್ಥವಲ್ಲವಾದರೂ, ಇದು ಅಕ್ಷರಶಃ ಗ್ರೀಕ್ ಅರ್ಥವಾಗಿದೆ. ಪದ್ಧತಿಯಂತೆ, ಇಂಥಿಂಥದ್ದೊಂದು ಮಾಡಲ್ಪಡುವದಿಲ್ಲ ಎಂಬು ಹೇಳುವ ರೀತಿ ಇದಾಗಿತ್ತು. ದಾವೀದನು ಈ ವಿಧಾನವನ್ನು ಬಳಸುತ್ತಾ ಹೀಗೆ ಹೇಳುತ್ತಾನೆ, "ಸೂರ್ಯನು ಮುಣುಗುವ ಮೊದಲು ನಾನು ರೊಟ್ಟಿಯನ್ನಾಗಲಿ ಬೇರೆ ಯಾವದನ್ನಾಗಲಿ ಬಾಯಲ್ಲಿ *ಹಾಕಿದರೆ* ದೇವರು ನನಗೆ ಬೇಕಾದದ್ದನ್ನು ಮಾಡಲಿ" (2 ಸಮುವೇಲ 3:35; ಒತ್ತಿ ಹೇಳಿದ್ದು ನನ್ನದು). ತಾನು ಸೂರ್ಯನು ಮುಣುಗುವ ತನಕ ಊಟ ಮಾಡುವದಿಲ್ಲವೆಂದು ಶಾಸ್ತ್ರೋಕ್ತವಾಗಿ ಹರಕೆಯನ್ನು ಘೋಷಿಸುತ್ತಿದ್ದಾನೆ. ಆದದರಿಂದ NASBಯಲ್ಲಿನ ಅನುವಾದವು ಉತ್ತಮ ಅನುವಾದವಾಗಿರುತ್ತದೆ: **ಅವರು ನನ್ನ ವಿಶ್ರಾಂತಿಯನ್ನು ಪ್ರವೇಶಿಸಕೂಡದು.**[12] ಲೇಖಕನು ಕೀರ್ತನೆ 95:11ರಿಂದ ಉಲ್ಲೇಖಿಸುತ್ತಾನೆ, ಕರ್ತನು ಕೋಪಗೊಂದು ಕಾದೇಶ್-ಬರ್ನೇಯದಲ್ಲಿ ಅವಿಧೇಯರಾದವರು ತನ್ನ ವಿಶ್ರಾಂತಿಯಲ್ಲಿ ಎಂದಿಗೂ ಪ್ರವೇಶಿಸುವದಿಲ್ಲವೆಂದು ಪ್ರಮಾಣಮಾಡಿದನು ಎಂದು ಅದು ಹೇಳುತ್ತದೆ. ಯೆಹೂದ್ಯರಿಗಿದ್ದ "ವಿಶ್ರಾಂತಿಯು" (ಕಾನಾನ್) ನಂಬಿಗಸ್ತರಿಗೆ ಸಿಕ್ಕುವ ಪರಲೋಕದ ಛಾಯೆಯಾಗಿರುತ್ತದೆ; ಆದರೆ ನಮ್ಮ ಪ್ರಯಾಣದ ಅಂತ್ಯದ ವರೆಗೂ ನಂಬಿಗಸ್ತರಾಗಿ ಉಳಿಯದಿದ್ದರೆ ನಾವು ಸಹ ಪ್ರವೇಶಿಸುವದರಿಂದ ತಡೆಯಲ್ಪಡುವೆವು. ದೇವರು "ಪ್ರಮಾಣ ಮಾಡುವದು" ಸಮಯವು ಆ ದಿನಗಳಿಗೆ ಅನ್ವಯವಾಗುತ್ತದೆ ಮತ್ತು ಅಂತಿಮ ನ್ಯಾಯತೀರ್ಪಿನ ಸಮಯಕ್ಕೆ ಅನ್ವಯವಾಗುವದಿಲ್ಲ. ಅದೇ ರೀತಿಯೇ, ನ್ಯಾಯತೀರ್ಪಿಗಾಗಿ ಕ್ರಿಸ್ತನು ಹಿಂದಿರುಗಿ ಬರುವ ಬಹಳಷ್ಟು ಕಾಲದ ಮುಂಚೆಯೇ ನಮ್ಮ ನಿತ್ಯತ್ವದ ಬಾಧ್ಯತೆಯನ್ನು ಕಳಕೊಳ್ಳಬಲ್ಲೆವು.[13]

ಲೇಖಕನು ಮುಂದೆ ಹೀಗೆ ಹೇಳುತ್ತಾನೆ, **ದೇವರ ಕೆಲಸಗಳು ಲೋಕಾದಿಯಿಂದ** (ಲೋಕದ ಅಸ್ತಿವಾರದಿಂದ) **ಮುಗಿದು ಹೋಗಿದ್ದರೂ**. ದೇವರು ತನ್ನ ಸೃಷ್ಟಿಸುವ ಕೆಲಸವನ್ನು ಮುಗಿಸಿದ ಮೇಲೆ ವಿಶ್ರಮಿಸಿಕೊಂಡನು, ಮತ್ತು ಅಂದಿನಿಂದಲೂ ಆತನು ಸೃಷ್ಟಿಸುವ ಕೆಲಸದಿಂದ ವಿಶ್ರಾಂತಿಯಲ್ಲಿದ್ದಾನೆ. "ಅಸ್ತಿವಾರ" ಎಂಬುದನ್ನು ಅನುವಾದಿಸಿರುವ ಪದವು "ಸೃಷ್ಟಿ" ಎಂಬುದಕ್ಕಿರುವ ವೈಶಿಷ್ಟ್ಯ ಪದವಾದ κτίσις (*ktisis*) ಎಂಬುದರ ಬದಲಾಗಿ καταβολή (*katabolē*) ಎಂದಾಗಿರುತ್ತದೆ. "ಲೋಕದ ಅಸ್ತಿವಾರ" (καταβολῆς κόσμου, *katabolēs kosmou*) ಎಂಬ ಮಾತು ಹೊಸ ಒಡಂಬಡಿಕೆಯಲ್ಲಿ ಸೃಷ್ಟಿ ಎಂಬುದಕ್ಕೆ ರೂಢಿಯಾಗಿ ಬಳಸಲ್ಪಟ್ಟಿರುತ್ತದೆ.[14]

**ವಚನ 4.** ಲೇಖಕನು ನಂತರ ಆದಿಕಾಂಡ 2:2ನ್ನು ಉಲ್ಲೇಖಿಸುತ್ತಾನೆ: **ದೇವರು ತನ್ನ ಸೃಷ್ಟಿಕಾರ್ಯಗಳನ್ನೆಲ್ಲಾ ಮುಗಿಸಿಬಿಟ್ಟು ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡನು**. ಇದರರ್ಥವು

ದೇವರು ಬಳಲಿ ಹೋಗಿದ್ದನು ಮತ್ತು ಆತನಿಗೆ ವಿಶ್ರಾಂತಿಯ ಅಗತ್ಯವಿತ್ತೆಂದು ಆಗಿರುವದಿಲ್ಲ. ಆತನ ವಿಶ್ರಾಂತಿಯು ಸಂಪೂರ್ಣವಾದ ವಿಶ್ರಾಂತಿಯಾಗಿರಲಿಲ್ಲ, ಯಾಕೆಂದರೆ ಯೇಸು ತನ್ನ ತಂದೆಯು ಈಗಲೂ ಕೆಲಸ ಮಾಡುತ್ತಿದ್ದಾನೆಂದು ಹೇಳಿದನು (ಯೋಹಾನ 5:17). ದೇವರು ಈಗಲೂ ಲೋಕದ ಮೇಲ್ವಿಚಾರಣೆಯನ್ನು ಮಾಡುತ್ತಾನೆ ಮತ್ತು ದೇವದೂತರ ಮೂಲಕವಾಗಿ ಆಶೀರ್ವಾದಗಳನ್ನು ತರುವ ಕೆಲಸವಾಗಿದ್ದಾಗ್ಯೂ, ಆತನು ಈಗಲೂ ಒದಗಿಸಲ್ಪಡುವ ಕೆಲಸವನ್ನು ಮಾಡುತ್ತಾನೆ (ನೋಡಿರಿ ರೋಮಾ 8:28). ಆದದರಿಂದ ಸಬ್ಬತ್, ಅವಶ್ಯಕವಾಗಿ ಸಂಪೂರ್ಣ ಕೆಲಸವಿಲ್ಲದ್ದು ಆಗಿರಲಿಲ್ಲ, ಆದರೆ "ಮುಂಚಿನ ಆರು ದಿನಗಳಲ್ಲಿನ ಸಾಮಾನ್ಯವಾದ ಕೆಲಸವನ್ನು ನಿಲ್ಲಿಸುವದು" ಎಂದಾಗಿತ್ತು.[15] ಸಬ್ಬತ್ ದಿನದಲ್ಲಿ ಯೇಸು ಸ್ವಸ್ಥ ಮಾಡುವಂತದ್ದು ಕರುಣೆಯಿಂದ ಮಾಡಿದ ದೇವರ ಸ್ವಂತ ಕೆಲಸವಾಗಿತ್ತು (ಯೋಹಾನ 5:16, 17). ದೇವರು ಮನುಷ್ಯನನ್ನು ಸೃಷ್ಟಿಸಿದ ಬಳಿಕ, ತನ್ನ ಸೃಷ್ಟಿ ಕೆಲಸವನ್ನು ನಿಲ್ಲಿಸಿದನು, ಅದು ಒಂದು ರೀತಿಯಲ್ಲಿ ಹೀಗೆ ಹೇಳುವಂತಿತ್ತು, "ಮನುಷ್ಯನು ನನ್ನ ಕಿರೀಟಪ್ರಾಯವಾದ ಸಾಧನೆ. ಈ ಸುದೀರ್ಘವಾದ ಪ್ರಕ್ರಿಯೆಯ ಗುರಿಯು ಒಂದು ಸ್ವತಂತ್ರ ಆತ್ಮ, ನನ್ನ ಸ್ವರೂಪವನ್ನು ಹೊಂದಿರುವದು, ಮತ್ತು ನನ್ನೊಂದಿಗೆ ಅನ್ಯೋನ್ಯತೆಯನ್ನಿಟ್ಟುಕೊಳ್ಳಲು ಸಮರ್ಥನು."[16]

"ಸಬ್ಬತ್ ದಿನದ ವಿಶ್ರಾಂತಿ"ಯು ತಾವು ಐಗುಪ್ತದಿಂದ ಬಿಡುಗಡೆಗೊಳಿಸಲ್ಪಟ್ಟಿದ್ದರ ಜ್ಞಾಪಕಾರ್ಥವಾಗಿ ಯೆಹೂದ್ಯರಿಗೆ ಕೊಡಲ್ಪಟ್ಟಿತ್ತು (ಧರ್ಮೋಪದೇಶಕಾಂಡ 5:15). ವಿಶ್ರಮಿಸಿಕೊಳ್ಳಬೇಕೆಂಬ ಆಜ್ಞೆಯು ಏಳನೆಯ ದಿನದಲ್ಲಿ ದೇವರು ವಿಶ್ರಮಿಸಿಕೊಂಡದ್ದನ್ನು ಸಹ ಜ್ಞಾಪಿಸಿಕೊಳ್ಳುವಿಕೆಯಾಗಿತ್ತು. ಹೇಗೂ, ಸಬ್ಬತ್‌ವಾದಿಗಳು ಹೇಳಿಕೊಳ್ಳುವಂತೆ ಈ ಕಟ್ಟಳೆಯು ಒಂದು ನೈತಿಕ ಕಟ್ಟಳೆಯಾಗಿದ್ದು ಆ ಕಾರಣದಿಂದ ಈಗಲೂ ಜಾರಿಯಲ್ಲಿರುತ್ತದೆಂಬದು ಶಾಸ್ತ್ರಗಳಲ್ಲಿ ಕಂಡು ಬರುವದಿಲ್ಲ. ಧರ್ಮೋಪದೇಶಕಾಂಡ 5:14, 15ರ ವಾಕ್ಯಭಾಗವು ಪ್ರತಿ ವಾರದ ಸಬ್ಬತ್ ದಿನ ಪ್ರಾಥಮಿಕ ಕ್ರಿಯೆಯು ಐಗುಪ್ತದಲ್ಲಿನ ದಾಸತ್ವದಿಂದ ತಾವು ವಿಮೋಚಿಸಲ್ಪಟ್ಟದ್ದನ್ನು ಇಸ್ರಾಯೇಲ್ಯರಿಗೆ ಜ್ಞಾಪಿಸುವದಾಗಿತ್ತು. ಅಷ್ಟುಮಾತ್ರವಲ್ಲದೆ, ನೆಹಮೀಯ 9:13, 14 ವಚನಗಳು ದೇವರು ಸೀನಾಯಿ ಪರ್ವತದಲ್ಲಿ "[ತನಗೆ] ಮೀಸಲಾದ ಸಬ್ಬತ್ತೆಂಬ ದಿನವನ್ನು ಪ್ರಕಟಿಸಿದನು" ಎಂಬುದನ್ನು ಸೂಚಿಸುತ್ತದೆ. ಆತನು ಅವರಿಗೆ ಸೀನಾಯಿ ಪರ್ವತದಲ್ಲಿ ಪ್ರಕಟಿಸಿದ್ದಾದರೆ, ಅದು ಏದೆನ್ ತೋಟದ ಕಾಲದಿಂದಲೂ ಅದೊಂದು ನೈತಿಕ ಕಟ್ಟಳೆಯಾಗಿದ್ದಿರಲಾರದು.

**ಒಂದು ಸ್ಥಳದಲ್ಲಿ . . . ಹೇಳಿದ್ದಾನೆ** ಎಂಬ ಮಾತಿನ ಅರ್ಥವು ಲೇಖಕನಿಗೆ ಅದು ಬರೆಯಲ್ಪಟ್ಟಿರುವ ವಾಕ್ಯಭಾಗದ ಬಗ್ಗೆ ಗೊತ್ತಿರಲಿಲ್ಲ ಎಂದಾಗಿರುವದಿಲ್ಲ, ಆದರೆ ಅದು "ನಮಗೆ ತಿಳಿದಿರುವ ಹಾಗೆ," ಅಥವಾ "ನಮಗೆ ಪರಿಚಯವಿರುವ ಮಾತುಗಳಲ್ಲಿ ಹೇಳಬೇಕೆಂದರೆ" ಎಂಬಂತೆ ಸಾಮಾನ್ಯವಾಗಿ ಬಳಸುವ ಹೇಳಿಕೆಯಾಗಿತ್ತು.[17]

ನಾವು ನಮ್ಮ ವಿಶ್ರಾಂತಿಯನ್ನು ತಪ್ಪಿಸಿಕೊಳ್ಳದ ಹಾಗೆ ಸಕಲ ಪ್ರಯತ್ನವನ್ನು ಮಾಡಬೇಕು. ನಾವು ಭಯ ಪಡೋಣ, ವಾಕ್ಯವನ್ನು ಸ್ವೀಕರಿಸಿಕೊಳ್ಳೋಣ ಮತ್ತು ಅದರಿಂದ ಪ್ರಯೋಜನವನ್ನು ಹೊಂದೋಣ, ಮತ್ತು ನಂಬಿಕೆಯಲ್ಲಿ ಮುಂದುವರೆಯೋಣ. ನಾವು ಈ ಮೂರು ವಾಗ್ದಂಡಗಳಿಗೆ ಕಿವಿಗೊಡುವದಾದರೆ, ನಮಗೆ ಈಗ ದೇವರ ಶಾಂತಿ ಹಾಗೂ ನಿತ್ಯತ್ವದಲ್ಲಿ ಆತನ ವಿಶ್ರಾಂತಿ – ಆತನ ನಿತ್ಯವಾದ ಶಾಂತಿಯನ್ನು ಹೊಂದಿಕೊಳ್ಳುವೆವು.

## ಸಬ್ಬತ್ ವಿಶ್ರಾಂತಿಯು ಉಳಿಯುತ್ತದೆ (4:5-11)

**5ಆದರೆ ಆ ಸ್ಥಳದಲ್ಲಿ – ಇವರು ನನ್ನ ವಿಶ್ರಾಂತಿಯಲ್ಲಿ ಸೇರುವದೇ ಇಲ್ಲವೆಂದು ಹೇಳಿದ್ದಾನೆ.**

**[6]ಹೀಗಿರಲಾಗಿ ಆ ವಿಶ್ರಾಂತಿಯಲ್ಲಿ ಕೆಲವರು ಸೇರಬೇಕೆಂಬುವ ಮಾತು ಇನ್ನೂ ಇರುವದರಿಂದಲೂ ಮೊದಲು ಶುಭವರ್ತಮಾನವನ್ನು ಕೇಳಿದವರು ಅವಿಧೇಯರಾದ ಕಾರಣ ಅದರಲ್ಲಿ ಸೇರದೆಹೋದದರಿಂದಲೂ [7]ಬಹುಕಾಲ ಹೋದನಂತರ ಆತನು ದಾವೀದನ ಬಾಯಿಂದ ಮಾತಾಡಿ ಈಹೊತ್ತೇ ಎಂದು ಒಂದಾನೊಂದು ದಿವಸವನ್ನು ಗೊತ್ತು ಮಾಡುತ್ತಾನೆ; ಹೇಗಂದರೆ –**

**ನೀವು ಈಹೊತ್ತು ದೇವರ ಶಬ್ದಕ್ಕೆ ಕಿವಿ ಗೊಟ್ಟರೆ**
**ನಿಮ್ಮ ಹೃದಯಗಳನ್ನು ಕಠಿಣಮಾಡಿಕೊಳ್ಳ ಬೇಡಿರಿ**

**ಎಂದು ಮೇಲ್ಕಂಡ ವಚನದಲ್ಲಿ ಹೇಳುತ್ತಾನಷ್ಟೆ. [8]ಯೆಹೋಶುವನು ಅವರನ್ನು ಆ ವಿಶ್ರಾಂತಿಯಲ್ಲಿ ಸೇರಿಸಿದ್ದಾದರೆ ತರುವಾಯ ಮತ್ತೊಂದು ದಿವಸವನ್ನು ಕುರಿತು ಹೇಳೋಣವಾಗುತ್ತಿರಲಿಲ್ಲ. [9]ಆದದರಿಂದ ದೇವರ ಜನರು ಅನುಭವಿಸುವದಕ್ಕಿರುವ ಸಬ್ಬತೆಂಬ ವಿಶ್ರಾಂತಿಯು ಇನ್ನೂ ಉಂಟು. [10]ಹೇಗಂದರೆ ದೇವರು ತನ್ನ ಕೆಲಸಗಳನ್ನು ಮುಗಿಸಿ ಹೇಗೆ ವಿಶ್ರಮಿಸಿಕೊಂಡನೋ ಹಾಗೆಯೇ ಆತನ ವಿಶ್ರಾಂತಿಯಲ್ಲಿ ಸೇರಿರುವವನು ಸಹ ತನ್ನ ಕೆಲಸಗಳನ್ನು ಮುಗಿಸಿ ವಿಶ್ರಮಿಸಿಕೊಂಡಿದ್ದಾನೆ. [11]ಆದದರಿಂದ ನಾವು ಆ ವಿಶ್ರಾಂತಿಯಲ್ಲಿ ಸೇರುವದಕ್ಕೆ ಪ್ರಯಾಸಪಡೋಣ; ನಮ್ಮಲ್ಲಿ ಒಬ್ಬರಾದರೂ ಅವರ ಅವಿಧೇಯತ್ವವನ್ನು ಅನುಸರಿಸುವವರಾಗಬಾರದು.**

**ವಚನಗಳು 5, 6.** ವಾಗ್ದಾನ ಮಾಡಲ್ಪಟ್ಟ ವಿಶ್ರಾಂತಿಯಲ್ಲಿ ಪ್ರವೇಶಿಸದೆ ಹೋಗಿದ್ದಕ್ಕೆ ಇಸ್ರಾಯೇಲ್ಯರು ಬೇರೆ ಯಾರನ್ನೂ ಅಲ್ಲ ಆದರೆ ತಮ್ಮನ್ನೇ ಹೊಣೆಗಾರರನ್ನಾಗಿಸಿಕೊಳ್ಳಬೇಕಿತ್ತು – ಅದಕ್ಕೆ ಅವರ ಸ್ವಂತ ವೈಯಕ್ತಿಕ ಅವಿಧೇಯತೆಯೇ ಕಾರಣವಾಗಿತ್ತು. ಇಬ್ರಿಯ 3:4ರಲ್ಲಿ ಸಿಕ್ಕುವ ಕೀರ್ತನೆ 95:11ರ ಎಚ್ಚರಿಕೆಯು ಒತ್ತಿ ಹೇಳುವದಕ್ಕೋಸ್ಕರ 4:5, 6ರಲ್ಲಿ ಪುನರಾವರ್ತಿಸಲ್ಪಟ್ಟಿದೆ. ಇಲ್ಲಿ ಕಿರಿಯ ಪೀಳಿಗೆಯು ಕಾನಾನ್ ದೇಶವನ್ನು ಪ್ರವೇಶಿಸಿದರೆಂಬುದು ಹೇಳಲ್ಪಟ್ಟಿರುವದಿಲ್ಲ, ಯಾಕೆಂದರೆ ಲೇಖಕನು ಒತ್ತಿ ಹೇಳಲಿಚ್ಛಿಸಿದ ಅಂಶವು ಅದಾಗಿರಲಿಲ್ಲ.

ಕೀರ್ತನೆ 95ರಲ್ಲಿ ಪ್ರಸ್ತಾಪಿಸಲಾಗಿರುವ ವಿಶ್ರಾಂತಿಯು ಯೆಹೋಶುವನ ನಾಯಕತ್ವದಕ್ಕೆ ಹೊಂದಿಕೊಳ್ಳಲಾದ ವಾಗ್ದಾನ ದೇಶವನ್ನು ಸೂಚಿಸುತ್ತಿಲ್ಲ ಎಂಬುದನ್ನು ನಾವು ನೋಡಲಿದ್ದೇವೆ, ಯಾಕೆಂದರೆ ಕೀರ್ತನೆಗಾರನು **ಕೆಲವರು ಸೇರಬೇಕೆಂಬ ಮಾತು ಇನ್ನು ಇರುವದು** ಎಂದು ಬರೆಯುವದಕ್ಕೆ ಬಹಳ ಕಾಲದ ಹಿಂದೆಯೇ ಇಸ್ರಾಯೇಲ್ಯರು ಕಾನಾನ್ ದೇಶವನ್ನು ಪ್ರವೇಶಿಸಿದ್ದರು. ದೇವರು ಏನನ್ನೂ ನಿರರ್ಥಕವಾಗಿ ವಾಗ್ದಾನ ಮಾಡಲಿಲ್ಲ; ಆದದರಿಂದ, ಕೆಲವರು ಕಾನಾನ್ ದೇಶವನ್ನು ಪ್ರವೇಶಿಸಬೇಕಾಯಿತು ಮತ್ತು ಕೆಲವರು ಪರಲೋಕವನ್ನು ಪ್ರವೇಶ "ಮಾಡತಕ್ಕದ್ದು" (KJV).[18] ದೇವರ ವಾಕ್ಯವು ಸುಳ್ಳಾಗಲಾರದು (ಯೋಹಾನ 10:35). ನಮ್ಮ ದೇವರು ಎಂದಿಗೂ ಸೋಲಿಸಲ್ಪಡುವದಿಲ್ಲ, ಮತ್ತು ಆತನ ವಾಕ್ಯವು ಎಂದಿಗೂ ನೆರವೇರಿಸಲ್ಪಡಲಾರದ್ದಾಗಿರುವದಿಲ್ಲ; ಇದು ಕೆಲವು ಸಾರಿ ನಮ್ಮ ಮಿತವಾದ ದೃಷ್ಟಿಕೋನದಿಂದಾಗಿ ಮಾತ್ರವೇ ಆ ರೀತಿಯಲ್ಲಿ ಕಾಣಿಸುತ್ತದಷ್ಟೆ.

ಒಬ್ಬ ಕ್ರೈಸ್ತನಾದ ಬಳಿಕವೂ, **ಅವಿಧೇಯತೆಯು** ಪರಲೋಕವನ್ನು ಪ್ರವೇಶಿಸಬೇಕೆಂಬ ಒಬ್ಬನ ಗುರಿಯನ್ನು ಸೋಲಿಸಬಹುದಾಗಿದೆ, ಆದರೆ ತನಗೆ ನಂಬಿಗಸ್ತರಾಗಿರುವವರ ವಿಷಯದಲ್ಲಿ ದೇವರಿಗಿರುವ ಉದ್ದೇಶವನ್ನು ಅದು ನಾಶಗೊಳಿಸುವದಿಲ್ಲ.[19] ಆತನು ಅಂತಿಮವಾದ ನಷ್ಟದ ಬಗ್ಗೆ ಎಂದಿಗೂ ಚಿಂತಿತನಾಗಬೇಕಿಲ್ಲ ಯಾಕೆಂದರೆ ಆತನು ಅಂತ್ಯವನ್ನು ಆರಂಭದಿಂದಲೇ ಬಲ್ಲನು ಮತ್ತು ಅಂತಿಮ ಜಯವು ತನ್ನದೇ ಎಂದು ಆತನಿಗೆ ಗೊತ್ತಿದೆ. ಆತನಿಗೆ ಸೇರಿದವರು ಆ ಜಯದಲ್ಲಿ ಪಾಲುಗಾರರಾಗುವರು (ಪ್ರಕಟನೆ 17:14).

ದೇವರು ತನಗೆ ಸರಿಯೆಂದು ತೋರುವಾಗ ಎಲ್ಲಾ ಇತಿಹಾಸವನ್ನು ಒಂದು ಮುಕ್ತಾಯಕ್ಕೆ ತರಬೇಕೆಂದು ತಕ್ಕ ಕಾಲದಲ್ಲಿ ಕಾರ್ಯಮಾಡುತ್ತಿದ್ದಾನೆ. ನಂಬಿಗಸ್ತರು ಯಾವಾಗಲೂ ಈ ಮಿತಿಯುಳ್ಳ ಲೋಕವನ್ನು ದಾಟಿ ಪರಲೋಕದ ವಿಶ್ರಾಂತಿಯನ್ನು ಎದುರುನೋಡುವವರಾಗಿದ್ದಾರೆ ಎಂಬುದನ್ನು ಇಬ್ರಿಯರಿಗೆ ಪತ್ರಿಕೆಯು ತೋರಿಸಿ ಕೊಡುತ್ತದೆ (11:13-16; 13:14). ನಮ್ಮ ಯೋಚನೆಯಲ್ಲಿರುವ ಒಂದು ಮರಣಾಂತಿಕ ನ್ಯೂನ್ಯತೆಯೆಂದರೆ ನಮಗೆ ನಿಜವಾಗಿಯೂ ಗೊತ್ತಿರುವದಕ್ಕಿಂತಲೂ ಅಧಿಕವಾಗಿ ನಾಉ ತಿಳುಕೊಂಡಿದ್ದೇವೆಂದು ಊಹಿಸಿಕೊಳ್ಳುವಿಕೆಯೇ ಆಗಿದೆ. ನಮಗೆ ಭವಿಷ್ಯವನ್ನು ನೋಡುವದಕ್ಕೆ ಸಾಧ್ಯವಿಲ್ಲವಾದ್ದರಿಂದ, ನಮ್ಮ ಜ್ಞಾನವು ಮಿತಿಯುಳ್ಳದ್ದಾಗಿದೆ.

**ವಚನ 7.** ದೈವಿಕ ಮತ್ತು ಮಾನವರು ಒಟ್ಟಾಗಿ ಮಾತಾಡುವವರಾಗಿ ಸಂಯೋಜಿಸಲ್ಪಟ್ಟಿದ್ದಾರೆ. ಆತನು ಎಂಬದು ದಿನವನ್ನು ಗೊತ್ತು ಮಾಡುವವನಾದ ದೇವರನ್ನು ಸೂಚಿಸತಕ್ಕದ್ದಾಗಿದೆ, ಆದರೆ ಅದು **ದಾವೀದನ ಮೂಲಕ** ಮಾಡಲ್ಪಟ್ಟಿತು. ಇವುಗಳು ದಾವೀದನ ಮಾತುಗಳು, ಆದರೆ "ಆತನ ಮೂಲಕ ಮಾತಾಡುವವನು ದೇವರಾತ್ಮನೇ ಆಗಿದ್ದಾನೆ."[20] ಇದು ಮತ್ತೊಂದಾವರ್ತಿ ದಾವೀದನು ಪ್ರೇರಿತನಾಗಿ ಬರೆದನೆಂಬುದನ್ನು ದೃಢಪಡಿಸುತ್ತದೆ.

**ವಚನ 8.** ಈ ವಚನವು **ಯೆಹೋಶುವನು ಅವರನ್ನು ಆ ವಿಶ್ರಾಂತಿಯಲ್ಲಿ ಸೇರಿಸಿದ್ದಾದರೆ** ಎಂದು ಆರಂಭಗೊಳ್ಳುತ್ತದೆ. KJVಯು "ಯೆಹೋಶುವ" ಎಂಬುದರ ಬದಲಾಗಿ "ಯೇಸು" ಎಂದು ಬಳಸುತ್ತದೆ. ಹಳೆಯ ಒಡಂಬಡಿಕೆಯ ಇಬ್ರಿಯ ವಾಕ್ಯವು "ಯೆಹೋಶುವ" ಎಂಬ ಹೆಸರನ್ನು ಹೊಂದಿದೆ, ಅದು ಗ್ರೀಕ್ ಭಾಷೆಯಲ್ಲಿ "ಯೇಸು" ಎಂಬುದಕ್ಕೆ ಸಮವಾಗಿದೆ. "ಕರ್ತನು ರಕ್ಷಿಸುತ್ತಾನೆ" ಎಂಬ ಹೆಸರಿನ ಅರ್ಥವು ಎರಡೂ ಹೆಸರುಗಳಿಗೆ ಅನ್ವಯವಾಗಬಲ್ಲದು. ಇದನ್ನು ಅರಿತವರಾಗಿ, 1611ರ ವೇದಪಂಡಿತರು ಅಕ್ಷರಶಃ ಗ್ರೀಕ್ ಪದವನ್ನು ("ಯೇಸು") ಎಂಬುದನ್ನು ಬಳಸುವದಕ್ಕೆ ಆದ್ಯತೆ ಕೊಟ್ಟರು ಯಾಕೆಂದರೆ ಅವರು ಹಸ್ತಪ್ರತಿಗಳಲ್ಲಿ ಅದನ್ನು ಕಂಡುಕೊಂಡವರಾಗಿದ್ದರು. ಗೊಂದಲಕ್ಕೆ ಎಡೆಮಾಡಿಕೊಡಬಾರದೆಂದು, ಎಲ್ಲವೂ ಅಲ್ಲದಿದ್ದಾಗ್ಯೂ, ಬಹುತೇಕ ಆಧುನಿಕ ತರ್ಜುಮೆಗಳು ಅದಕ್ಕೆ "ಯೆಹೋಶುವ" ಎಂದು ಅನುವಾದ ನೀಡುತ್ತವೆ.[21] ಮೂಲ ವಾಕ್ಯದ ವಾಚಕರಿಗೆ, ಈ ವಾಕ್ಯಭಾಗದಲ್ಲಿರುವ ಛಾಯೆ ಮತ್ತು ಪ್ರತಿರೂಪಗಳ — ಹಳೆಯ ಒಡಂಬಡಿಕೆಯಲ್ಲಿ ಯೆಹೋಶುವನು ಹೊಸ ಒಡಂಬಡಿಕೆಯಲ್ಲಿನ "ಯೆಹೋಶುವ" (ಯೇಸು) ನಿಗೆ ಛಾಯೆಯಾಗಿದ್ದನು — ಸೂಚ್ಯಾರ್ಥಗಳನ್ನು ತಕ್ಷಣವೇ ಗುರುತಿಸಿರಬಹುದಾಗಿದೆ. ಹಾಗಿದ್ದರೂ, ಹಳೆಯ ಒಡಂಡಿಕೆಯ "ಯೇಸು" ಆಗಿರುವ ಯೆಹೋಶುವನು ಹೊಸ ಒಡಂಬಡಿಕೆಯ "ಯೆಹೋಶುವ" ಆಗಿರುವ "ಯೇಸು" ಒದಗಿಸುವಂತಹ ವಿಶ್ರಾಂತಿಯನ್ನು ಒದಗಿಸುವದಕ್ಕೆ ಅಶಕ್ತನಾದನು. ಇಬ್ರಿಯರಿಗೆ ಪತ್ರಿಕೆ ಮತ್ತು ಶಾಸ್ತ್ರಗಳಲ್ಲಿ ಬೇರೆ ಕಡೆಗಳಲ್ಲಿರುವ ಈ ಶಬ್ದಾಡಂಬರವು, ಆಧುನಿಕ ವಾಚಕರನ್ನು ಹೆಸರು ಗುರುತಿಸುವದರಲ್ಲಿ ಅತಿಯಾಗಿ ತೊಡಗಿಸಿಕೊಳ್ಳುವಂತೆ ನಡಿಸತಕ್ಕದ್ದಲ್ಲ.

ಯೆಹೋಶುವ 22:4ವು ಇಸ್ರಾಯೇಲ್ಯರಿಗೆ ತಾನು ವಾಗ್ದಾನ ಮಾಡಿದ್ದ ವಿಶ್ರಾಂತಿಯನ್ನು ದೇವರು ಅನುಗ್ರಹಿಸಿದ್ದನೆಂಬುದಾಗಿ ಹೇಳುತ್ತದೆ. ಯೆಹೋಶುವನು ತಮ್ಮ ಮೂಲಪಿತೃಗಳನ್ನು ಕಾನಾನ್ ದೇಶದೊಳಗೆ ನಡಿಸುವ ಮೂಲಕ ವಿಶ್ರಾಂತಿಯ ವಾಗ್ದಾನವನ್ನು ನೆರವೇರಿಸಿದನೆಂದು ಕೆಲವು ಪ್ರಾಚೀನ ಯೆಹೂದ್ಯರು ವಾದಿಸಿರಬಹುದು. ಹೇಗೂ, ಯೆಹೋಶುವನ ಕಾಲದ ನಂತರದ ನೂರಾರು ವರ್ಷಗಳ ಬಳಿಕ ಇನ್ನೊಂದು ವಿಶ್ರಾಂತಿಯು ಇನ್ನೂ ಹೊಂದಲಾರದೆ ಇರುತ್ತದೆಂದು ದಾವೀದನು ಹೇಳಿದನು. ಕೀರ್ತನೆ 95:7-11 ವಚನಗಳು ದಾವೀದನ ಕಾಲದ ಜನರನ್ನು ಅಪನಂಬಿಕೆಯ ವಿರುದ್ಧ ಎಚ್ಚರಿಸಿದವು, ಮತ್ತು ಇಬ್ರಿಯರಿಗೆ ಪತ್ರಿಕೆಯ ಲೇಖಕನು ತನ್ನ ಕಾಲದ

ಜನರಿಗೆ ಅನ್ವಯಿಸುವದಕ್ಕಾಗಿ ಈ ವಾಕ್ಯಭಾಗದಿಂದ ಒಂದು ಉಲ್ಲೇಖನವನ್ನು ಬಳಸುವದಕ್ಕೆ ಆರಿಸಿಕೊಂಡನು. ಆತನು ಅದನ್ನು ಬಳಸಿದ್ದು ಸೂಚಿಸುವದೇನೆಂದರೆ ಈ ಎಚ್ಚರಿಕೆಯು ಆಧುನಿಕ ಕಾಲಗಳಿಗೆ ಸಹ ಅಷ್ಟೇ ಅನ್ವಯವಾಗುತ್ತದೆ ಎಂಬದೆ. ಆದದರಿಂದ, 8 ಮತ್ತು 9 ವಚನಗಳು **ಮತ್ತೊಂದು ದಿವಸ** ಮತ್ತು ಮತ್ತೊಂದು ವಿಶ್ರಾಂತಿಯ ಕುರಿತು ಮಾತಾಡುತ್ತದೆಂಬುದು ಸ್ಪಷ್ಟವಾಗುತ್ತದೆ.

**ವಚನ 9.** ವಿಶ್ರಾಂತಿಯ ಭರವಸವು **ದೇವರ ಜನರಿಗೆ** ಮಾತ್ರವೇ ಆಗಿತ್ತು. ಹಳೆಯ ಒಡಂಬಡಿಕೆಯಲ್ಲಿನ ಈ ಮಾತು ಯೆಹೂದ್ಯರನ್ನು ಸೂಚಿಸುವದಾಗಿತ್ತು, ಆದರೆ ಹೊಸ ಒಡಂಬಡಿಕೆಯಲ್ಲಿ ಅದು ಎಲ್ಲಾ ಕ್ರೈಸ್ತರಿಗೆ ಅನ್ವಯವಾಗುತ್ತದೆ.

9ನೇ ವಚನದಲ್ಲಿರುವ **ಸಬ್ಬತೆಂಬ ವಿಶ್ರಾಂತಿ** ಎಂಬ ಪದಗುಚ್ಛವು σαββατισμός (*sabbatismos*) ಎಂದಾಗಿದ್ದು, ಹೊಸ ಒಡಂಬಡಿಕೆಯೊಳಗೆ ಇಲ್ಲಿ ಮಾತ್ರವೇ ಸಿಕ್ಕುತ್ತದೆ. ವಾಸ್ತವಿಕದಲ್ಲಿ, ಇದಕ್ಕೆ ಮುಂಚೆ ಗ್ರೀಕ್ ಬರಹಗಳಲ್ಲಿ ಇದು ಬೇರೆ ಎಲ್ಲಿಯೂ ಕಂಡು ಬರುವದಿಲ್ಲ.[22] ಈ σαββατισμόςದ ಬಳಕೆಯು ಇದೊಂದೇ ಆಗಿರುತ್ತದಾದರೂ, LXX ನಲ್ಲಿ ಇದರ ಸಜಾತಿ ಕ್ರಿಯಾಪದವಾಗಿರುವ σαββατίζειν (*sabbatizein*) ಎಂಬುದು ಪದೇಪದೇ ಕಾಣಿಸಿಕೊಳ್ಳುತ್ತದೆ. ಈ ಪದವು ಇಬ್ರಿಯರಿಗೆ ಪತ್ರಿಕೆಗಾಗಿ ಮಾತ್ರವೇ ರಚಿಸಲ್ಪಟ್ಟಿತೆಂಬುದು ನಿರಾಧಾರವಾದದ್ದು ಯಾಕೆಂದರೆ ಅದೇ ಪದವು ವಿಗ್ರಹಾರಾಧಕ ಜನಾಂಗದ ಲೇಖಕನಾದ Plutarchನಿಂದ (c. ಕ್ರಿ.ಶ. 46-120) ಬಳಸಲ್ಪಟ್ಟಿತು.[23] ಈ ಪದವು “ಈ ಪಾಪಭರಿತ ಮತ್ತು ಬಳಲಿಕೆಯುಂಟು ಮಾಡುವ ಜೀವಿತದ ಸಕಲ ಪ್ರಯಾಸಗಳು ಮತ್ತು ವ್ಯಾಧಿಗಳಿಂದ”[24] ಉಪಶಮನವನ್ನು ನೀಡುವದಕ್ಕೆ ದೇವರು ಒಂದು ತಕ್ಕದಾದ ಸ್ಥಳವನ್ನು ಸಿದ್ಧಗೊಳಿಸಿದ್ದಾನೆಂಬುದನ್ನು ನಮಗೆ ತಿಳಿಸುವದಾಗಿದೆ.

ಈ ಜೀವನದಲ್ಲಿ ನಾವು ಒಂದು ಅಧಿಕೃತವಾದ ಸಬ್ಬತ್ ವಿಶ್ರಾಂತಿಯನ್ನು ಪಾಲನೆ ಮಾಡುವದಿಲ್ಲವಾದರೂ, ನಮಗೆ ನಿತ್ಯತ್ವದಲ್ಲಿ ಒಂದು ವಿಶ್ರಾಂತಿಯು ಸಿಕ್ಕುವದು. ಅದು ದೇವರು ಬಯಸುವಂತಹ ವಿಶ್ರಾಂತಿ, ಪಾಪವಿಲ್ಲದ ಒಂದು ಆದರ್ಶವಾದ ಸ್ಥಿತಿಯಾಗಿರಲಿದೆ. ನಾವು ಈಗಾಗಲೆ ಮತ್ತಾಯ 11:28-30ರಲ್ಲಿ ಯೇಸು ನೀಡಿದ ವಾಗ್ದಾನದಲ್ಲಿ ಅದರ ಮುನ್‌ರುಚಿಯನ್ನು ಹೊಂದಿರುತ್ತೇವೆ. ದೇವರು ಸೃಷ್ಟಿ ಕೆಲಗಳಿಂದ ಮಾತ್ರವೇ ವಿಶ್ರಮಿಸಿಕೊಂಡನಾದ್ದರಿಂದ, ಈಗ ನಮಗೆ ತಿಳಿಯದಿರುವಂತಹ ಚಟುವಟಿಕೆಗಳಲ್ಲಿ ತಲ್ಲೀನರಾಗಿ ಅಂದು ನಿತ್ಯತ್ವವನ್ನು ಕಳೆಯಲಿದ್ದೇವೆಂದು ಊಹಿಸಿಕೊಳ್ಳುವದು ತಾರ್ಕಿಕವೆಂದು ತೋರುತ್ತದೆ. ಹಾಗಿದ್ದರೂ, ಕ್ರೈಸ್ತರು ಈ ಜೀವನದ ಪ್ರಯಾಸಗಳು ಮತ್ತು ಸಂಕಷ್ಟಗಳಿಂದ ಬಿಡಿಸಲ್ಪಟ್ಟು “ವಿಶ್ರಾಂತಿ”ಯನ್ನು ಮೀರಿ ಪರಲೋಕದಲ್ಲಿ ನಾವು ಒಂದು “ವಿಶ್ರಾಂತಿ”ಯನ್ನು ಹೊಂದುವೆವು. ರಾಜ್ಯದಲ್ಲಿ ಇರುವವರು ಮಾತ್ರವೇ ಈ ಆಶೀರ್ವಾದವನ್ನು ಹೊಂದಿಕೊಳ್ಳುವರು (ಕೊಲೊಸ್ಸೆ 1:13, 14).

**ವಚನ 10.** ಈ ವಚನವು **ಆತನ ವಿಶ್ರಾಂತಿಯಲ್ಲಿ ಸೇರಿರುವವನು** ಎಂದು ಆರಂಭಗೊಳ್ಳುತ್ತದೆ. KJVಯ ಅನುವಾದವು ಒಂದು ರೀತಿಯಲ್ಲಿ ಗೊಂದಲಕರವಾಗಿದೆ: “ತನ್ನ ವಿಶ್ರಾಂತಿಯಲ್ಲಿ ಪ್ರವೇಶಿಸಿರುವಾತನು.” “ಆತನು” ಎಂಬುದು ಕರ್ತನಾದ ಯೇಸು ಅಲ್ಲ; ಬದಲಾಗಿ, “ಅವನು” (NASB) ಎಂಬುದು, ತನ್ನ ವಿಶ್ರಾಂತಿಯನ್ನು ಪ್ರವೇಶಿಸಿರುವ ಮರಣ ಹೊಂದಿದ ಪ್ರತಿಯೊಬ್ಬ ದೇವಜನರು ಎಂಬದನ್ನು ಸೂಚಿಸುತ್ತದೆ (ಪ್ರಕಟನೆ 14:13). ಕ್ರಿಸ್ತನು, ಸಮಾಧಿಯಲ್ಲಿದ್ದ ವೇಳೆಯಲ್ಲಿ ನಿಲ್ಲಿಸಿದ್ದ ರೀತಿಯಲ್ಲಿ ಕೆಲಸ ಮಾಡುವದನ್ನು ನಿಲ್ಲಿಸಿರುವದಿಲ್ಲ (ನೋಡಿರಿ ಯೋಹಾನ 9:4),[25] ಆದರೆ ಆತನು ಸಿಂಹಾಸನದ ಮುಂದೆ ನಮಗೋಸ್ಕರ ವಿಜ್ಞಾಪನೆ ಮಾಡುವ ಕೆಲಸವನ್ನು ಮುಂದುವರೆಸಿರುತ್ತಾನೆ (ಇಬ್ರಿಯ 7:25). “ತೀರಿತು!”

(ಯೋಹಾನ 19:30) ಎಂಬ ಆತನ ಕೂಗು ಆತನ ಭೂಲೋಕದಲ್ಲಿನ ಕೆಲಸವನ್ನು ಸೂಚಿಸುತ್ತದೆ ಹೊರತು ಪರಲೋಕದಲ್ಲಿನ ಕೆಲಸವನ್ನಲ್ಲ. ಅದೇ ರೀತಿಯಲ್ಲಿ, ಕ್ರಿಸ್ತನಲ್ಲಿ ಮರಣಿಸಿರುವವರು ನಿಶ್ಚಯವಾಗಿಯೂ ಎಲ್ಲಾ ಚಟುವಟಿಕೆಗಳನ್ನು ನಿಲ್ಲಿಸಿ ಬಿಟ್ಟಿರುವದಿಲ್ಲ. ಪ್ರಕಟನೆ ಪುಸ್ತಕವು ನೀತಿವಂತರಾಗಿ ಮರಣಿಸಿರುವವರು ದೇವರಿಗೆ ಮಹಿಮೆಗಳನ್ನು ಹಾಡುವವರಾಗಿ ಚಿತ್ರಿಸುತ್ತದೆ. ಪ್ರಕಟನೆ 5:8, 9ರಲ್ಲಿ ನಾಲ್ಕು ಜೀವವುಳ್ಳ ಜೀವಿಗಳು ಮತ್ತು ಇಪ್ಪತ್ತು ನಾಲ್ಕು ಹಿರಿಯರು ಹಾಡುತ್ತಿರುತ್ತಾರೆ; 14:3ರಲ್ಲಿ 144,000 ಹಾಡುತ್ತಿರುವದಾಗಿ ಹೇಳಲ್ಪಟ್ಟಿದೆ; ಮತ್ತು 15:2, 3ರಲ್ಲಿ, "ಮೃಗದ ವಿಗ್ರಹಕ್ಕೆ ನಮಸ್ಕರಿಸದೆಯೂ ಅದರ ಹೆಸರಿನ ಮುದ್ರೆಹಾಕಿಸಿಕೊಳ್ಳ ದೆಯೂ ಅದರ ಮೇಲೆ ಜಯ ಹೊಂದಿದವರು" ಮೋಶೆಯ ಹಾಡನ್ನೂ ಯಜ್ಞದ ಕುರಿಯಾದಾತನ ಹಾಡನ್ನೂ ಹಾಡುತ್ತಿರುವದಾಗಿ ಬಣ್ಣಿಸಲ್ಪಟ್ಟಿದ್ದಾರೆ.

ಪರಲೋಕದಲ್ಲಿ ಚಟುವಟಿಕೆಯಿಲ್ಲದೆ "ಆತ್ಮವು ನಿದ್ರಿಸುವದರ" ಕುರಿತು ಬೈಬಲಿನಲ್ಲಿ ಯಾವದೇ ಪುರಾವೆ ಇರುವದಿಲ್ಲ. ಲಾಜರನು ಮರಣ ಹೊಂದಿದಾಗ ಅಕ್ಷರಶಃ "ಅಬ್ರಹಾಮನ ಎದೆಗೆ" "ಯೊಳಗೆ" (εἰς, *eis*) ಒರಗಿಸಲ್ಪಟ್ಟನೆಂದು ಚಿತ್ರಿಸಲ್ಪಟ್ಟಿದೆ (ಲೂಕ 16:22). ಆತನು ಅಲ್ಲಿ ಏನು ಮಾಡಿದನೆಂಬುದು ನಿಖರವಾಗಿ ಹೇಳಲ್ಪಟ್ಟಿಲ್ಲ, ಆದರೆ ಮಾತನಾಡುವಂತಹ ಅಬ್ರಹಾಮನ ಪ್ರಸನ್ನತೆಯಲ್ಲಿ ಲಾಜರನು ಸಂಪೂರ್ಣವಾಗಿ ನಿದ್ರಿಸುವನು, ಏನನ್ನೂ ಮಾಡುವದಿಲ್ಲ ಎಂಬುದು ಅರ್ಥವಿಲ್ಲದ್ದಾಗಿದೆ. ಪಶ್ಚಾತ್ತಾಪ ಪಟ್ಟ ಕಳ್ಳನು ಅದೇ ದಿನದಲ್ಲಿ ಪರದೈಸನ್ನು ಅನುಭವಿಸುವನೆಂದು ಯೇಸು ಹೇಳಿದನು (ಲೂಕ 23:43). ಅಂತಹ ಆಶೀರ್ವಾದಕರವೆಂದು ಸೂಚಿಸಲ್ಪಟ್ಟಿರುವ ಪ್ರಾಂತ್ಯದಲ್ಲಿ ಸಂಪೂರ್ಣ ನಿಷ್ಕ್ರಿಯ ಇರುತ್ತದೆಂದಾದರೆ, ಅದು ಪ್ರಯಾಣಕ್ಕೆ ಯೋಗ್ಯ ಸ್ಥಳವೆಂದು ಅನ್ನಿಸುವದಿಲ್ಲ. ಆದಾಗ್ಯೂ, ಇದು ಮತ್ತು ಇತರ ವಾಕ್ಯಭಾಗಗಳು ಜೀವನದ ಚಿಂತೆಗಳು ಮತ್ತು ಸಂಕಷ್ಟಗಳಿಂದ ಸ್ವತಂತ್ರ ಸಿಕ್ಕುವದೆಂದು ಸೂಚಿಸುತ್ತವೆ. Albert Barnesನು ಅಭಿಪ್ರಾಯ ಪಟ್ಟದ್ದೇನೆಂದರೆ, "ನಮ್ಮ ಪರಿಶ್ರಮಗಳೆಲ್ಲಾ ಮುಗಿದು ಹೋಗುವವು. ಬಳಲಿದ ಮನುಷ್ಯನು ತನ್ನ ಭಾರವನ್ನು ಕೆಳಕ್ಕೆ ಇಳಿಸುವನು; ಬರಿದಾದ ಮನುಷ್ಯನು ಇನ್ನು ಮೇಲೆ ಆಯಾಸವನ್ನು ತಿಳಿಯನು."[26] ನಿಶ್ಚಯವಾಗಿಯೂ, ನಿತ್ಯವಾದ ಸಬ್ಬತ್ ದೇವರಿಗೆ ಮಹಿಮೆಯಲ್ಲಿ ಸೇವೆ ಮಾಡುವ ಒಂದು ಕಾಲವಾಗಿರುವದು, ಆದರೆ ಅದು ವಿಶ್ರಾಂತಿಗಾಗಿರುವ ಹಂಬಿಕೆಯನ್ನು ಸಹ ನೆರವೇರಿಸುವದು.

**ವಚನ 11.** ದೇವರ **ವಿಶ್ರಾಂತಿ** ಯನ್ನು ಕಡೇ ಬಾರಿಗೆ ಪ್ರಸ್ತಾಪಿಸುವದರೊಂದಿಗೆ, ಈ ವಚನವು ಅಂತಿಮ ಬುದ್ಧಿವಾದವನ್ನು ಕೊಡುತ್ತದೆ. ಪರಲೋಕವನ್ನು **ಸೇರುವದಕ್ಕೆ** (ಪ್ರವೇಶಿಸುವದಕ್ಕೆ) ಪ್ರಯತ್ನವನ್ನು ಪಡತಕ್ಕದ್ದು, ಯಾಕೆಂದರೆ ಪ್ರಯಾಸವಿಲ್ಲದೆ ಅದನ್ನು ಪ್ರವೇಶಿಸುವದಕ್ಕಾಗುವದಿಲ್ಲ. **ಪ್ರಯಾಸ ಪಡೋಣ** ಎಂಬುದಕ್ಕೆ (σπουδάζω, *spoudazō* ಎಂಬುದರಿಂದ ಬಂದದ್ದು) ಬಲವಾಗಿ ಹಂಬಲಿಸುವದು ಎಂಬ ಅನುವಾದ ಕೊಡಲ್ಪಟ್ಟಿರುತ್ತದೆ, ಅದರರ್ಥವು "ಅತ್ಯಾಸಕ್ತಿಯಿಂದ ಪರಿಶ್ರಮ ಪಡಿರಿ, ಸಕಲ ಪ್ರಯತ್ನವನ್ನು ಮಾಡಿರಿ, ವೈರಾಗ್ಯವುಳ್ಳವರಾಗಿರಿ."[27] ಅದೇ ಪದವು 2 ಪೇತ್ರ 1:10ರಲ್ಲಿ "ಜಾಗ್ರತೆಯಾಗಿರಿ" ಎಂದು ಅನುವಾದಿಸಲ್ಪಟ್ಟಿದೆ. ಇಕ್ಕಟ್ಟಾದ ದಾರಿಯಲ್ಲಿ ಪ್ರವೇಶಿಸುವದಕ್ಕೆ ನಿಜಕ್ಕೂ ಪ್ರಯಾಸ ಪಡಬೇಕಾಗಿರುತ್ತದೆ; ಆದರೆ ಲೂಕ 13:24ರಲ್ಲಿ ಈ ಪದವು ರಕ್ಷಣೆಯ ದಾರಿಯಲ್ಲಿ ἀγωνίζομαι (*agōnizomai*) ಪ್ರವೇಸಿಸುವದರ ಕುರಿತಾಗಿ ಬಳಸಲ್ಪಟ್ಟಿದೆ. ಲೂಕನ ಸುವಾರ್ತೆಯಲ್ಲಿರುವ ಈ ಪದವು ಇಬ್ರಿಯ 4:11ರಲ್ಲಿನ "ಪ್ರಯಾಸ" ಎಂಬುದಕ್ಕಿಂತಲೂ ಹೆಚ್ಚಿನ ಪರಿಶ್ರಮದ ಅಗತ್ಯವನ್ನು ಸೂಚಿಸುತ್ತದೆ. ಇಬ್ರಿಯರಿಗೆ ಇಕ್ಕಟ್ಟಾದ ದಾರಿಯಲ್ಲಿ ಉಳಿಯುವದಕ್ಕಿದ್ದ ಕಠಿಣತೆಗಿಂತಲೂ ಅನ್ಯಜನರು ಅದರಲ್ಲಿ ಪ್ರವೇಶಿಸುವದು ಹೆಚ್ಚು ಕಠಿಣವಾಗಿತ್ತೋ? ಆ ಯೋಚನೆಯನ್ನು

ಪರೋಕ್ಷವಾಗಿ ಸೂಚಿಸಬಹುದಾಗಿದೆ, ಆದರೆ ಕನಿಷ್ಠ ನಾವು "ಆರಾಮವಾಗಿರುವ ಹೂವಿನ ಹಾಸಿಗೆಗಳ ಮೇಲಿರುವದಕ್ಕೆ ಆಕಾಶಗಳೊಳಗೆ ಎತ್ತಿಕೊಂಡು ಹೋಗಲ್ಪಡುವೆವು" ಎಂಬುದನ್ನು ನಾವು ಎದುರು ನೋಡಕೂಡದು. ಬದಲಾಗಿ, "[ನಾವು] ಆಳಬೇಕೆಂದರೆ [ನಾವು] ಹೋರಾಡಬೇಕು."[28] ಪರಲೋಕದೊಳಗೆ ಆಕಸ್ಮಿಕವಾಗಿ ಜಾರಿಕೊಳ್ಳುವಂತದ್ದು ಇರುವದಿಲ್ಲ.[29] ನಾವು ಪ್ರಯಾಸ ಪಡುತ್ತೇವೆ ಯಾಕೆಂದರೆ ನಿತ್ಯವಾದ ವಿಮೋಚನೆಯು ಅಷ್ಟೊಂದು ಮಹಿಮಕರವಾದದ್ದು, ಮತ್ತು ಅದನ್ನು ತಪ್ಪಿಸಿಕೊಳ್ಳುವ ವಿನಾಶವು ಅಷ್ಟೊಂದು ದೊಡ್ಡದು ಮತ್ತು ಭಯಂಕರವಾದದ್ದು.

"ಪ್ರಯಾಸ ಪಡೋಣ" ಎಂದು ಬೇಡಿಕೊಳ್ಳುವಿಕೆಯು ಇದ್ದಾಗ್ಯೂ, ಕೆಲವು ವ್ಯಾಖ್ಯಾನಕಾರರು ಈ ಯೋಚನೆಯನ್ನು ಸೇರ್ಪಡೆಗೊಳಿಸುತ್ತಾರೆ: "ಆದರೆ ಅದು ಕ್ರಿಯೆಗಳಿಂದ ಸಂಪಾದಿಸಿಕೊಳ್ಳಲ್ಪಡಬಲ್ಲದು ಎಂದು ನಾವು ಊಹಿಸಕೂಡದು."[30] ಕೆಲವರು ಯಾವದೇ ವಿಧೇಯತೆ ಅಥವಾ ಮಾನವ ಪ್ರಯಾಸಗಳು, ನಂಬಿಕೆಯಲ್ಲಿ ಮಾಡಿದವುಗಳಾಗಿದ್ದಾಗ್ಯೂ, ಈ ಎಚ್ಚರಿಕೆಯನ್ನು ಸೇರಿಸಿಕೊಳ್ಳತಕ್ಕದ್ದೆಂದು ಊಹಿಸಿಕೊಳ್ಳುವಂತೆ ತೋರುತ್ತದೆ: "ಇದು ನಿನ್ನನ್ನು ಪರಲೋಕಕ್ಕೆ ಸೇರಿಸುವದೆಂದು ಭಾವಿಸದಿರು!" ನಮ್ಮ ಪ್ರಯಾಸಗಳ ಮೇಲೆ ಆಧಾರವಾಗಿದೆ ಎಂದು ನಾವು ಯೋಚಿಸುವ ಯಾವದೇ ಕಾರ್ಯವು ನಮ್ಮ ರಕ್ಷಣೆಯನ್ನು ಒಂದು ಕ್ರಿಯೆಗಳ ವ್ಯವಸ್ಥೆಯನ್ನಾಗಿ ಮಾಡುತ್ತದೆ ಎಂದು ಅವರ ಯೋಚನೆಯಾಗಿದೆ. ಇದು ಕ್ಯಾಲ್ವಿನ್‌ವಾದದ ಉಪದೇಶದ ಒಂದು ಪರಿಣಾಮವಾಗಿರುತ್ತದೆ. ರಕ್ಷಣೆಯನ್ನು ಪಡೆದುಕೊಳ್ಳುವದಕ್ಕಾಗಿ ಎಲ್ಲಾ "ಕ್ರಿಯೆಗಳು" ಅನಾವಶ್ಯಕವೆಂದು ಮಾಡುವದಕ್ಕೆ ಅನೇಕ ಸಾರಿ ಬಳಸಲಾಗುವ ವಾಕ್ಯಭಾಗಗಳೆಂದರೆ ಎಫೆಸ 2:8, 9 ಮತ್ತು ರೋಮಾ 3:27-4:8.

ನಾವು ನಮ್ಮ ನಂಬಿಗಸ್ತಿಕೆಯನ್ನು ಮುಂದುವರೆಸುವದಕ್ಕೆ ಪ್ರಯಾಸ ಪಡಬೇಕು ಮತ್ತು ಬಳಿಕ ರಕ್ಷಣೆಗೆ ಯಾವದೇ ಕೆಲಸಗಳು ಅವಶ್ಯಕವೆಂಬುದನ್ನು ಅಲ್ಲಗಳೆಯಬೇಕೆಂಬುದನ್ನು ಒಬ್ಬನು ಹೇಗೆ ಒಪ್ಪಿಕೊಳ್ಳಬಲ್ಲನು? ರೋಮಾ 3:28ರಲ್ಲಿ ಹೊರಗಿಡಲಾಗಿರುವ ಕ್ರಿಯೆಗಳಾವವೆಂದರೆ "ಧರ್ಮಶಾಸ್ತ್ರದ ಕ್ರಿಯೆಗಳು," ಅಂದರೆ ಮೋಶೆಯ ಧರ್ಮಶಾಸ್ತ್ರ. ಎಫೆಸ 2:8, 9ರಲ್ಲಿ ಹೊರಗಿಡಲಾಗಿರುವ "ಕ್ರಿಯೆಗಳು" ನಿಶ್ಚಯವಾಗಿಯೂ ಅರ್ಹತೆಗೊಳಿಸುವ ಕ್ರಿಯೆಗಳಾಗಿರುತ್ತವೆ, ಆದರೆ ನಂಬಿಕೆಯಿಂದ ಮಾಡಲ್ಪಡುವ ವಿಧೇಯತೆಯ ಅವಶ್ಯಕತೆಯನ್ನು ತೆಗೆದು ಹಾಕಲ್ಪಡುವದಕ್ಕಾಗುವದಿಲ್ಲ. ರಕ್ಷಣೆಯು ನಮಗೆ ಉಚಿತ ವರವಾಗಿದೆ, ಮತ್ತು "ಅದು ಪುಣ್ಯಕ್ರಿಯೆಗಳಿಂದ ಉಂಟಾದದ್ದಲ್ಲ; ಅದದರಿಂದ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ" (ಎಫೆಸ 2:9). ಎಂದಾದರೂ ತನ್ನ ನಂಬಿಕೆಯ ಅಥವಾ ಪಶ್ಚಾತ್ತಾಪದ ಕೆಲಸಕ್ಕಾಗಿ ಹೊಗಳಿಕೊಂಡಿರುವವನು ಯಾವನಾದರೂ ಇದ್ದಾನೋ? ಬಹುಶಃ ಕೆಲವರು ಹೊಗಳಿಕೊಳ್ಳಬಹುದು, ಆದರೆ ಹಾಗೆ ಮಾಡುವದರಲ್ಲಿ ಅವರನ್ನು ನ್ಯಾಯವೆಂದು ಹೇಳುವದಕ್ಕಾಗುವದಿಲ್ಲ ಯಾಕೆಂದರೆ ಯೇಸು ತನ್ನ ರಕ್ತದ ಮೂಲಕ ಅದನ್ನು ಅನುಮತಿಸದೆ ಹೋಗಿದ್ದರೆ ಯಾವದೇ ಕಾರ್ಯವು ರಕ್ಷಣೆಯನ್ನು ತರುವದಿಲ್ಲ. ಸ್ವತಃ ನಂಬಿಕೆಯೇ ಒಂದು "ಕ್ರಿಯೆ" ಆಗಿದೆ ಎಂದು ಯೇಸು ನಿರ್ದಿಷ್ಟವಾಗಿ ಹೇಳಿದನು (ನೋಡಿರಿ ಯೋಹಾನ 6:28, 29), ಆದರೆ ಇದು ರಕ್ಷಣೆಯನ್ನು ಸಂಪಾದಿಸಿಕೊಳ್ಳುವದಕ್ಕೆ ಅರ್ಹತೆಯ ಒಂದು ಕೆಲಸವಲ್ಲ.

ರೋಮಾ 13:11 ಹೀಗೆ ಘೋಷಿಸುತ್ತದೆ, "ಈಗಿನ ಕಾಲವು ನಿದ್ದೆಯಿಂದ ಎಚ್ಚರವಾಗತಕ್ಕ ಕಾಲವೆಂದು ಅರಿತು ಇದನ್ನೆಲ್ಲಾ ಮಾಡಿರಿ. ನಾವು ಕ್ರಿಸ್ತನನ್ನು ಮೊದಲು ನಂಬಿದ ಕಾಲದಲ್ಲಿ ಇದ್ದದ್ದಕ್ಕಿಂತ ಈಗ ನಮ್ಮ ವಿಮೋಚನೆಯು ಹತ್ತಿರವಾಯಿತು." "[ಈ ಕ್ರೈಸ್ತರು] ನಂಬಿದ" ಎಂಬುದು ಅವರ ಪರಿವರ್ತನೆಯ ಸಮಯವನ್ನು ಸೂಚಿಸುತ್ತದೆ. ಹಾಗಾದರೆ, ಅವರ

"ನಂಬಿಕೆ"ಯು ಪೌಲನು ಈಗಾಗಲೆ ಅವರಿಗೆ ಜ್ಞಾಪಕಪಡಿಸಿದ ಹಾಗೆ, ಅವರು "ಕ್ರಿಸ್ತನಲ್ಲಿ" ದೀಕ್ಷಾಸ್ನಾನ ಮಾಡಿಸಿಕೊಂಡಿದ್ದು ಸೇರಿರುತ್ತದೆ (ರೋಮಾ 6:3, 4). ಅವರ ಕ್ರಿಯೆಯು ಅವರ ಪರಿವರ್ತನೆಯನ್ನು ಅಪೊಸ್ತಲರ ಕೃತ್ಯಗಳು 2ನೇ ಅಧ್ಯಾಯದ ನಂತರ ಇತರ ಎಲ್ಲಾ ಪರಿವರ್ತನೆಗಳೊಂದಿಗೆ ಸಾಮರಸ್ಯತೆ ಹೊಂದಿರುತ್ತದೆ.

ನಮ್ಮ ರಕ್ಷಣೆಗೆ ಜೀವಧಾರಕವಾಗಿರುವದರಿಂದ ಹೊರಗಿಡಲ್ಪಟ್ಟಿರುವ ಕ್ರಿಯೆಗಳು ಯಾವವೆಂದರೆ ನೀತಿವಂತರೆಂದು ನಿರ್ಣಯಿಸಲ್ಪಡುವ ಯಾವದೇ ವ್ಯವಸ್ಥೆಗೆ ಅರ್ಹತೆಗೊಳಿಸುವ ಕ್ರಿಯೆಗಳು, ಯಾಕೆಂದರೆ ಅದು ಧರ್ಮಶಾಸ್ತ್ರಕ್ಕೆ ಪರಿಪೂರ್ಣ ವಿಧೆಯತೆಯನ್ನು ತೋರಿಸುವದನ್ನು ಅಗತ್ಯಗೊಳಿಸುತ್ತದೆ. ಒಬ್ಬನು ಪರಿಪೂರ್ಣವಾಗಿ ಜೀವಿಸುವದಕ್ಕೆ ಸಾಧ್ಯವಿರುವದಾದರೆ, ಆತನ ಕೆಲಸವು ಅವನಿಗೆ ರಕ್ಷಣೆಯನ್ನು "ಸಂಪಾದಿಸಿ ಕೊಡುವದು" ಎಂದಾಗುತ್ತದೆ. ಹೇಗೂ, ಯೇಸುವನ್ನು ಹೊರತು ಪಡಿಸಿ ಬೇರೆ ಯಾವನೂ ಆ ರೀತಿಯ ಜೀವನವನ್ನು ಎಂದೂ ನಡಿಸಿರುವದಿಲ್ಲ. ನಮಗಾದರೋ, ಅಂಥ ರಕ್ಷಣೆಯು ಅಸಾಧ್ಯವಾದದ್ದು. ಇನ್ನೊಂದೆಡೆಯಲ್ಲಿ, ವಿಧೇಯತೆಯಲ್ಲಿ ಮಾಡಲಾಗುವ ನಂಬಿಕೆಯ ಕೆಲಸಗಳು ಅವಶ್ಯಕವಾಗಿರುತ್ತವೆ, ನಾವು ಕ್ರಿಸ್ತನಿಗೆ ಸೇರದವರಾಗಿರುವಾಗ ಮಾಡಿದ ಪಾಪಗಳ ಅಪರಾಧಗಳಿಂದ ಆರಂಭಿಕ ವಿಮೋಚನೆಯನ್ನು ಪಡೆದುಕೊಳ್ಳುವದು ಮತ್ತು ನಮ್ಮ ರಕ್ಷಣೆಯನ್ನು ಕಾಪಾಡಿಕೊಳ್ಳುವದು ಎರಡಕ್ಕೂ ಅವಶ್ಯಕವಾಗಿರುತ್ತವೆ.

ನಾವು ಇಸ್ರಾಯೇಲ್ಯರ ಉದಾಹರಣೆಯಿಂದ ಕಲಿಯತಕ್ಕದ್ದು. ಎಲ್ಲಾ ಕಾಲಕ್ಕೂ ಸಮರ್ಪಕವಾದ ನೈತಿಕ ನಡವಳಿಕೆಗೆ ಉದಾಹರಣೆಗಳ ಪುಸ್ತಕವಾಗಿ ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹಳೆಯ ಒಡಂಬಡಿಕೆಯನ್ನು ಉಪಯೋಗಿಸಿದನು. ಅದೇ ರೀತಿಯಲ್ಲಿ ಪೌಲನು ಇಸ್ರಾಯೇಲ್ಯರ ತಪ್ಪು ನಡವಳಿಕೆಯಿಂದ ಪಾಠವನ್ನು ಕಲಿಸುವದಕ್ಕೆ 1 ಕೊರಿಂಥ 10:1-12ರಲ್ಲಿ ಅದನ್ನೇ ಮಾಡುತ್ತಾನೆ: ನಮಗೆ ರಕ್ಷಣೆಯ ಬಗ್ಗೆ ನಿಶ್ಚಯತೆಯಿದೆ ಎಂದು ನಾವು ಯೋಚಿಸುವದಾದರೆ, ಬೀಳದಂತೆ "ಎಚ್ಚರಿಕೆಯಾಗಿರಲಿ" (ವ. 12). ಅಲ್ಲದೆ ಪೌಲನು ಹೀಗೆ ಸಹ ಬರೆದನು, "ಕ್ರಿಸ್ತ*ನಂಬಿಕೆ*ಯಲ್ಲಿ ಇದ್ದೀರೋ ಇಲ್ಲವೋ ಎಂದು ನಿಮ್ಮನ್ನು ನೀವೇ ಪರೀಕ್ಷಿಸಿಕೊಳ್ಳಿರಿ, ನಿಮ್ಮನ್ನು ಪರಿಶೋಧಿಸಿಕೊಳ್ಳಿರಿ" (2 ಕೊರಿಂಥ 13:5; ಒತ್ತಿ ಹೇಳಿದ್ದು ನನ್ನದು). ಈ ಪದಗಳು ಇಬ್ರಿಯ 4:11ಕ್ಕೆ ಹೋಲುವಂತಿದೆ: **ನಮ್ಮಲ್ಲಿ ಒಬ್ಬರಾದರೂ ಅವರ ಅವಿಧೇಯತ್ವವನ್ನು ಅನುಸರಿಸುವವರಾಗಬಾರದು**. **ಅದೇ ಉದಾಹರಣೆ** (ὑπόδειγμα, *hupodeigma*, "ಮಾದರಿ" ಅಥವಾ "ನಕಲು ಪ್ರತಿ" ಎಂಬ ಅರ್ಥವುಳ್ಳ) ಎಂಬ ಮಾತು ಮತ್ತೊಂದಾವರ್ತಿ ಹಳೆಯ ಮತ್ತು ಹೊಸ ಒಡಂಬಡಿಕೆಗಳೆರಡರಲ್ಲಿಯೂ ನಮಗೆ ಮಾದರಿಗಳು ತುಂಬಿರುತ್ತವೆ ಎಂಬುದನ್ನು ಜ್ಞಾಪಿಸುತ್ತದೆ. ಈ ಸಂದರ್ಭದಲ್ಲಿ ನಮ್ಮ ನಂಬಿಕೆಯನ್ನು ಬಲಹೀನವಾಗಿ ಬೆಳೆಯುವಂತೆ ಬಿಟ್ಟು ತಪ್ಪಿಹೋಗದಂತೆ ಇರುವ ಹಾಗೆ ಎಚ್ಚರಿಸುವದಕ್ಕೆ ಒಂದು ಕೆಟ್ಟ ಉದಾಹರಣೆಯು ಬಳಸಲ್ಪಟ್ಟಿರುವದನ್ನು ನಾವು ಕಾಣಬಹುದು. 2 ಪೇತ್ರ 2:6ರಲ್ಲಿ ಸೊದೋಮ್ಗೊಮೋರ ಪಟ್ಟಣಗಳಿಗೆ ಸಂಬಂಧಿಸಿದಂತೆ ಇದೇ ಪದವು "ಇಂಥದೆಂದು [ಉದಾಹರಣೆಯಾಗಿ]" ತೋರಿಸುವದಕ್ಕೆ ಎಂಬುದು ಬಳಸಲ್ಪಟ್ಟಿದೆ. ಭಕ್ತಿಹೀನ ಜೀವಿತವನ್ನು ನಡಿಸುವವರೆಲ್ಲರ ಮೇಲೆ ಬರಲಿರುವ ನಾಶನವನ್ನು ಸೂಚಿಸುವದಕ್ಕೆ ಈ ಪಟ್ಟಣಗಳು ಈಗಲೂ ಒಂದು ಉದಾಹರಣೆಯಾಗಿರುತ್ತವೆ. ಸ್ವತಃ ಬೈಬಲ್, ಸಂಪೂರ್ಣವಾಗಿ ಹೇಗೆ ಜೀವಿಸಬೇಕು ಮತ್ತು ಜೀವಿಸಬಾರದು ಎಂಬುದಕ್ಕೆ ಉದಾಹರಣೆಗಳ ನಿರಂತರವಾದ ಮಾದರಿಯಾಗಿರುತ್ತದೆ. "ಶಾಸ್ತ್ರಗಳಲ್ಲಿ ಅಧಿಕಾರದ ಮಾದರಿ ಇಲ್ಲ" ಎಂದು ಹೇಳುವದು ದೈವಿಕ ಪ್ರಕಟನೆಯ ಸ್ವಭಾವವನ್ನು ಅರ್ಥಮಾಡಿಕೊಳ್ಳದೆ ಇರುವಂತಾಗುತ್ತದೆ.

ನಾವು ಮರಣಿಸಿದ ತಕ್ಷಣ ನಿತ್ಯ ಪರಲೋಕದೊಳಗೆ ಪ್ರವೇಶಿಸದಿದ್ದರೆ, ಆಗಲೂ ನಾವು ಒಂದು "ವಿಶ್ರಾಂತಿ"ಯನ್ನು ಪ್ರವೇಶಿಸುತ್ತೇವೆಂಬುದು ಸತ್ಯವಾಗಿರುವ ಸಾಧ್ಯತೆಯಿದೆ. ನಾವು ಮರಣದ ವೇಳೆ ನೇರವಾಗಿ ಪರಲೋಕವನ್ನು ಪ್ರವೇಶಿಸುವದಾದರೆ, ಯೇಸು ಲೂಕ 16:19-31ರಲ್ಲಿ ನೀಡಿದ ಐಶ್ವರ್ಯವಂತ ಮತ್ತು ಲಾಜರನ ದೃಷ್ಟಾಂತದ ಕಾಲದಿಂದ ಇಲ್ಲಿಯ ತನಕ ಸಮಯದೊಳಗೆ ಆತನ ಉಪದೇಶ ಅಥವಾ ಪರಿಸ್ಥಿತಿಯು ತೀವ್ರ ಸ್ವರೂಪದಲ್ಲಿ ಬದಲಾಗಿರಬೇಕು ಎಂದಾಗುತ್ತದೆ.

## ಕ್ರೈಸ್ತರಿಗೋಸ್ಕರ ದೇವರ ವಾಕ್ಯ (4:12, 13)

**[12]ಯಾಕೆಂದರೆ ದೇವರ ವಾಕ್ಯವು ಸಜೀವವಾದದ್ದು, ಕಾರ್ಯಸಾಧಕವಾದದ್ದು, ಯಾವ ಇಬ್ಬಾಯಿಕತ್ತಿಗಿಂತಲೂ ಹದವಾದದ್ದು, ಪ್ರಾಣ ಆತ್ಮಗಳನ್ನೂ ಕೀಲುಮಜ್ಜೆಗಳನ್ನೂ ವಿಭಾಗಿಸುವಷ್ಟು ಮಟ್ಟಿಗೂ ತೂರಿಹೋಗುವಂಥದು, ಹೃದಯದ ಆಲೋಚನೆಗಳನ್ನೂ ಉದ್ದೇಶಗಳನ್ನೂ ವಿವೇಚಿಸುವಂಥದು ಆಗಿದೆ. [13]ನಾವು ಯಾವಾತನಿಗೆ ಲೆಕ್ಕ ಒಪ್ಪಿಸಬೇಕಾಗಿದೆಯೋ ಆತನ ದೃಷ್ಟಿಗೆ ಸಮಸ್ತವೂ ಮುಚ್ಚುಮರೆಯಿಲ್ಲದ್ದಾಗಿಯೂ ಬೈಲಾದದ್ದಾಗಿಯೂ ಅದೆ. ಆತನ ಸನ್ನಿಧಿಯಲ್ಲಿ ಅಗೋಚರವಾಗಿರುವ ಸೃಷ್ಟಿಯೂ ಒಂದೂ ಇಲ್ಲ.**

4:4-11ರ ಬುದ್ಧಿವಾದವು 12 ಮತ್ತು 13 ವಚನಗಳಲ್ಲಿ ದೇವರ ವಾಕ್ಯಕ್ಕೆ ಅಸಡ್ಡೆತನವನ್ನು ತೋರಿಸುವದು ಒಂದು ಗಂಭೀರವಾದ ತಪ್ಪು ಆಗಿರುತ್ತದೆಂಬ ಹೇಳಿಕೆಯೊಂದಿಗೆ ಮುಕ್ತಾಯಗೊಳಿಸಲ್ಪಡುತ್ತದೆ. 12ನೇ ವಚನದಲ್ಲಿರುವ "ವಾಕ್ಯ" ಎಂಬುದು ದೇವರ ವಾಕ್ಯವಾಗಿರತಕ್ಕದ್ದು — ಕೀರ್ತನೆ 95ರಲ್ಲಿ ಪ್ರಸ್ತಾಪಿಸಲ್ಪಟ್ಟಿರುವಂತೆ ಮೌಖಿಕ ವಾಕ್ಯವಾಗಿರಬಹುದು, ಅಥವಾ ಲಿಖಿತವಾಗಿರಬಹುದು, ಯಾಕೆಂದರೆ "ಬರೆಯಲ್ಪಟ್ಟ ಶಾಸ್ತ್ರ 'ದೇವರ ವಾಕ್ಯ'ವೆಂದು ಹೆಸರಿಸಲ್ಪಟ್ಟಿದೆ."[31]

12ನೇ ವಚನದಲ್ಲಿನ ನಾಲ್ಕು ಗ್ರೀಕ್ ಕೃದಂತಗಳು ಗಮನಕ್ಕೆ ತಂದುಕೊಳ್ಳಲು ಯೋಗ್ಯವಾಗಿವೆ: "ಸಜೀವ," "ಕಾರ್ಯಸಾಧಕ," "ತೂರಿಹೋಗುವಂತದು," "ವಿವೇಚಿಸುವಂತದು." ಬೈಬಲ್ ದೇವರ "ಸಜೀವ" ವಾಕ್ಯವಾಗಿದೆ, ಯಾಕೆಂದರೆ ಅದು ದೇವರಿಂದ ಬರುವ ಜೀವವನ್ನು ಕೊಡುತ್ತದೆ. ಅದು ಚೈತನ್ಯಗೊಳಿಸುವದರಲ್ಲಿ ಅಥವಾ ಪರಿಣಾಮಕಾರತ್ವವನ್ನು ಒದಗಿಸುವದರಲ್ಲಿ "ಕಾರ್ಯಸಾಧಕ" ಆಗಿರುತ್ತದೆ, ಅಂದರೆ ಅದು ತನ್ನ ಉದ್ದೇಶವನ್ನು ಸಾಧಿಸುವದಕ್ಕೆ ಶಕ್ತವಾಗಿದೆ. ಅಲ್ಲದೆ ಅದು "ತೂರಿಹೋಗುವಂಥದು" ಸಹ ಆಗಿದೆ; ದೇವರು ತನ್ನ ಲಿಖಿತ ವಾಕ್ಯದ ಮೂಲಕ ತನ್ನ ಸತ್ಯದಿಂದ ಆತ್ಮದ ಅಂತರಾಳವನ್ನು ತೂರಿಕೊಂಡು ಹೋಗುತ್ತಾನೆ. ಆತನ ಸಂದೇಶದ ಮನವರಿಕೆಗೊಳಿಸುವ ಸಂದೇಶದ ಮೂಲಕ, ನಾವು ನಮ್ಮನ್ನು ದಂಡನೆಗೊಳಪಟ್ಟ ಪಾಪಿಗಳೆಂಬುದನ್ನು ಅರಿತುಕೊಳ್ಳುವೆವು. ನಂತರ, ಶಾಸ್ತ್ರಗಳ ಸಂದೇಶದಲ್ಲಿ ತೋರ್ಪಡಿಸಲ್ಪಟ್ಟಿರುವ ಕೃಪೆಯ ಮೂಲಕ, ಆತನ ನಿತ್ಯವಾದ ವಿಶ್ರಾಂತಿಯೊಳಗೆ ಪ್ರವೇಶಿಸುವ ಮಹಿಮಕರವಾದ ನಿರೀಕ್ಷೆಯಲ್ಲಿ ನಂಬಿಕೆಯಿಡುವವರಾಗುತ್ತೇವೆ. ಅಂತಿಮವಾಗಿ, ದೇವರ ವಾಕ್ಯವು "ವಿವೇಚಿಸುವಂಥದು" ಯಾಕೆಂದರೆ ದೇವರಿಗೆ ನಮ್ಮ ಹೃದಯಗಳು ತಿಳಿದಿವೆ. ಆತನ ದೃಷ್ಟಿಗೆ ಯಾವದು ಮರೆಯಾಗಿರುವದಿಲ್ಲ (ವ. 13).

**ವಚನ 12.** ದೇವರ ಲಿಖಿತ ವಾಕ್ಯವು **ಸಜೀವವಾದದ್ದು** [ζάω, *zaō*], **ಕಾರ್ಯಸಾಧಕವಾದದ್ದು** (ἐνεργής, *energēs*). ದೇವರ ವಾಕ್ಯವೂ ಮಾನವ ಹೃದಯದ

ಆಲೋಚನೆಗಳನ್ನು ಪರಿಶೋಧಿಸಿ ಬಯಲುಗೊಳಿಸಬಲ್ಲದು. ಎಂಥ ಅತ್ಯಮೋಘವಾದ ಹೇಳಿಕೆ! ದೇವರ ವಾಕ್ಯವು ಸಜೀವವಾದದ್ದೆಂದು ಕರೆಯಲ್ಪಟ್ಟಿದೆ ಎಂಬುದರಲ್ಲಿ ಆಶ್ಚರ್ಯವಿಲ್ಲ! (ನೋಡಿರಿ ಅಪೊಸ್ತಲರ ಕೃತ್ಯಗಳು 7:38; 1 ಪೇತ್ರ 1:23.) "ದೇವರ ವಾಕ್ಯವು ಸಜೀವವಾಗಿದೆ, ಸಕ್ರಿಯವಾಗಿ ಸಜೀವವಾಗಿದೆ, ಮತ್ತು ಕಾಲರೂಪವು ಸೂಚಿಸುವ ಪ್ರಕಾರ, ನಿರಂತರವಾಗಿ ಕ್ರಿಯಾತ್ಮಕವಾಗಿದೆ. ಅದು ಶಕ್ತಿಶಾಲಿಯಾಗಿದೆ."[32] ದೇವರ ವಾಕ್ಯವು "ಸಜೀವವಾದದ್ದು" ಎಂಬ ಹೇಳಿಕೆಯು ಯೆಶಾಯ 55:11ನ್ನು ಜ್ಞಾಪಕಪಡಿಸುತ್ತದೆ, ಅಲ್ಲಿ ಪ್ರವಾದಿಯು ದೇವರ ವಾಕ್ಯವು "ವ್ಯರ್ಥವಾಗಿ" ಅಥವಾ "ಶೂನ್ಯವಾಗಿ" (KJV) ಆತನ ಬಳಿಗೆ ಹಿಂದಿರುಗುವದಿಲ್ಲ, ಆದರೆ ಅದು ಏನು ಮಾಡಬೇಕೆಂದು ಬಯಸುತ್ತಾನೋ ಅದನ್ನು ನೆರವೇರಿಸುವದು ಎಂದು ಘೋಷಿಸುತ್ತಾನೆ. ದೇವರಿಂದ ಯಾವದೂ ಮರೆಯಾಗಿರುವದಿಲ್ಲವಾದ್ದರಿಂದ, ಆತನು ಸುವಾರ್ತೆಯನ್ನು ನಮ್ಮ ಜೀವದ ಪ್ರತಿಯೊಂದು ಭಾಗದ ಮೇಲೆ ಪರಿಣಾಮ ಬೀರಿ ನಮ್ಮ ಭಾವಗಳನ್ನು ಬೈಲಿಗೆ ತರುವ ರೀತಿಯಲ್ಲಿ ಅದನ್ನು ವಿನ್ಯಾಸಗೊಳಿಸುವದು ಸೂಕ್ತವಾಗಿರುತ್ತದೆ.

ನಮ್ಮನ್ನು ನಮಗೆ ತೋರಿಸಿ ಕೊಡುವ ವೇಳೆ, ದೇವರ ತನ್ನನ್ನು ಸಹ ತನ್ನ ವಾಕ್ಯದಲ್ಲಿ ನಮಗೆ ಬಯಲುಪಡಿಸಿಕೊಳ್ಳುತ್ತಾನೆ. ಸಾಧ್ಯವಾದ ಅತ್ಯಂತ ನಿಕಟವಾದ ಸಂಬಂಧವು ದೇವರು ಮತ್ತು ಆತನ ವಾಕ್ಯದ ನಡುವೆ ಇರುತ್ತದೆ.[33] 12ನೇ ವಚನದಲ್ಲಿ "ದೇವರ ವಾಕ್ಯ" ಎಂಬುದು ಸ್ವತಃ ದೇವರನ್ನು ಸೂಚಿಸುವ ಲಂಬೋಕ್ತಿ (ಸುತ್ತಿಬಳಸಿದ ಸೂಚನೆ) ಆಗಿರುತ್ತದೆ, ಯಾಕೆಂದರೆ 13ನೇ ವಚನವು ಸುಲಭವಾಗಿ ದೇವರ ಬಗ್ಗೆ ಮಾತಾಡುವದಕ್ಕೆ ಬದಲಾಗುತ್ತದೆ.[34] ವಾಕ್ಯವು ವಾಚಕನಿಗೆ ಆತನು ಆತ್ಮದಲ್ಲಿ ಎಲ್ಲಿ ಬಳಲುತ್ತಿದ್ದಾನೆಂಬುದನ್ನು ತಿಳಿಸಿ ಆತನ ಆತ್ಮದ ಕಾಯಿಲೆಗೆ ನಿಜವಾದ ಪರಿಹಾರೋಪಾಯವನ್ನು ಒದಗಿಸಬಲ್ಲದು. ದೇವರ ಸಂದೇಶವು ಗತಿಸಿದ ಹಿಂದಿನ ಕಾಲಕ್ಕಾಗಿ ಅಲ್ಲ; ಅದು "ಈಹೊತ್ತು" ನಮಗೋಸ್ಕರ ಸಜೀವವಾಗಿದೆ (ವ. 7).

12ನೇ ವಚನದಲ್ಲಿರುವ "ವಾಕ್ಯ" ಎಂಬುದು λόγος (*logos*) ಎಂಬ ಪದದಿಂದ ಬಂದದ್ದಾಗಿದೆ, ಅದು ಯೇಸು ಕ್ರಿಸ್ತನಿಗೆ ಬಳಸಿದ ಪದವಾಗಿದೆ.[35] ಕೆಲವು ಪ್ರಾಚೀನ ಬರಹಗಾರರು ಈ ಉಲ್ಲೇಖನವು ಸಹ ಯೇಸುವನ್ನು ಸೂಚಿಸಿ ಹೇಳಿದ್ದೆಂದು ಕಂಡರು. ದೇವರ ವಾಸ್ತವಾದ ಮೌಖಿಕ ಅಥವಾ ಲಿಖಿತ ವಾಕ್ಯಕ್ಕೆ ಅಂತಹ ಶಕ್ತಿಯನ್ನು ಹೊಂದಿರುವದಾಗಿ ಹೇಳಲ್ಪಟ್ಟಿಲ್ಲವೆಂದು ಅವರು ಭಾವಿಸಿದ್ದರಿಂದ ಆ ಅಭಿಪ್ರಾಯವನ್ನು ತೆಗೆದುಕೊಂಡರು. ಹೇಗೂ, ಅವರು ಇಂದಿನ ಕೆಲವು ಸಂದೇಹವಾದಿಗಳಂತೆ ದೇವರ ಲಿಖಿತ ವಾಕ್ಯವು ಒಂದು ಮೃತ ಪತ್ರವಾಗಿದ್ದು ಸ್ವಲ್ಪ ಅಥವಾ ಯಾವದೇ ಶಕ್ತಿಯನ್ನು ಹೊಂದಿಲ್ಲದ್ದಾಗಿದೆ ಎಂಬ ಅತಿರೇಕದ ಅಭಿಪ್ರಾಯಕ್ಕೆ ಹೋಗಲಿಲ್ಲ.

"ದೇವರ ವಾಕ್ಯವು . . ." **ಯಾವ ಇಬ್ಬಾಯಿಕತ್ತಿಗಿಂತಲೂ ಹದವಾದದ್ದು, ಪ್ರಾಣ ಆತ್ಮಗಳನ್ನೂ ಕೀಲುಮಜ್ಜೆಗಳನ್ನೂ ವಿಭಾಗಿಸುವಷ್ಟು ಮಟ್ಟಿಗೂ ತೂರಿಹೋಗುವಂಥದು.** ಬಹು ಸಂಭಾವ್ಯವಾಗಿ "ವಾಕ್ಯ" ಎಂಬುದು ಕ್ರಿಸ್ತನಿಂದ ನುಡಿಯಲ್ಪಟ್ಟ ವಾಕ್ಯಗಳು, ಸುವಾರ್ತೆಯ ಸಂದೇಶ – ಜೊತೆಗೆ ಶಾಸ್ತ್ರಗಳಲ್ಲಿರುವ ದೇವರ ಇತರ ಎಲ್ಲಾ ಸಂದೇಶಗಳು – ಎಂದರ್ಥವಾಗಿರುತ್ತದೆ, ಹೊರತು ಯೇಸು ಕ್ರಿಸ್ತನ ವ್ಯಕ್ತಿತನವನ್ನು ಸೂಚಿಸುವದಿಲ್ಲ. "ವಾಕ್ಯವು ಒಬ್ಬ 'ವಿವೇಚಿಸುವವನು' ಅಥವಾ 'ಗುಣದೋಷ ಪರೀಕ್ಷಕ.' ಇಸ್ರಾಯೇಲ್ಯರು ತಮ್ಮನ್ನು ನ್ಯಾಯತೀರಿಸುವಂತೆ ವಾಕ್ಯಕ್ಕೆ ಅವಕಾಶವನ್ನು ಕೊಡುವದರ ಬದಲಾಗಿ ಅವರು ಅದನ್ನು ಟೀಕಿಸಿದರು. ತತ್ಪರಿಣಾಮವಾಗಿ, ಅವರು ತಮ್ಮ ಬಾಧ್ಯತೆಯನ್ನು ಕಳೆದುಕೊಂಡರು."[36]

"ತೂರಿಹೋಗುವದು" (διικνέομαι, *diikneomai*) ಎಂಬುದು ವಾಕ್ಯವು ತನ್ನೊಳಗೆ ಜೀವಿತಗಳನ್ನು ರೂಪಾಂತರಗೊಳಿಸುವ ಮತ್ತು ನಮ್ಮ ಮಾನಸಿಕ ಹಾಗೂ ಆತ್ಮೀಕ

ರಚನೆಯನ್ನು ಸರಿಪಡಿಸುವ ಶಕ್ತಿಯನ್ನು ಹೊಂದಿದೆ ಎಂಬುದನ್ನು ಸೂಚಿಸುತ್ತದೆ; ಸುವಾರ್ತೆಯು ರಕ್ಷಿಸುವ ಶಕ್ತಿಯನ್ನು ಹೊಂದಿದೆ (ರೋಮಾ 1:16). ದೇವರು ಒಂದು ಬೀಜದಲ್ಲಿ ಅದು ತನ್ನನ್ನು ಪುನರುತ್ಪತ್ತಿಗೊಳಿಸಿಕೊಳ್ಳುವಂತೆ ಶಕ್ತಿಯನ್ನಿಟ್ಟಿರುವ ಪ್ರಕಾರವೇ, ಆತನ ವಾಕ್ಯವು ಒಂದು ಬೀಜದಂತಿದ್ದು, ತನ್ನೊಳಗೆ ಜೀವವನ್ನು ಹೊಂದಿದೆ (1 ಪೇತ್ರ 1:23). "[ರಾಜ್ಯದ] ಬೀಜವೆಂದರೆ ದೇವರ ವಾಕ್ಯ" (ಲೂಕ 8:11). ಹೀಗೆ ದೇವರ ಪ್ರೇರಿತ ವಾಕ್ಯವು ಬಿತ್ತುವವನಿಗೆ ಬೀಜವನ್ನು ಮತ್ತು ತಿನ್ನುವವನಿಗೆ ರೊಟ್ಟಿಯನ್ನು ಒದಗಿಸುವ ಒಂದು ಮೊಳಕೆಯನ್ನು ಉತ್ಪಾದಿಸುವ ಒಂದು ಬೀಜವಿದ್ದಂತೆ ಆಗಿದೆ (ಯೆಶಾಯ 55:10). ಅದು ಕ್ರೈಸ್ತನಿಗೆ ಹೊಸ ಜೀವನವನ್ನು ಕೊಡುವ ನಿರ್ಲಯವಾದ ಬೀಜವಾಗಿದೆ. ನಾವು "ಸುವಾರ್ತೆಯ ಮೂಲಕ . . . ಹುಟ್ಟಿದವರು" (1 ಕೊರಿಂಥ 4:15; KJV). NASBಯಲ್ಲಿ ವ್ಯಕ್ತಪಡಿಸಲ್ಪಟ್ಟಿರುವ ಪ್ರಕಾರ, ಪೌಲನು "ನಿಮ್ಮನ್ನು ಸುವಾರ್ತೆಯ ಮೂಲಕ . . . ಪಡೆದನು [ತಂದೆಯಾದನು]."

ವಾಕ್ಯವು ಸಜೀವವಾದದ್ದು ಯಾಕೆಂದರೆ "ಅದು ಸಕಲ ಜೀವದ ಮೂಲನಾಗಿರುವ ಸ್ವತಃ ದೇವರ ನಿಜವಾದ ಗುಣಸ್ವಭಾವವನ್ನು ಪ್ರತಿಬಿಂಬಿಸುತ್ತದೆ."[37] ಅದು ಸಜೀವವಾದದ್ದು ಯಾಕೆಂದರೆ ಅದು ಕಾರ್ಯಸಾಧಿಸಲ್ಪಡುವದು, ಕಾರಣ ದೇವರು ಈಗಲೂ ತನ್ನ ಎಲ್ಲಾ ಉದ್ದೇಶಗಳ ಮತ್ತು ವಾಗ್ದಾನಗಳ ಫಲಿತವನ್ನು ಪ್ರಭಾವಿತಗೊಳಿಸುತ್ತಾನೆ. ದೇವರ ವಾಕ್ಯವು ಆತನ ಚಿತ್ತ ಮತ್ತು ವಾಗ್ದಾನಗಳ ಮೂರ್ತೀಕರಣವಾಗಿರುತ್ತದೆ, ಅವುಗಳ ಹಿಂದೆ ಆತನು ಸ್ವತಃ ನಿಂತಿರುವನು. ದೇವರು ನುಡಿದನು ಮತ್ತು ಲೋಕಗಳು ಸೃಷ್ಟಿಸಲ್ಪಟ್ಟವು (ಇಬ್ರಿಯ 11:3). ದೇವರಿಂದ ಬಂದ ವಾಕ್ಯಗಳು (ಕೀರ್ತನೆ 95:7-11) ಆತನ ವಿಶ್ರಾಂತಿಯಲ್ಲಿ ಸೇರದಿರುವ ಸಾಧ್ಯತೆಯ ಕುರಿತು ಎಚ್ಚರಿಸಿದವು; ಆತನ ವಾಕ್ಯಗಳೇ ಪಾಪಿಗಳನ್ನು ಆತನ ಸನ್ನಿಧಿಯಿಂದ ದೂರವಿಡಬಲ್ಲವು! ಒಬ್ಬನು ದೇವರನ್ನು ಆತನ ವಾಕ್ಯದಿಂದ ಬೇರ್ಪಡಿಸುವ ಪ್ರಯತ್ನವನ್ನು ಮಾಡಬಾರದು.

ಪವಿತ್ರಾತ್ಮನು ಪ್ರತ್ಯೇಕವಾಗಿ ಹೃದಯದ ಮೇಲೆ ಕ್ರಿಯೆಯನ್ನು ಮಾಡುವ ಹೊರತು ವಾಕ್ಯಕ್ಕೆ ನಿಜವಾದ ಶಕ್ತಿಯು ಇರುವದಿಲ್ಲವೆಂದು John Calvin ನಂಬುತ್ತಾನೆ. Calvin ಹೀಗೆ ಹೇಳಿದನು, "ಯಾಕೆಂದರೆ, ದೇವರು ಮಾತ್ರವೇ ಆತನ ಸ್ವಂತ ವಾಕ್ಯದಲ್ಲಿ ಆತನ ಕುರಿತಾದ ಒಂದು ಸಾಕಾಗುವ ಸಾಕ್ಷಿಯಾಗಿರುವನು, ಆದ್ದರಿಂದ ವಾಕ್ಯವು ಪವಿತ್ರಾತ್ಮನ ಆಂತರಿಕ ಸಾಕ್ಷಿಯಿಂದ ದೃಢಪಡಿಸಲ್ಪಡದಿದ್ದರೆ ಮನುಷ್ಯರ ಹೃದಯಗಳಲ್ಲಿ ಆ ವಾಕ್ಯವು ಎಂದಿಗೂ ನಂಬಿಕೆಯನ್ನು ಸಂಪಾದಿಸಿಕೊಳ್ಳಲಾರದು."[38] ಇದು ವಾಕ್ಯದ ಇಡೀ ದೃಢೀಕರಣವು ಪ್ರಥಮ ಶತಮಾನದಲ್ಲಿಯೇ ಒದಗಿಸಲ್ಪಟ್ಟಿತ್ತೆಂಬುದನ್ನು ನಿರ್ಲಕ್ಷಿಸುವ ದಾಗಿದೆ, ನಾವು ನಂಬುವಂತೆ, ವಿಧೇಯರಾಗುವಂತೆ, ಮತ್ತು ರಕ್ಷಣೆ ಹೊಂದುವಂತೆ ಮಾಡುವದಕ್ಕೆ ಅದು ಸಾಕಾದದ್ದಾಗಿದೆ (ಮಾರ್ಕ 16:17-20; ಯೋಹಾನ 20:30, 31; ಇಬ್ರಿಯ 2:1-4). ಹೆಚ್ಚಿನ ದೃಢೀಕರಣದ ಅವಶ್ಯಕತೆಯಿದೆ ಎಂಬ ಯಾವದೇ ಹೇಳಿಕೊಳ್ಳುವಿಕೆಯು ಸುವಾರ್ತೆಯ ಮನವರಿಕೆಗೊಳಿಸುವ ಶಕ್ತಿಯನ್ನು ತಿರಸ್ಕರಿಸುವ ದಾಗಿದೆ. ಅಂಥ ಯಾವದೇ ಹೇಳಿಕೆಯು ದೇವರ ವಾಕ್ಯವೆಂಬ ಬೀಜದಲ್ಲಿ ಒಂದು ಸಾಯುತ್ತಿರುವ ಆತ್ಮಕ್ಕೆ "ಜೀವ" ಇದೆಯೆಂಬುದನ್ನು ನಿರಾಕರಿಸುತ್ತದೆ (1 ಪೇತ್ರ 1:23). ಈ ಯೋಚನೆಯು ಶಾಸ್ತ್ರಕ್ಕೆ ತಪ್ಪಾದ ವ್ಯಾಖ್ಯಾನ ಕೊಡುವದರ ಮೇಲೆ ಆಧಾರವಾಗಿರುತ್ತದೆ, ಅಪೊಸ್ತಲರಿಗೆ ಮಾಡಲ್ಪಟ್ಟ ವಾಗ್ದಾನಗಳನ್ನು ತೆಗೆದುಕೊಂಡು ಅವುಗಳನ್ನು ಆಧುನಿಕ ಮನುಷ್ಯನನ್ನಾಗಿ ಮಾರ್ಪಡಿಸುವ ಮೂಲಕ ರೂಪಿಸಿಕೊಂಡ ಯೋಚನೆಯಾಗಿದೆ (ಉದಾಹರಣೆಗೆ ಯೋಹಾನ 14:26; 16:12, 13; 1 ಕೊರಿಂಥ 2:10-13).

"ತೂರಿಹೋಗುವಂಥದು" ಎಂಬ ಪದವು ಇಲ್ಲಿ ಇಬ್ರಿಯರಿಗೆ ಪತ್ರಿಕೆಯಲ್ಲಿ ಮಾತ್ರವೇ

ಸಿಕ್ಕುತ್ತದೆ. “ತಿವಿಯಲ್ಪಟ್ಟವರಾಗಿ” ಎಂಬದರಲ್ಲಿರುವಂತೆ (ಅಪೊಸ್ತಲರ ಕೃತ್ಯಗಳು 5:33; 7:54) ಇದೊಂದು ಲೂಕನ ಯೋಚನೆಯಾಗಿರುತ್ತದೆ. ಇದು ಹೃದಯದಲ್ಲಿ ಮನವರಿಕೆಯಾಗುವದನ್ನು ಅಥವಾ ಎದುರಾಳಿಗೆ ಒಂದು ಉತ್ತರವನ್ನು ಹೇಳುವದಕ್ಕಾಗದೆ ಕಹಿಯಾದ ಕೋಪವುಳ್ಳವರಾಗುವದನ್ನು ಸೂಚಿಸುತ್ತದೆ. ಸುವಾರ್ತೆಯ “ವಿಭಾಗಿಸುವ” ಶಕ್ತಿಯು ಅಪೊಸ್ತಲರ ಕೃತ್ಯಗಳು 2:36-38ರಲ್ಲಿ ಕಂಡು ಬರುತ್ತದೆ. ಈ ಶ್ರೋತೃಗಳು ಕೇಳಿಕೊಂಡ ಮಾತುಗಳ ಕಾರಣದಿಂದ ಅನೇಕರಿಗೆ “ಹೃದಯದಲ್ಲಿ ಅಲಗು ನೆಟ್ಟಂತಾಗಿ”ದ್ದರು. ಸುವಾರ್ತೆಯ ಸಂದೇಶವು ಮನವರಿಕೆಯನ್ನುಂಟು ಮಾಡಿತ್ತು. ಅಪೊಸ್ತಲರ ಕೃತ್ಯಗಳು 2:37ರಲ್ಲಿ KJVಯದ ಅನುವಾದವಾಗಿರುವ κατανύσσω (*katanussō*) ಎಂಬುದು “ಚುಚ್ಚಲ್ಪಟ್ಟರು” ಎಂಬುದು ಬಹು ದುರ್ಬಲವಾಗಿದೆ; ಪ್ರಾಚೀನ ಕವಿಯಾದ Homerನು ಅದೇ ಪದವನ್ನು ಸೈನಿಕನ ಈಟಿಯು ಒಂದು ದೇಹವನ್ನು ತೂರಿಕೊಂಡು ಹೋಗುವದನ್ನು ಸೂಚಿಸಲು ಬಳಸಿರುತ್ತಾನೆ. ವಾಕ್ಯದ ಶಕ್ತಿಯ ಕುರಿತ ಒಂದು ಸ್ಪಷ್ಟವಾದ ವಿವರಣೆಯು ಈ ಕೆಳಗಿನಂತಿದೆ:

> ಅದು ಮನುಷ್ಯನ ಜೀವಿತದ ಅತ್ಯಂಥ ಆಳವಾದ ಮತ್ತು ಅತ್ಯಂತ ಮರೆಯಾಗಿರುವಂತಹ ಭಾಗಗಳನ್ನು ತೂರಿಕೊಂಡು ಹೋಗುತ್ತದೆ ಮತ್ತು ಇಬ್ಬಾಯಿ ಕತ್ತಿಯೊಂದು ಶಾರೀರಿಕ ದೇಹದ *ಕೀಲಿಮಜ್ಜೆಗಳನ್ನು* ಸೀಳಿಕೊಂಡು ಹೋಗುವಂತೆಯೇ, ಅದು ಆತನ ಕೆಳಮಟ್ಟದ ಪ್ರಾಣಿ ಜೀವಿತವನ್ನು ಅದರ ಇಚ್ಛೆಗಳು, ಆಸಕ್ತಿಗಳು ಮತ್ತು ವಾತ್ಸಲ್ಯಗಳ ಸಮೇತವಾಗಿ ದೇವರೊಂದಿಗೆ ಸಹವಾಸವನ್ನು ಹೊಂದಬೇಕೆಂಬ ಆಕಾಂಕ್ಷೆಗಳನ್ನು ಹೊಂದಿರುವ ಅದರ ಉನ್ನತ ಮಟ್ಟದ ಆತ್ಮೀಕ ಜೀವಿತದಿಂದ ಭೇದಿಸುತ್ತದೆ. ಅದು ಹೊರಗಿನ ತೋರಿಕೆಗಳನ್ನು ನೋಡುವದಿಲ್ಲ ಆದರೆ *ಹೃದಯದ* ಆಲೋಚನೆಗಳನ್ನು ಮತ್ತು ಉದ್ದೇಶಗಳನ್ನು ವಿವೇಚಿಸುವ ಕುಶಲತೆಯನ್ನು ಹೊಂದಿದೆ.[39]

ಮನವರಿಕೆ ಮಾಡುವದು ಮತ್ತು ಪರಿವರ್ತನೆಗೊಳಿಸುವದು ಪವಿತ್ರಾತ್ಮನ ಕೆಲಸವಾಗಿರುತ್ತದೆ (ಯೋಹಾನ 16:7); ಪವಿತ್ರಾತ್ಮನಿಂದ ಮಾರ್ಗದರ್ಶಿಸಲ್ಪಟ್ಟವನಾಗಿ ಅಪೊಸ್ತಲರ ಕೃತ್ಯಗಳು 2:36-41ರಲ್ಲಿ ಪೇತ್ರನು ಮಾತಾಡುತ್ತಿದ್ದ ವಾಕ್ಯದ ಮೂಲಕವಾಗಿ ನೆರವೇರಿಸಲ್ಪಟ್ಟಿತು. ಆದದರಿಂದ ನಾವು ಪವಿತ್ರಾತ್ಮನ ಪ್ರಕಟಿಸಲ್ಪಟ್ಟ ಸಂದೇಶದ ಮೂಲಕ ಪರಿವರ್ತನೆಗೊಳಿಸಲ್ಪಡುತ್ತೇವೆ. ಯೇಸುವು ಹೀಗೆ ಘೋಷಿಸಿದ್ದನು, “ಬದುಕಿಸುವಂಥದು ಆತ್ಮವೇ; ಮಾಂಸವು ಯಾವದಕ್ಕೂ ಬರುವದಿಲ್ಲ. ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಅವೆ” (ಯೋಹಾನ 6:63). ಪವಿತ್ರಾತ್ಮನು ದೈವಿಕ ವಾಕ್ಯದ ಮೂಲಕ ಜೀವವನ್ನು ಕೊಡುತ್ತಾನೆ. ಕೆಲವರು ಕರ್ತನ ಭೋಜನದಲ್ಲಿ ಸಾಧಿಸಲ್ಪಡುತ್ತದೆಂದು ನಂಬುವ ಪ್ರಕಾರ, ಯೇಸುವಿನ ಶಿಷ್ಯರು ಆತನ ಮಾಂಸವನ್ನು ಅಕ್ಷರಶಃ ತಿನ್ನುವದಕ್ಕೆ ಶಕ್ತರಾಗಿದ್ದರೂ ಅವರು ಅವರಿಗೆ ಯಾವ ನಿತ್ಯವಾದ ಒಳಿತನ್ನೂ ಮಾಡುವದಿಲ್ಲ; ಯಾಕೆಂದರೆ ಜೀವವನ್ನುಂಟು ಮಾಡುವಂಥದು ವಾಕ್ಯವೇ ಹೊರತು ಮಾಂಸವಲ್ಲ. ಆ ವಾಕ್ಯವು ತನ್ನ ಗುರಿಯನ್ನು ಸಾಧಿಸಬೇಕಾದರೆ ಅದನ್ನು ಕೇಳಿಸಿಕೊಳ್ಳತಕ್ಕದ್ದು, ನಂಬತಕ್ಕದ್ದು, ಮತ್ತು ವಿಧೇಯರಾಗತಕ್ಕದ್ದು. ವಾಕ್ಯವು “ಪವಿತ್ರಾತ್ಮನ ಕತ್ತಿ” ಎಂದು ಕರೆಯಲ್ಪಟ್ಟಿರುವದರಲ್ಲಿ ಆಶ್ಚರ್ಯವೇನಿಲ್ಲ (ಎಫೆಸ 6:17). ಅದು “ಯಾವ ಇಬ್ಬಾಯಿಕತ್ತಿಗಿಂತಲೂ ಹದವಾದದ್ದು” (ವ. 12), ಹಾಗೆ ಕ್ರಿಸ್ತನನ್ನು (ವಾಕ್ಯ/ *Logos*) ಸೂಚಿಸಿ ಹೇಳುವದಕ್ಕೆ ಸಾಧ್ಯವಿಲ್ಲ. ಪ್ರಕಟನೆ 1:16ನೇ ವಚನವು ಯೇಸುವನ್ನು ಆತನ ಬಾಯೊಳಗಿಂದ ಕತ್ತಿಯು ಹೊರಡುತ್ತಿತ್ತೆಂದು ಚಿತ್ರಿಸಲಾಗಿದೆ. ಅದು ಬೇರೆ ಸನ್ನಿವೇಶದಲ್ಲಿನ ಒಂದು ಬೇರೆ ಒಂದು ಸಾದೃಶ್ಯವಾಗಿದೆಯಾದರೂ, ಅದು ಕ್ರಿಸ್ತನ ಮತ್ತು ಆತನ ವಾಕ್ಯದ ಶಕ್ತಿಯನ್ನು ಸೂಚಿಸುತ್ತದೆ.

"ವಾಕ್ಯ" ಎಂಬುದು ಹೊಸ ಒಡಂಬಡಿಕೆಯ ಹೊರಗೆ ದೇವರು ನೇರವಾಗಿ ವ್ಯಕ್ತಿಗಳ ಸಂಗಡ ಮಾತಾಡುವದು ಆಗಿರುತ್ತದೆಂಬ ಯೋಚನೆಯು ಶಾಸ್ತ್ರದಲ್ಲಿ ಬೇರೂರಿರುವಂಥದ್ದಲ್ಲ.

"ಪ್ರಾಣ ಆತ್ಮಗಳನ್ನು ವಿಭಾಗಿಸುವಷ್ಟು ಮಟ್ಟಿಗೂ" ಎಂಬುದು ಒಂದು ಆಸಕ್ತಿಕರವಾದ ಮಾತಾಗಿರುತ್ತದೆ. ದೇವರ ವಾಕ್ಯವು ವಿಭಾಗಿಸುವದರಲ್ಲಿ ಕ್ರಿಯಾಶೀಲವಾಗಿರುತ್ತದೆ! ಅದು ಕುಟುಂಬಗಳನ್ನು ಮತ್ತು ಮುಂಚೆಯ ಸ್ನೇಹಿತರನ್ನು ವಿಭಾಗಿಸುತ್ತದೆ. R. C. H. Lenskiಯು ಈ ವಾಕ್ಯಭಾಗದ ಅನ್ವಯಿಕೆಯನ್ನು ಪವಿತ್ರಾತ್ಮನಿಗೆ ವಿರೋಧ ವ್ಯಕ್ತಪಡಿಸುವ ಅನೇಕ ಲೌಕಿಕ ಮತ್ತು ಆತ್ಮೀಕವಲ್ಲದ ಸಂಗತಿಗಳಿಗೆ ಮಾಡುತ್ತಾನೆ. ಆತನು ಹೀಗೆ ಹೇಳಿದನು, "ಲೋಕವು ಈ ಕ್ರಿಯೆಗಳಲ್ಲಿ ಅನೇಕ ಕಾರ್ಯಗಳನ್ನು ಒಳ್ಳೇದು ಹೊಗಳಬಹುದು, ಸ್ತುತಿಯೋಗ್ಯವೆಂದೂ ಹೇಳಬಹುದು; ವಾಕ್ಯವು ನೇರವಾಗಿ ತೂರಿಹೋಗಿ ಪ್ರಾಣವು ಆತ್ಮಕ್ಕೆ ಏನು ಮಾಡುತ್ತಿದೆಯೆಂಬುದನ್ನು ತೋರಿಸುವದು."[40] ಹೀಗೆ ಅದು ಒಳ್ಳೇದನ್ನು ಕೆಟ್ಟದ್ದರಿಂದ ವಿಭಾಗಿಸುತ್ತದೆ, ಅದು ಅರ್ಥದಲ್ಲಿ ಒಂದು ಜೀವಧಾರಕ ಭಾಗವಾಗಿರಬಹುದಾಗಿದೆ.

ಅಷ್ಟುಮಾತ್ರವಲ್ಲದೆ, "ದೇವರ ವಾಕ್ಯವು . . ." **ಹೃದಯದ ಆಲೋಚನೆಗಳನ್ನೂ ಉದ್ದೇಶಗಳನ್ನೂ ತೀರ್ಪುಮಾಡಲು ಶಕ್ತವಾದದ್ದು** (ವಿವೇಚಿಸುವಂಥದು). "ತೀರ್ಪುಮಾಡಲು ಶಕ್ತವಾದದ್ದು" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು (κριτικός, *kritikos*) ಎಂದಾಗಿದ್ದು ಅದರ ಅರ್ಥವು "ವಿವೇಚಿಸುವದು" (ನೋಡಿರಿ KJV; ASV). ದೇವರ ದೃಷ್ಟಿಯಿಂದ ಯಾವದು ಮರೆಯಾಗಿರಲಾರದು (ವ. 13).

**ವಚನ 13.** ವಾಕ್ಯದ ತೀರ್ಪಿನಿಂದ ಯಾವನೊಬ್ಬನೂ ತಪ್ಪಿಸಿಕೊಳ್ಳಲಾರನು: **ಆತನ ದೃಷ್ಟಿಗೆ ಸಮಸ್ತವೂ ಮುಚ್ಚುಮರೆಯಿಲ್ಲದ್ದಾಗಿಯೂ ಬೈಲಾದದ್ದಾಗಿಯೂ ಅದೆ ಆತನ ಸನ್ನಿಧಿಯಲ್ಲಿ ಅಗೋಚರವಾಗಿರುವ ಸೃಷ್ಟಿಯೂ ಒಂದೂ ಇಲ್ಲ.** ಈ ವಚನವು ಮನುಷ್ಯನ ಸ್ವಭಾವದ ಅರ್ಥನಿರೂಪಣೆ ಮಾಡುವದರೊಂದಿಗೆ ಏನಾದರೂ ಸಂಬಂಧ ಹೊಂದಿದೆಯೋ, ಅಥವಾ "ಮನುಷ್ಯ ಕ್ಲೀಷ್ಟಕರವಾದ ಆಂತರ್ಯವನ್ನು ತೂರಿಕೊಂಡು ಹೋಗುವದಕ್ಕೆ ದೇವರ ವಾಕ್ಯಕ್ಕಿರುವ ಗರಿಷ್ಠ ಮಿತಿಯ ಸಾಮರ್ಥ್ಯವನ್ನು ತೋರಿಸುವ . . ." ಒಂದು ಸಾಮಾನ್ಯವಾದ ಹೇಳಿಕೆ ಮಾತ್ರವೇ ಆಗಿದೆಯೋ?[41] ಅದು ಕೇವಲ "ದೇವರು ನಮ್ಮನ್ನು ಸಂಪೂರ್ಣವಾಗಿಯೂ ಒಟ್ಟಾರೆಯಾಗಿಯೂ ಬಲ್ಲವನಾಗಿದ್ದಾನೆಂದು" ಸಾಂಕೇತಿಕವಾಗಿ ಹೇಳುತ್ತಿದೆಯೋ?[42] ಮನುಷ್ಯನ ತಿರುಳಿನ ಈ ಚಿತ್ರಣವು 1 ಥೆಸಲೋನಿಕ 5:23ರಲ್ಲಿರುವ ಪೌಲನ ಯೋಚನೆಯನ್ನು ಹೋಲುತ್ತದೆ: ". . . ನಮ್ಮ ಕರ್ತನಾದ ಯೇಸು ಕ್ರಿಸ್ತನು ಪ್ರತ್ಯಕ್ಷನಾದಾಗ ನಿಮ್ಮ ಆತ್ಮ ಪ್ರಾಣಶರೀರಗಳು ದೋಷವಿಲ್ಲದೆ ಸಂಪೂರ್ಣವಾಗಿ ಕಾಣಿಸುವಂತೆ ಕಾಪಾಡಲ್ಪಡಲಿ."

ಈ ತೂರಿಹೋಗುವಂತ ತೀರ್ಪು ಬರುತ್ತಲಿದೆ ಮತ್ತು ನಾವು ಪಾಪ ಮಾಡಿದ ಅಪರಾಧಕ್ಕೊಳಗಾಗಿದ್ದೇವಾದ್ದರಿಂದ, ಈ ಜೀವಿತಕಾಲದ ಹೋರಾಟದಲ್ಲಿ ಮುಂದುವರೆಯುವದಕ್ಕೆ ಶಕ್ತಿಯನ್ನು ಪಡೆದುಕೊಳ್ಳಲು ನಮಗೆ ಯಾವ ನಿರೀಕ್ಷೆಯು ಇರುತ್ತದೆ? ಉತ್ತರವು ಮುಂದೆ ಕೊಡಲ್ಪಟ್ಟಿರುತ್ತದೆ. "ವಾಕ್ಯವು" ನಮ್ಮ ಆತ್ಮಗಳನ್ನು ಬೈಲುಗೊಳಿ ಸುವದು, ಆದಾಗ್ಯೂ ದೇವರಿಗೇ "ನಾವು ಲೆಕ್ಕವನ್ನು ಕೊಡಬೇಕಾಗಿರುವದು" (NIV; NKJV). ಪುನಃ, "ವಾಕ್ಯವು" ಸ್ವತಃ ದೇವರ ವಿಸ್ತರಣೆಯಾಗಿ ತೋರುತ್ತದೆ. "ವಾಕ್ಯವು" ವಿವಿಧ ರೀತಿಯ ಅರ್ಥಗಳನ್ನು ಹೊಂದಿರುವದು ಸ್ಪಷ್ಟವಾಗಿರುತ್ತದೆ, ಆದರೆ ದೇವರ ವಾಕ್ಯಕ್ಕೆ ಸಂಬಂಧಿಸಿ ಲೆಕ್ಕವನ್ನು ಕೊಡುವದಕ್ಕೆ ನಾವು ಕರೆಯಲ್ಪಡುವೆವು. ದೇವರ ಮುಂದೆ ನಿಂತು ನಮ್ಮ ನ್ಯಾಯವಾದ ಬಹುಮಾನವನ್ನು ಸ್ವೀಕರಿಸಿಕೊಳ್ಳುವದು ಎಷ್ಟು ಭಯಭಕ್ತಿಯುಳ್ಳದ್ದು! ಈ ವಾಕ್ಯಭಾಗವು ಅಂತಿಮ ಲೆಕ್ಕಕ್ಕೆ ತೆಗೆದುಕೊಳ್ಳುವಿಕೆಯನ್ನು ಸೂಚಿಸತಕ್ಕದ್ದು ಯಾಕೆಂದರೆ ದೇವರ ಮುಂದೆ

ಸಮಸ್ತವೂ "ಮುಚ್ಚುಮರೆಯಿಲ್ಲದ್ದ" (γυμνός, *gumnos* ಎಂಬದರಿಂದ; ಅಕ್ಷರಶಃ, "ಬೆತ್ತಲೆ") ಮತ್ತು "ಬೈಲಾದದ್ದಾಗಿಯೂ" ಇರುವದು. ಆದುದರಿಂದ, ನಮಗೆ ಸಹಾಯ ಮಾಡುವದಕ್ಕಾಗಿ ನಮಗೊಬ್ಬ ವಕ್ತಾರನ ಅಗತ್ಯವಿದೆ. ಈ ಅಗತ್ಯತೆಯ ಹೇಳಿಕೆಯು ಲೇಖಕನ ಮುಂದಿನ ಚರ್ಚೆಯನ್ನು ಪರಿಚಯಿಸುತ್ತದೆ.

ಮನುಷ್ಯನ ಹೃದಯದ ಬಗ್ಗೆ ನಮಗೆ ಬಹಳ ಸ್ವಲ್ಪವೇ ಗೊತ್ತಿದೆ, ಆದರೆ ದೇವರ ವಾಕ್ಯವು ನಮ್ಮ ಆಂತರ್ಯದ ಪ್ರತಿಯೊಂದು ಅಗತ್ಯತೆಯನ್ನು ಸಂಧಿಸುತ್ತದೆಂದು ನಾವು ಬಲ್ಲೆವು ಯಾಕೆಂದರೆ ಅದು ನಮ್ಮನ್ನು ಸೃಷ್ಟಿಸಿದಾತನು ಮತ್ತು ನಮ್ಮನ್ನು ಪೂರ್ಣವಾಗಿ ಬಲ್ಲವನು ಆಗಿರುವಾತನಿಂದ ಕೊಡಲ್ಪಟ್ಟಿರುತ್ತದೆ. ಇದನ್ನು ಗ್ರಹಿಸಿಕೊಳ್ಳಿರಿ, ಮತ್ತು ನಾವು ಲೆಕ್ಕ ಒಪ್ಪಿಸಬೇಕಾಗಿರುವದು ಆತನಿಗೆ ಎಂಬುದನ್ನು ಅವಲೋಕಿಸಿರಿ (ವ. 13). ಆತನು ಕಡೇ ದಿನದಲ್ಲಿ ತಾನು ನೇಮಿಸಿದ ಮಗನ ಮೂಲಕ ನಮ್ಮ ನ್ಯಾಯವಿಚಾರಣೆ ಮಾಡುವನು (ಅಪೊಸ್ತಲರ ಕೃತ್ಯಗಳು 17:30, 31). ದೇವರ ವಾಕ್ಯ (ವ. 12) ಮತ್ತು ದೇವರ ವ್ಯಕ್ತಿತ್ವ (ವ. 13) ಇವುಗಳ ನಡುವೆ ಯಾವದೇ ಅಸಮಂಜಸತೆ ಇರುವದಿಲ್ಲ, ಯಾಕೆಂದರೆ ಇಬ್ಬರನ್ನು ಬೇರ್ಪಡಿಸುವದಕ್ಕೆ ಸಾಧ್ಯವಿರುವದಿಲ್ಲ. ನಾವು ದೇವರು ಅಥವಾ ಆತನ ವಾಕ್ಯದೊಂದಿಗೆ ಲಘುವಾಗಿ ವರ್ತಿಸಬಾರದು. ನಾವು ಆತನ ವಿಶ್ರಾಂತಿಯಲ್ಲಿ ಪ್ರವೇಶಿಸುವವರಾಗುವಂತೆ ಆತನ ಚಿತ್ತವನ್ನು ಮಾಡೋಣ ಮತ್ತು ಆತನ ವಾಕ್ಯಕ್ಕೆ ವಿಧೇಯರಾಗೋಣ.

## ಆರೋನನಿಗಿಂತ ಮಹಾಯಾಜಕನಾಗಿ ಕ್ರಿಸ್ತನ ಶ್ರೇಷ್ಠತೆ (4:14-5:10)

### ದೇವರ ಬಳಿಗೆ ಕ್ರಿಸ್ತನಿಗಿರುವ ಪ್ರವೇಶ ದಾರಿ (4:14-16)

**14ಆಕಾಶಮಂಡಲಗಳಲ್ಲಿ ದಾಟಿಹೋದ ದೇವಕುಮಾರನಾದ ಯೇಸುವೆಂಬ ಶ್ರೇಷ್ಠ ಮಹಾಯಾಜಕನು ನಮಗಿರುವದರಿಂದ ನಾವು ಮಾಡಿರುವ ಪ್ರತಿಜ್ಞೆಯನ್ನು ಬಿಡದೆ ಹಿಡಿಯೋಣ.**
**15ಯಾಕೆಂದರೆ ನಮಗಿರುವ ಮಹಾಯಾಜಕನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ; ಆತನು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು,**
**ಪಾಪ ಮಾತ್ರ ಮಾಡಲಿಲ್ಲ. 16ಆದದರಿಂದ ನಾವು ಕರುಣೆಯನ್ನು ಹೊಂದುವಂತೆಯೂ ಆತನ ದಯೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸನದ ಮುಂದೆ ಬರೋಣ.**

ಪ್ರವಾದಿಗಳು, ದೇವದೂತರು, ಮತ್ತು ಮೋಶೆಯ ಮೇಲೆ ಕ್ರಿಸ್ತನಿಗಿರುವ ಶ್ರೇಷ್ಠತೆಯನ್ನು ತೋರಿಸಿ ಕೊಟ್ಟ ಬಳಿಕ, ಇಬ್ರಿಯರಿಗೆ ಪತ್ರಿಕೆಯ ಲೇಖಕನು ಈಗ ಮಹಾಯಾಜನಾಗಿ ಆರೋನನ ಮೇಲೆ ಆತನಿಗಿರುವ ಶ್ರೇಷ್ಠತೆಯ ಕಡೆಗೆ ಗಮನವನ್ನು ಹರಿಸುತ್ತಾನೆ. 4:14-16ರಲ್ಲಿ ಆತನು ದೇವರ ಕೃಪಾಸನದ ಮುಂದೆ ನಮಗೊಬ್ಬ ಪ್ರತಿನಿಧಿಯಿದ್ದು ಆತನು ನಾವು ಊಹಿಸಿಬಹುದಾದದ್ದಕ್ಕಿಂತಲೂ ಅತಿ ಶ್ರೇಷ್ಠನು ಮತ್ತು ನಮ್ಮ ಕನಸುಗಳನ್ನು ಮೀರಿದ ಕಾರ್ಯಗಳನ್ನು ನಮಗೋಸ್ಕರ ಮಾಡುವವನು ಆಗಿದ್ದಾನೆಂಬುದಾಗಿ ಬರೆಯುತ್ತಾನೆ. ಈ ಮೂರು ವಚನಗಳು ಈ ಮಹಾನ್ ಮಹಾಯಾಜಕನ ಕುರಿತು ನಾಲ್ಕು ಸತ್ಯಗಳನ್ನು ದೃಢಪಡಿಸುತ್ತವೆ. (1) ಆತನು ಆಕಾಶಮಂಡಲಗಳನ್ನು ದಾಟಿಹೋಗಿದ್ದಾನೆ, ಅದು ಆತನ ಭೂಲೋಕದ ಕೆಲಸವು ಪೂರ್ತಿಗೊಂಡಿದೆ ಎಂಬುದನ್ನು ಸೂಚಿಸುತ್ತದೆ. (2) ಆತನು ನಮ್ಮ ಬಗ್ಗೆ ಸಂಪೂರ್ಣವಾಗಿ ಅನುತಾಪವುಳ್ಳವನಾಗಿರುತ್ತಾನೆ. (3) ಆತನು ಶೋಧನೆಯ ಮೂಲಕ

ವಿಧೇಯತೆಯನ್ನು ಕಲಿತನು. (4) ಆತನು ನಮ್ಮ ನಿತ್ಯವಾದ ರಕ್ಷಣೆಯ ಮೂಲನಾಗಿದ್ದಾನೆ. ಇಲ್ಲಿ ಆಧಾರಭೂತವಾದ ಯೋಚನೆಯು ಏನೆಂದರೆ ನಮಗೆ ಕ್ರಿಸ್ತನ ಯಾಜಕ ಕೆಲಸದ ಮೂಲಕವಾಗಿ ದೇವರ ಬಳಿಗೆ ಮಾರ್ಗವಾಯಿತು ಎಂಬದೆ.

**ವಚನ 14. ಮಹಾಯಾಜಕ** (ἀρχιερεύς, *archiereus*) ಎಂಬ ಪದವು ಪ್ರಾಥಮಿಕವಾಗಿ ಯೆಹೂದಿ ಮಹಾಯಾಜಕನಿಗೆ ಬಳಸಲ್ಪಡುತ್ತಿತ್ತು; ಆದರೆ ಇಲ್ಲಿ ಅದು **ಯೇಸು**ವಿಗೆ ಅನ್ವಯವಾಗುತ್ತದೆ, ಆತನು ಒಬ್ಬ ಯಾಜಕನು ಮತ್ತು ಒಬ್ಬ ಅರಸ ಎರಡೂ ಆಗಿದ್ದಾನೆ. ಮೆಸ್ಸೀಯನು ತನ್ನ ಸಿಂಹಾಸನದಲ್ಲಿ ಯಾಜಕನಾಗಿಯೂ ಅರಸನಾಗಿಯೂ ಸೇವೆ ಮಾಡುವನೆಂದು ಜೆಕರ್ಯನು ಮುಂತಿಳಿಸಿದನು (ಜೆಕರ್ಯ 6:13). ಎರಡೂ ಆಗಿದ್ದು ಸೇವೆಯನ್ನು ಮಾಡುವದು ಹಳೆಯ ಒಡಂಬಡಿಕೆಯ ಯಾವದೇ ಅರಸನಿಗೆ ಅನುಮತಿಯಿರಲಿಲ್ಲ. ಕ್ರಿಸ್ತನು **ಶ್ರೇಷ್ಠ**ನು ಯಾಕೆಂದರೆ ಮಹಾಯಾಜಕನು ಯೆಹೂದಿಮತದಲ್ಲಿ ಅತ್ಯಂತ ಪ್ರತಿಷ್ಠೆಯ ಸ್ಥಾನವನ್ನು ಹೊಂದಿದ್ದಾಗ್ಯೂ ಕ್ರಿಸ್ತನು ಅವನಿಗಿಂತ ಉನ್ನತನಾಗಿದ್ದಾನೆ. ತಮ್ಮ ಪರಂಪರೆಗೆ ಹಿಂದಿರುಗುವಂತೆ ಶೋಧಿಸಲ್ಪಡುತ್ತಿದ್ದ ಯೆಹೂದಿ ಕ್ರೈಸ್ತರು, ಧರ್ಮಶಾಸ್ತ್ರದ ಅಡಿಯಲ್ಲಿನ ಯಾವದೇ ಮಹಾಯಾಜಕನಿಗಿಂತ ಶ್ರೇಷ್ಠನಾದ ಮಹಾಯಾಜಕನೊಬ್ಬನು ತಮಗಿದ್ದಾನೆಂಬುದನ್ನು ಅರಿತುಕೊಳ್ಳುವ ಅಗತ್ಯತೆಯಿತ್ತು. ಇಲ್ಲಿ ಆರಂಭಿಸಿ ಮುಂದೆ 10ನೇ ಅಧ್ಯಾಯದಲ್ಲೆಲ್ಲಾ ಮುಂದುವರೆಯುವವನಾಗಿ, ಲೇಖಕನು ಮೋಶೆಯ ಪ್ರತಿಷ್ಠಾಪನೆಗಳ ಮತ್ತು ವಿನ್ಯಾಸಗಳ ಸಂಪೂರ್ಣ ತಿಳುವಳಿಕೆಯನ್ನು ತೋರಿಸಿ ಕೊಡುತ್ತಾನೆ. ನಮ್ಮ ನೂತನ ಮಹಾಯಾಜಕನ ಕುರಿತಾದ ಈ ತರ್ಕವು 7:28ರೊಂದಿಗೆ ಮುಕ್ತಾಯಗೊಳ್ಳುತ್ತದೆ, ಆದರೆ ಆ ಯೋಚನೆಯನ್ನು ಪುನಃ 8:1ರಲ್ಲಿ ಒಂದು ಅಂಗೀಕೃತವಾಗಿರುವ ವಾಸ್ತವಾಂಶವಾಗಿ ಎತ್ತಿಕೊಳ್ಳಲಾಗುತ್ತದೆ.

ನಮ್ಮ ಮಹಾಯಾಜಕನು **ದೇವಕುಮಾರನಾದ** "ಯೇಸು" ಎಂಬದಾಗಿ ಓದಿದ ಆ ಇಬ್ರಿಯರು ಇದನ್ನು ವಿಚಿತ್ರವೆಂದು ಯೋಚಿಸಿಕೊಂಡಿರಬೇಕು. ನಿಶ್ಚಯವಾಗಿಯೂ, ಅವರು ಫರಿಸಾಯರಷ್ಟು ಆಶ್ಚರ್ಯಚಕಿತಗೊಂಡಿರಲಿಲ್ಲ, ಯೇಸು ಮತ್ತಾಯ 22:43-46ರಲ್ಲಿ ಕೀರ್ತನೆ 110:1ರಿಂದ ಉಲ್ಲೇಖಿಸಿದಾಗ ಅವರು ಬಹುವಾಗಿ ಆಶ್ಚರ್ಯಚಕಿತಗೊಂಡಿದ್ದರು:

> ಆತನು – ಹಾಗಾದರೆ
>
> ನಾನು ನಿನ್ನ ವಿರೋಧಿಗಳನ್ನು ನಿನ್ನ ಪಾದಗಳ ಕೆಳಗೆ ಹಾಕುವ ತನಕ
> ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು
> ಕರ್ತನು ನನ್ನ ಒಡೆಯನಿಗೆ ನುಡಿದನು
>
> ಎಂಬ ಮಾತಿನಲ್ಲಿ ದಾವೀದನು ಪವಿತ್ರಾತ್ಮಪ್ರೇರಿತನಾಗಿ ಆತನನ್ನು ಒಡೆಯನು ಅನ್ನುವದು ಹೇಗೆ? ದಾವೀದನು ಆತನನ್ನು ಒಡೆಯನೆಂದು ಹೇಳಿದ ಮೇಲೆ ಆತನು ಅವನಿಗೆ ಮಗನಾಗುವದು ಹೇಗೆ? ಅಂದನು. ಅದಕ್ಕೆ ಉತ್ತರವಾಗಿ ಯಾರೂ ಒಂದು ಮಾತಾದರೂ ಆತನಿಗೆ ಹೇಳಲಾರದೆ ಹೋದರು. ಇದಲ್ಲದೆ ಅಂದಿನಿಂದ ಆತನನ್ನು ಇನ್ನೇನಾದರೂ ಕೇಳುವದಕ್ಕೆ ಯಾರಿಗೂ ಧೈರ್ಯ ಹುಟ್ಟಲಿಲ್ಲ.

ದಾವೀದನ ನುಡಿಗಳ ಮೇಲೆ ಆಧಾರವಾಗಿದ್ದ ಯೇಸುವಿನ ಪ್ರಶ್ನೆಯಲ್ಲಿ, ಮೆಸ್ಸೀಯನು "ಇಬ್ಬರು ಕರ್ತರಲ್ಲಿ [ಒಡೆಯರಲ್ಲಿ]" ಒಬ್ಬನಾಗಿದ್ದನೆಂಬುದು ಸೇರಿತ್ತು, ಅದು ಯೆಹೂದ್ಯರಿಗೆ ಒಂದು ವಿಘ್ನವಾಗಿತ್ತು. ಅವರು ಸಂಪೂರ್ಣವಾಗಿ ಒಬ್ಬ ಕರ್ತನಾದ ದೇವರಲ್ಲಿ ನಂಬಿಕೆಯಿಟ್ಟಿದ್ದರು – ಮತ್ತು ಆತನೊಬ್ಬನನ್ನೇ ನಂಬಿದ್ದರು. ಯೇಸು ಈಗ ಮತ್ತೊಬ್ಬ "ಕರ್ತನು" ಆಗಿ ಕಾಣಿಸುತ್ತಿದ್ದಾನೆ. ಅಂಥ ಬಿರುದು ಮತ್ತು ಹುದ್ದೆಯನ್ನು ವಹಿಸಿಕೊಂಡಿರುವದೆಂದರೆ ಆತನು

"ದೇವಕುಮಾರನು" ಎಂಬುದನ್ನು ಸೂಚಿಸುತ್ತದೆ. ಇದು ಯೆಹೂದ್ಯರಿಗೆ ಒಂದು ದೊಡ್ಡ ಪರೀಕ್ಷೆಯಾಯಿತು: ಅವರು ಯೇಸುವನ್ನು ದೈವಿಕನೆಂದು, ಸರ್ವಶಕ್ತ ದೇವರ ಮಗನು ಮತ್ತು ಅವರ ನೂತನ ಮಹಾಯಾಜಕನು ಎಂದು ಪೂರ್ಣವಾಗಿ ಅಂಗೀಕರಿಸಿಕೊಳ್ಳಬಹುದೋ? ಅವರು "ಇಬ್ಬರು ಕರ್ತರ"ನ್ನು ಅಂಗೀಕರಿಸಿಕೊಳ್ಳಬಲ್ಲರೋ? ಅವರು ಈ ಭಾವನೆಯನ್ನು ಅರ್ಥಮಾಡಿಕೊಳ್ಳುವದಾದರೆ, ಅವರು ನಂಬಿಕೆಯಲ್ಲಿ ದೃಢಪಡಿಸಿಕೊಳ್ಳುವ ತಮ್ಮ ದಾರಿಯಲ್ಲಿ ಸರಿಯಾಗಿಯೇ ಸಾಗುವವರಾಗುತ್ತಿದ್ದರು.

ಯೇಸು ತನ್ನ ಉದ್ದೇಶವನ್ನು ಭದ್ರವಾಗಿ ಹಿಡಿದುಕೊಂಡಂತೆಯೇ, ನಾವು **ಮಾಡಿರುವ ಪ್ರತಿಜ್ಞೆಯನ್ನು ಬಿಡದೆ ಹಿಡಿದು**ಕೊಳ್ಳಬೇಕು. "ಬಿಡದೆ ಹಿಡಿಯುವದು" ಎಂದರೆ ಕೇವಲ ನಂಬಿಕೆಯಲ್ಲಿ ಮುಂದುವರೆಯುವದು ಎಂಬುದಕ್ಕಿಂತಲೂ ಹೆಚ್ಚಿನದ್ದಾಗಿದೆ; ನಿಜವಾದ ನಂಬಿಕೆಯಲ್ಲಿ ಸಾರ್ವಜನಿಕವಾಗಿ ತೋರ್ಪಡಿಸಿಕೊಳ್ಳುವದು ಸೇರಿರುತ್ತದೆ. ನಾವು ಅದನ್ನು "ಭದ್ರವಾಗಿ ಹಿಡಿದುಕೊಳ್ಳಬೇಕು ಮತ್ತು ಕಾಣುವಂತೆ ಎತ್ತಿ ಹಿಡಿದುಕೊಳ್ಳಬೇಕು."[43] ನಮ್ಮ ಕರ್ತನು ಮೌಖಿಕವಾಗಿ ಮತ್ತು ಶಾರೀರಿಕವಾಗಿ ಸಹ ಬಾಧೆಯನ್ನನುಭವಿಸಿದಂತೆಯೇ, ಬಾಧೆಯನ್ನು ನಿರೀಕ್ಷಿಸುವವನಾಗಿ, ಒಬ್ಬನು ಪಾಳೆಯದ ಆಚೆ ಹೋಗುವದಕ್ಕೆ ಮನಸ್ಸುಳ್ಳವನಾಗಿರಬೇಕು (13:13). ಒಬ್ಬನು ಈ ದುಷ್ಟ ಲೋಕದ ಮಧ್ಯದಲ್ಲಿ ಒಬ್ಬ ಭಾವಶೂನ್ಯ ಶಿಷ್ಯನಾಗಿರಲು ಸಾಧ್ಯವಿಲ್ಲ. ನಾವು "ಜೀವ ವಾಕ್ಯ"ವನ್ನು ಭದ್ರವಾಗಿ ಹಿಡಿದು ಕೊಂಡರೆ, ನಾವು "ಲೋಕದಲ್ಲಿ ಜ್ಯೋತಿರ್ಮಂಡಲಗಳಂತೆ" ಕಾಣಿಸಿಕೊಳ್ಳುವೆವೆಂದು ಪೌಲನು ವಿವರಿಸುತ್ತಾನೆ (ಫಿಲಿಪ್ಪಿ 2:15, 16). ಬೇರೆಯವರಿಗೆ ದಾರಿ ತೋರುವ ಸಂಕೇತ ದೀಪವಾಗಿರುವದು ನಮ್ಮ ಗುರಿಯಾಗಿರತಕ್ಕದ್ದು.

ಹಳೆಯ ಒಡಂಬಡಿಕೆಯ ಅಡಿಯಲ್ಲಿ ಮಹಾಯಾಜಕನು ವರ್ಷಕ್ಕೊಂದಾವರ್ತಿ ಅತಿ ಪರಿಶುದ್ಧ ಸ್ಥಳದೊಳಕ್ಕೆ ಹೋಗುತ್ತಿದ್ದನು, ಆದರೆ ಯೇಸು ನಮಗೋಸ್ಕರ **ಆಕಾಶಮಂಡಲಗಳನ್ನು ದಾಟಿಹೋದ**ನಾಗಿದ್ದಾನೆ. ಅತಿ ಪರಿಶುದ್ಧ ಸ್ಥಳವು ಪರಲೋಕದಂತೆ ಎಂಬದಾಗಿ Josephus ಹೇಳಿದನು.[44] ಇಬ್ರಿಯರಿಗೆ ಪತ್ರಿಕೆಯ ಲೇಖಕನು ಯೇಸುವನ್ನು ಅತಿ ಪರಿಶುದ್ಧ ಸ್ಥಳವನ್ನೂ ದಾಟಿ "ಆಕಾಶಮಂಡಲಗಳಿಗೆ" ಹೋಗಿರುವವನೆಂದು ಚಿತ್ರಿಸಿರುವದು ನಮಗೆ ಆಶ್ಚರ್ಯವೇನಲ್ಲ. ಆಕಾಶಮಂಡಲಗಳನ್ನು ದಾಟಿ ಹೋಗುವದೆಂದರೆ ಭೂಲೋಕದ ಯಾಜಕನಿಗಿಂತಲೂ ಎಷ್ಟೋ ಅಧಿಕವಾದ ಶಕ್ತಿಯನ್ನು ಸೂಚಿಸುವದಾಗಿದೆ.

"ಆಕಾಶಮಂಡಲಗಳು" (οὐρανός, *ouranos*) ಎಂಬ ಬಹುವಚನವು ಇಬ್ರಿಯ ಪದವಾದ שָׁמַיִם (*shamayim*) ಎಂಬುದನ್ನು ಪ್ರತಿಬಿಂಬಿಸುತ್ತದೆ, ಅದು ಹಳೆಯ ಒಡಂಬಡಿಕೆಯೊಳಗೆ ಮುನ್ನೂರಕ್ಕಿಂತಲೂ ಅಧಿಕ ಸಂದರ್ಭಗಳಲ್ಲಿ ಬಹುವಚನದಲ್ಲಿಯೇ ಕಾಣಿಸಿಕೊಳ್ಳುತ್ತದೆ. ಎಫೆಸ 4:10ನೇ ವಚನವು ಕ್ರಿಸ್ತನು "ಎಲ್ಲಾ ಲೋಕಗಳಿಗಿಂತ ಉನ್ನತವಾಗಿ ಏರಿಹೋದನು" ಎಂದು ಹೇಳುತ್ತದೆ. ಆತನು ಈಗ ಭೂಲೋಕದ ಎಲ್ಲಾ ಅಡೆತಡೆಗಳನ್ನು ದಾಟಿ ಹೋಗಿರುತ್ತಾನೆ. ಆತನು ಭೌತಿಕ ಲೋಕವನ್ನು ಮೀರಿ ಶಕ್ತಿ ಹಾಗೂ ಮಹಿಮೆಯಲ್ಲಿ ಉನ್ನತನಾಗಿದ್ದಾನೆ. B. F. Westcottನು ಆತನು "'ಆಕಾಶಮಂಡಲವನ್ನು ಪ್ರವೇಶಿಸಿದನು' ಮತ್ತು ಆದಾಗ್ಯೂ 'ಆಕಾಶಮಂಡಲಗಳ ಮೇಲೆ ಉನ್ನತವಾಗಿದ್ದಾನೆ'" ಎಂಬ ಸಾಮಾನ್ಯ ಹೇಳಿಕೆಯನ್ನು ಉಲ್ಲೇಖಿಸುತ್ತಾನೆ.[45] ಯೆಹೂದಿ ಸಂಪ್ರದಾಯವು ಏಳು ಆಕಾಶಗಳ ಬಗ್ಗೆ ಮಾತಾಡುತ್ತದೆ, ಆದರೆ ಪೌಲನು ಮೂರು ಆಕಾಶಗಳ ಬಗ್ಗೆ ಮಾತಾಡಿದನು (2 ಕೊರಿಂಥ 12:2). "ಮೂರನೆಯ" ಆಕಾಶವು ಎಲ್ಲವುಗಳಿಗಿಂತ ಉನ್ನತವೆಂದು ತೋರುತ್ತದೆ, ಹೀಗೆ ಇನ್ನೂ ನಾಲ್ಕು ಉನ್ನತ ಆಕಾಶಗಳು ಅಸ್ತಿತ್ವದಲ್ಲಿರುತ್ತವೆಂದು ಯೋಚನೆಯನ್ನು ಹೊರಗಿಡುತ್ತದೆ.[46]

**ವಚನ 15.** ಯೇಸು ದೈವಿಕ ಮತ್ತು ಮಾನವ ಎರಡೂ ಆಗಿದ್ದಾನೆ – ದೇವರ ಮುಂದೆ ಮನುಷ್ಯನನ್ನು ಪ್ರತಿನಿಧಿಸುವ **ಮಹಾಯಾಜಕ** ಮತ್ತು ಮನುಷ್ಯರ ಮುಂದೆ ದೇವರನ್ನು ಪ್ರತಿನಿಧಿಸುವ ದೇವಕುಮಾರ ಎರಡೂ ಆಗಿದ್ದಾನೆ. ದೇವಾಲಯದ ವೈಭವ ಹಾಗೂ ಅದರ ಮಹಾಯಾಜಕನನ್ನು ನೋಡಿ ತೀವ್ರವಾಗಿ ಶೋಧಿಸಲ್ಪಟ್ಟವರಾಗಿದ್ದ ಇಬ್ರಿಯರಿಗೆ ಪತ್ರಿಕೆಯ ವಾಚಕರು ಈಗ ಅವರಿಗೆ ಒಬ್ಬ ರಕ್ಷಕನು ಇದ್ದು ಆತನು **ಸರ್ವ ವಿಷಯಗಳಲ್ಲಿ** [ಅವರ] **ಹಾಗೆ ಶೋಧನೆಗೆ ಗುರಿಯಾದನು, ಪಾಪ ಮಾತ್ರ ಮಾಡಲಿಲ್ಲ** ಎಂಬುದನ್ನು ಅರ್ಥಮಾಡಿಕೊಳ್ಳಬೇಕಿತ್ತು. ಒಬ್ಬನು ಹೀಗೆ ಕೇಳಬಹುದು, "ಆದರೆ ಯೇಸು ಎಂದಿಗೂ ಪಾಪ ಮಾಡಲಿಲ್ಲ, ಆದ್ದರಿಂದ ಆತನು ಹೇಗೆ ನಮ್ಮ ಹಾಗೆ ಶೋಧಿಸಲ್ಪಡಲು ಸಾಧ್ಯ?" ಆತನು ನಮ್ಮ ಬಗ್ಗೆ **ಅನುತಾಪ** ತೋರಬಲ್ಲನು ಯಾಕೆಂದರೆ ಪಾಪವನ್ನು ಅರ್ಥಮಾಡಿಕೊಳ್ಳುವದೆಂದರೆ ಕಾರ್ಯದಲ್ಲಿ ಭಾಗಿಯಾಗಬೇಕೆಂಬ ಅರ್ಥವಲ್ಲ, ಆದರೆ ಬದಲಾಗಿ ಅದರ ಮೋಹಗೊಳಿಸುವಿಕೆಯನ್ನು ಎದುರಿಸಬೇಕು ಎಂದಾಗಿರುತ್ತದೆ. ಅದಕ್ಕೊಳಗಾಗುವದಕ್ಕೆ ನಿರಾಕರಿಸುವ ಮೂಲಕ, ನಾವು ಜಯ ಹೊಂದಬಹುದೆಂಬುದನ್ನು ಯೇಸು ತೋರಿಸಿದನು.

"ಅನುತಾಪ" (συμπαθέω, *sumpatheō*) ಎಂಬ ಪದವು ಇಬ್ರಿಯರಿಗೆ ಪತ್ರಿಕೆಯಲ್ಲಿ ಮಾತ್ರವೇ ಸಿಕ್ಕುತ್ತದೆ. ಈ ಪದವು ಇಲ್ಲಿ ಬಳಸಲ್ಪಡುವದರ ಜೊತೆಗೆ, ಅದು ಸೆರೆಲ್ಲಿರುವವರ ಸಂಗಡ *ಅನುತಾಪಪಡಿರಿ* ಎಂಬ ಬುದ್ಧಿವಾದದೊಂದಿಗೆ 10:34ರಲ್ಲಿ ಕಾಣಿಸಿಕೊಳ್ಳುತ್ತದೆ. ಕ್ರೈಸ್ತರು, ಕ್ರಿಸ್ತನು ಇದ್ದ ರೀತಿಯಲ್ಲಿಯೇ ಅನುತಾಪವುಳ್ಳವರಾಗಿರ ತಕ್ಕದ್ದು. "ಅನುತಾಪ" ಎಂಬ ಪದವು "ಬಾಧೆಯನ್ನು ಹೊರಗಿನಿಂದಲೇ ಪರಿಗಣಿಸಿ ಕೇವಲ ಕನಿಕರವನ್ನು ವ್ಯಕ್ತಪಡಿಸುವದು ಆಗಿರುವದಿಲ್ಲ, ಆದರೆ ಬಾಧೆಯನ್ನು ಪ್ರವೇಶಿಸಿ ಅದನ್ನು ತನ್ನದನ್ನಾಗಿಸಿಕೊಳ್ಳುವವನ ಭಾವಗಳನ್ನು ವ್ಯಕ್ತಪಡಿಸುತ್ತದೆ."[47] ನಮ್ಮ ಮಹಾಯಾಜಕನು ಬಲಹೀನರು ಮತ್ತು ದೀನರ ಸಂಗಡ ಅನುತಾಪಪಡುವದಕ್ಕೆ ಸಮರ್ಥನಾಗಿದ್ದಾನೆ.[48] ನಿಜವಾದ ಅನುತಾಪವು ಮಾನವರಿಂದ ಪ್ರವೀಣತೆಯನ್ನು ಸಾಧಿಸುವದಕ್ಕೆ ಒಂದು ಕಠಿಣವಾಗಿರುವ ಗುಣವಾಗಿದೆ; ಆದರೆ ಕುಂದುಗಳ ಹೊರತಾಗಿಯೂ ಕ್ರೈಸ್ತನು ಕರ್ತನಂತೆ ಇರುವದಕ್ಕೆ ಪರಿಶ್ರಮ ಪಡುತ್ತಾನೆ.

ಒಬ್ಬನು ಶೋಧನೆಯ ಅಂತಿಮ ಪರೀಕ್ಷಿಸುವ ಶಕ್ತಿಯನ್ನು ತಲುಪುವ ಮುಂಚೆಯೇ ಅದಕ್ಕೆ ಒಳಗಾಗುವವನು ಪಾಪವನ್ನು ಅಕ್ಷರ ಮಟ್ಟಿಗೆ ಮಾತ್ರವೇ ತಿಳಿಯಬಲ್ಲನು ಹೊರತು ಅದನ್ನು ದಾಟಿ ಅರಿಯಲಾರನು, ಯಾಕೆಂದರೆ ಆತನು ಅತ್ಯಂತ ದೊಡ್ಡ ಪರೀಕ್ಷೆಯನ್ನು ತಲುಪುವ ಮುಂಚೆಯೇ ಅಪರಾಧದೊಳಗೆ ಬಿದ್ದವನಾಗಿರುತ್ತಾನೆ.

ಶೋಧನೆಯೊಂದಿಗಿನ ಒಡನಾಟವು ಇತರ ಪಾಪಿಗಳ ಮೇಲೆ ಕನಿಕರವನ್ನು ಹೊಂದುವಂತೆ ನಮಗೆ ಕಾರಣವಾಗುವದು. ಯೇಸು ಮಾನವತೆಯನ್ನು ಅನುಭವಿಸಿದ್ದಾನೆ, ಮರಣವನ್ನು ಹೊಂದುವ ಮಟ್ಟಿಗೆ ಅನುಭವಿಸಿದ್ದಾನೆ (ನೋಡಿರಿ ಫಿಲಿಪ್ಪಿ 2:8). ಈಗ ಆತನ ಮನಸ್ಸು ಸ್ಪರ್ಶಿಸಲ್ಪಡಬಲ್ಲದು (ವ. 15; KJV). ಆತನು ನಿರ್ದಯಿ ಮತ್ತು ಭಾವಶೂನ್ಯನಲ್ಲ, ಅಥವಾ ಜನಸಮೂಹದ ಮೇಲೆ ಹೊತ್ತೊಯ್ಯಲ್ಪಡುವ ಭವ್ಯವಾದ ಆಸನದಲ್ಲಿ ಕೂತುಕೊಂಡಿರುವವನೂ ಆಗಿರುವದಿಲ್ಲ. ಯೇಸು ಸಂಪೂರ್ಣವಾಗಿ ನಮ್ಮೊಳಗೆ ಒಬ್ಬನಂತಾದನು. ನಾವು ಸಹ ಎದುರಿಸಬಲ್ಲೆವು ಎಂಬುದನ್ನು ಆತನ ಬಲವಾದ ಮಾದರಿಯು ತೋರಿಸಿ ಕೊಡುತ್ತದೆ.

ಆತನು ತನ್ನ ನಿರ್ಬಲಾವಸ್ಥೆಯಲ್ಲಿ ಬಾಧೆಯನ್ನನುಭವಿಸಿದನು, ನಾವು ಸಹ ಹಾಗೆಯೇ ಅನುಭವಿಸತಕ್ಕದ್ದು; ಆದರೆ ಸಂಕಷ್ಟಗಳು ಆತನು ದೇವರಿಗೆ ಮಾಡುವ ಸೇವೆಗೆ ಅಡ್ಡಿಯಾಗುವಂತೆ ಆತನು ಅವಕಾಶ ಕೊಡಲಿಲ್ಲ (ವ. 15). ಆತನು ಶಾರೀರಿಕ ನೋವು, ಬಳಲಿಕೆ,

ಮತ್ತು ಬೇರೆಯವರಲ್ಲಿ ನಿರಾಶೆಯನ್ನು ಅನುಭವಿಸಿದನು. ಆತನು ಯಾವಾಗಲೂ ತಂದೆಯ ಚಿತ್ತವನ್ನು ಮಾಡಬೇಕೆಂದು ದೃಢತೀರ್ಮಾನದಿಂದಿದ್ದನು. ಆತನು "ತಾನು ರಾಜನ ಭೋಜನಪದಾರ್ಥಗಳನ್ನು ತಿಂದು ರಾಜನು ಕುಡಿಯುವ ದ್ರಾಕ್ಷಾರಸವನ್ನು ಕುಡಿದು ತನ್ನನ್ನು ಅಶುದ್ಧಮಾಡಿಕೊಳ್ಳಬಾರದು ಎಂದು ನಿಶ್ಚಯಿಸಿಕೊಂಡಿದ್ದ" ದಾನಿಯೇಲನ ರೀತಿಯಲ್ಲಿದ್ದನು (ದಾನಿಯೇಲ 1:8). ಯೇಸು ಶೋಧನೆಗೊಳಗಾಗಿದ್ದನು ಎಂಬುದನ್ನು ನಾವು ಎಂದಿಗೂ ಅಲ್ಲಗಳೆಯಬಾರದು! James Burton Coffmanನು ಯೋಚಿಸಿದ್ದೇನೆಂದರೆ ಆತನು ಅತ್ಯಂತ ದೊಡ್ಡ ಶೋಧನೆಯು "ಇಡೀ ಕಾರ್ಯವನ್ನು ರದ್ದುಗೊಳಿಸಬೇಕು, ವಿಮೋಚನೆಯ ತನ್ನ ಧ್ಯೇಯವನ್ನು ಅರ್ಧಕ್ಕೆ ನಿಲ್ಲಿಸಬೇಕು, ದೇವದೂತರ ಗಣಗಳನ್ನು ಸಹಾಯಕ್ಕೆ ಕರೆಯಬೇಕು ಎಂಬ ಉದ್ವೇಗ ಆಗಿರಬಹುದಾಗಿದೆ" ಮತ್ತು ಶಿಲುಬೆಯ ಮೇಲೆ ಮರಣಿಸಿದೆಯೇ ತನ್ನ ವೈರಿಗಳನ್ನು ಸೋಲಿಸಬೇಕೆಂಬ ತುಡಿತ ಆಗಿರಬಹುದಾಗಿದೆ.[49]

ಕ್ರಿಸ್ತನು ಶೋಧನೆ ಮತ್ತು ಬಾಧೆಗಳನ್ನು ಅಂತಿಮ ಮಟ್ಟದ ತನಕ ಅನುಭವಿಸಿದನು ಮತ್ತು ತತ್ಪರಿಣಾಮವಾಗಿ ನಮ್ಮ ನಿರ್ಬಲಾವಸ್ಥೆಯನ್ನು ಅರ್ಥಮಾಡಿಕೊಳ್ಳುತ್ತಾ ನಾದ್ದರಿಂದ, ಆತನು ಮಾನವರಿಗೆ ಅನುತಾಪ ತೋರಬಲ್ಲನು. "ಕ್ರಿಸ್ತನು ಎಂದಿಗೂ ಶೋಧನೆಗೆ ಒಳಗಾಗದವನಾಗಿ, ಅತ್ಯಂತ ಘೋರ ಪಾಪಿಗೆ ಗೊತ್ತಿರುವದಕ್ಕಿಂತಲೂ ಅಧಿಕವಾಗಿ ಸೈತಾನನ ಬಲವನ್ನು ಅರಿತವನಾಗಿದ್ದಾನೆ."[50]

"ಶೋಧನೆಗೆ ಗುರಿಯಾದನು" ಎಂಬುದಕ್ಕಿರುವ ಪದದ (πειράζω, *peirazō* ಎಂಬದರಿಂದ ಬಂದದ್ದು) ಅರ್ಥವು "ಪರೀಕ್ಷಿಸಲ್ಪಟ್ಟನು" ಎಂದಾಗಿದೆ. ನಾವು ಯೇಸುವಿನ "ಶೋಧನೆಯನ್ನು" ಆತನ ನಂಬಿಕೆಗೆ ಮತ್ತು ಸ್ಥಿರತೆಗೆ ಮಾಡಲ್ಪಟ್ಟ ಒಂದು ಪರೀಕ್ಷೆಯೆಂಬಂತೆ ಯೋಚಿಸಬಹುದು, ಆದರೆ ಆ ಪದದ ಅರ್ಥವು "ಪರೀಕ್ಷೆ" ಮತ್ತು "ಶೋಧನೆ" ಎರಡೂ ಆಗಿರಬಲ್ಲದು. ಯೇಸುವು ಇಷ್ಟವಾಗದ ನಡವಳಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ "ಶೋಧನೆಗೆ ಗುರಿಯಾದನು" ಎಂಬದಾಗಿ ಇಬ್ರಿಯರಿಗೆ ಪತ್ರಿಕೆಯು ಹೇಳುವದಿಲ್ಲ, ಆದರೆ ಆತನು ತೋಟದಲ್ಲಿನ ಪ್ರಾರ್ಥನೆ ಹಾಗೂ ಶಿಲುಬೆ ಮರಣದಲ್ಲಿ ಅನುಭವಿಸಿದ ವೇದನೆಯ ಮೂಲಕ ಆತನ ನಂಬಿಗಸ್ತಿಕೆಯು ಪರೀಕ್ಷಿಸಲ್ಪಡುವದರ ಮೇಲೆ ಮುಖ್ಯ ಗಮನವನ್ನು ಹರಿಸುತ್ತದೆ (5:7, 8). ಆತನ ಪರೀಕ್ಷೆಗಳು ಈ ಪತ್ರಿಕೆಯು ಬರೆಯಲ್ಪಡುವ ವೇಳೆ ಕ್ರೈಸ್ತರು ಅನುಭವಿಸಬೇಕಾಗಿದ್ದ ಅದೇ ರೀತಿಯ ಪರೀಕ್ಷೆಗಳಾಗಿದ್ದವು. ಬಲವಾದ ನಂಬಿಕೆಯುಳ್ಳವನಿಗೆ ಪರೀಕ್ಷೆಯು ಅಂತಹ ದೊಡ್ಡ ಶೋಧನೆಯನ್ನೇನೂ ತಂದೊಡ್ಡುವದಾಗಿರಲಿಲ್ಲ.

ಯೇಸು ಪಾಪ ಮಾಡಬೇಕೆಂಬ ಶೋಧನೆಗೆ ಒಳಗಾಗದೆಯೇ ಬಾಧೆಯನ್ನನುಭವಿಸಿದನಾದ್ದರಿಂದ (ವ. 15; 1 ಪೇತ್ರ 2:20-22), ಕೇಳಲ್ಪಡುವ ಪ್ರಶ್ನೆಯೇನೆಂದರೆ, "ಯೇಸು ನಿಜಕ್ಕೂ ಪಾಪ ಮಾಡುವದಕ್ಕೆ ಸಮರ್ಥನಾಗಿದ್ದನೋ?" ಇಲ್ಲವಾದಲ್ಲಿ, ಅಲ್ಲಿ ಶೋಧನೆಯೇ ಇರಲಿಲ್ಲ! ಆತನು ಪಾಪ ಮಾಡುವದಕ್ಕೆ ಸಾಧ್ಯವಿರಲಿಲ್ಲ ಎಂಬ ಯೋಚನೆಯು ಯೇಸು ಸೈತಾನನಿಂದ ಶೋಧನೆಗೊಳಗಾದ ಕುರಿತ ಬರವಣಿಗೆಗಳನ್ನು ಅಪಹಾಸ್ಯ ಮಾಡಿದಂತಾಗುತ್ತದೆ (ಮತ್ತಾಯ 4:1-11; ಮಾರ್ಕ 1:12, 13; ಲೂಕ 4:1-13). ಈ ವಿವರಣೆಗಳು ಯೇಸುವು ಒಳಗಾಗುವದಕ್ಕೆ ಸಾಧ್ಯವಿಲ್ಲದ ಶೋಧನೆಯ ಕುರಿತು ತಿಳಿಸುವದಾದರೆ, ಇಡೀ ಕಥೆಯೇ ಅರ್ಥವಿಲ್ಲದ ಒಂದು ನಾಟಕವಾಗುತ್ತದೆ.

ಆತನು ಶೋಧಿಸಲ್ಪಟ್ಟನು, ಆದರೆ ಶೋಧನೆಗೊಳಗಾಗುವದರಲ್ಲಿ ಯಾವ ಪಾಪವೂ ಇರುವದಿಲ್ಲ. "ಪ್ರತಿಯೊಬ್ಬನು ತನ್ನೊಳಗಿರುವ ಆಶಾಪಾಶಗಳಿಂದ ಪ್ರೇರೇಪಿಸಲ್ಪಡುತ್ತಾನೆ" (ಶೋಧಿಸಲ್ಪಡುತ್ತಾನೆ) ಎಂದು ಯಾಕೋಬನು ಹೇಳುತ್ತಾನೆ (ಯಾಕೋಬ 1:14). ಸೈತಾನನು

ನಮ್ಮ ಆಶಾಪಾಶಗಳನ್ನು ಎಬ್ಬಿಸಿ ಬಿಡುವದರಲ್ಲಿ ಯಶಸ್ವಿಗೊಳ್ಳಬಹುದು, ಆದರೆ ಇದನ್ನೇ ಯೇಸುವು ಜಯಿಸಿದನು. ಯೇಸು, ಒಬ್ಬ ದೇವರಾಗಿದ್ದು ಪಾಪವನ್ನು ಮಾಡುವದಕ್ಕೆ ಅಶಕ್ತನಾಗಿದ್ದನೆಂದು ಅಭಿಪ್ರಾಯ ಪಡಲಾಗಿರುತ್ತದೆ;[51] ಆದರೆ ಆತನು ದೈವಿಕ ಸ್ವಭಾವವನ್ನು ಹೊಂದಿದ್ದ ಕಾರಣದಿಂದ ಪಾಪವನ್ನು ಜಯಿಸಿದನೆಂದು ಯೋಚಿಸುವದಾದರೆ ನಾವು ತಪ್ಪು ಮಾಡುವವರಾಗುತ್ತೇವೆ. ಆತನು ಶೋಧನೆಗೆ ಗುರಿಯಾದರೂ ಪಾಪರಹಿತನಾಗಿದ್ದನೆಂಬುದು ಬೈಬಲಾಧಾರಿತ ಉಪದೇಶವಾಗಿದೆ.

ಹೋರಾಟಗಳಲ್ಲಿರುವ ವ್ಯಕ್ತಿಗಳು, "ನಾನು ಎದುರಿಸಿದಷ್ಟು ಶೋಧನೆಗಳನ್ನು ಯೇಸುವು ಎಂದಿಗೂ ಎದುರಿಸಲಿಲ್ಲ" ಎಂದು ಹೇಳಬಹುದು. "ಪಾಪವಿಲ್ಲದವನಾಗಿ" ಇರುವದೆಂದರೆ ಆತನು ಎಂದಿಗೂ ಶೋಧನೆಗೆ ಒಳಗಾಗಲೇ ಇಲ್ಲ ಎಂದು ಅರ್ಥವಾಗುವದಿಲ್ಲ. ಎಲ್ಲಾ ಜನರು ಒಂದು "ಪಾಪಸ್ವಭಾವವನ್ನು" ಹೊಂದಿದವರಾಗಿ ಜನಿಸುತ್ತಾರೆಂದು ನಂಬುವವರಿಗೆ, ನಾವು ಹೀಗೆ ಕೇಳುತ್ತೇವೆ, "ಯೇಸು ನಮಗಿಂತ ವ್ಯತ್ಯಾಸವಾದ ದೇಹವನ್ನು ಬಾಧ್ಯವಾಗಿ ಹೊಂದಿಕೊಂಡನೋ? ಹಾಗಿಲ್ಲವಾದರೆ, ಆತನ ಶೋಧನೆಗಳು ಆತನ ಸ್ವಂತ 'ಪಾಪಸ್ವಭಾವ'ದಿಂದ ಅಭಿವೃದ್ಧಿಗೊಂಡವೋ"? ಆತನು ಶೋಧನೆಗೊಳಗಾಗುವದಕ್ಕೆ ಸಮರ್ಥನಾಗಿದ್ದರೆ, ಆತನು ಪಾಪ ಮಾಡುವದಕ್ಕೆ ಸಮರ್ಥನು ಸಹ ಆಗಿರತಕ್ಕದ್ದು; ಇಲ್ಲವಾದರೆ, ಅಲ್ಲಿ ಶೋಧನೆಯೆಂಬುದೇ ಇರುವದಿಲ್ಲ.

ಯೆಹೂದಿ ಮಹಾಯಾಜಕನು ಅತಿ ಪರಿಶುದ್ಧ ಸ್ಥಳವನ್ನು ಪ್ರವೇಶಿಸಿದಾಗ ಆತನು ಒಬ್ಬ ಮನುಷ್ಯನಿಗಿಂತ ಹೆಚ್ಚಿನವನಾಗುತ್ತಿದ್ದನು, ಮತ್ತು ದೇವರು ಹಾಗೂ ಮನುಷ್ಯನ ನಡುವಿನ ಆತನ ಅಸ್ತಿತ್ವದ ಅಂಚು ಈ ದೇವರ ಸೇವಕನನ್ನು ಪಾಪ ಹಾಗೂ ಭ್ರಷ್ಟತೆಯಿಂದ ದೂರವಿಡುವದಾಗಿತ್ತು ಎಂಬುದಾಗಿ Philo ವಾದಿಸುತ್ತಾನೆ.[52] ನಿಶ್ಚಯವಾಗಿಯೂ, ಯೆರೂಸಲೇಮಿನ ಯಾಜಕರು ಇದನ್ನು ನಂಬುವದಕ್ಕಿಂತಲೂ ಉತ್ತಮವಾಗಿ ಅರಿತವರಾಗಿದ್ದರು, ಆದರೆ ಪ್ರಥಮ ಶತಮಾನದ ಇತರ ಯೆಹೂದ್ಯರು ಇದೇ ರೀತಿಯ ಯೋಚನೆಗಳನ್ನು ಮಿಶ್ರಣಗೊಳಿಸಿರಬಹುದಾಗಿದೆ. ಇಬ್ರಿಯರಿಗೆ ಪತ್ರಿಕೆಯಲ್ಲಿನ ಪ್ರತ್ಯುತ್ತರವು ಏನೆಂದರೆ ಅಗತ್ಯವೆಂದು Philo ಊಹಿಸಿಕೊಂಡ ಮಾನದಂಡಗಳಿಗೆ ಸಹ ಯೇಸುವು ಪೂರ್ಣವಾಗಿ ಅರ್ಹನಾಗಿದ್ದನು.

**ವಚನ 16.** ಮಹಾಯಾಜಕನ ಕುರಿತು ಅಂತಹ ತಿಳುವಳಿಕೆಯನ್ನು ಹೊಂದಿದವರಾಗಿ, ನಾವು ಆತನ ಮೂಲಕವಾಗಿ ತಂದೆಯ ಬಳಿಗೆ ನಿಯತಕ್ರಮವಾಗಿ, ಶ್ರದ್ಧೆಯಿಂದ, ಮತ್ತು ಧೈರ್ಯದಿಂದ ಹೋಗಬಲ್ಲೆವು. **ಮುಂದೆ ಬರುವದು** ಎಂದರೆ ಖಂಡಿತವಾಗಿಯೂ ಅದರಲ್ಲಿ ನಮ್ಮ ಪಾಪಗಳ ಕ್ಷಮಾಪಣೆಗಾಗಿ ಪ್ರಾರ್ಥಿಸುವ ಸದವಕಾಶವು ಸೇರಿರತಕ್ಕದ್ದು.

ನಾವು ಕರುಣೆಗಾಗಿ ಪ್ರಾರ್ಥಿಸುವ ಅಗತ್ಯವಿದೆ. ಈ ವಚನವು ಅಂಥ ಪ್ರಾರ್ಥನೆಯನ್ನು ಅರ್ಪಿಸುವಂತೆ ನಮ್ಮನ್ನು ಪ್ರೋತ್ಸಾಹಿಸುತ್ತದೆ. "ಮುಂದೆ ಬರೋಣ (ಸಮೀಪ ಬರೋಣ)" ಎಂಬ ಈ ಪದಗುಚ್ಛವು ಒಂದು ಸಾಮಾನ್ಯವಾದದ್ದು ಮತ್ತು ಪತ್ರಿಕೆಯ ಒಂದು ಪ್ರಧಾನ ವಿಷಯವಾಗಿದೆ. ಇದು 7:19, 25; 10:1, 22; ಮತ್ತು 11:6ರಲ್ಲಿ ಬಳಸಲ್ಪಟ್ಟಿದೆ. ಈ ಯೋಚನೆಯು 6:18ರಲ್ಲಿ ಪರೋಕ್ಷವಾಗಿ ಸೂಚಿಸಲ್ಪಟ್ಟಿದೆ.

"ಮುಂದೆ ಬರೋಣ" ಎಂಬುದಕ್ಕಿರುವ ಗ್ರೀಕ್ ಪದವು (προσέρχομαι, *proserchomai*) ಎಂಬುದು ಆರಾಧನಾಪೂರ್ವಕ ಸೇವೆಯಲ್ಲಿ ದೇವರನ್ನು ಸಮೀಪಿಸುವದಕ್ಕೆ ಸಾಧ್ಯವಿದ್ದ ಯಾಜಕರಿಗೆ ಸಂಬಂಧ ಹೊಂದಿದೆ.[53] ಆ ಸವಲತ್ತು ಈಗ ಎಲ್ಲಾ ಕ್ರೈಸ್ತರಿಗೆ ಲಭ್ಯಗೊಳಿಸಲ್ಪಟ್ಟಿರುತ್ತದೆ.[54]

ಮಹಾಯಾಜಕರು ಮಾತ್ರವೇ ದೇವಾಲಯದ ಅತಿ ಪರಿಶುದ್ಧ ಸ್ಥಳವನ್ನು ಪ್ರವೇಶಿಸುವದಕ್ಕೆ

ಸಾಧ್ಯವಿತ್ತು. ಅಶುದ್ಧವಿಲ್ಲದ ಯಾಜಕರು ಪರಿಶುದ್ಧ ಸ್ಥಳವನ್ನು ಪ್ರವೇಶಿಸಬಹುದಿತ್ತು. ಹೊರಗಿನ ಅಂಗಳದಲ್ಲಿ ಭಕ್ತಿಯುಳ್ಳ ಮತ್ತು ಶುದ್ಧಗೊಂಡ ಯೆಹೂದ್ಯರನ್ನು ಅನುಮತಿಸಲಾಗುತ್ತಿತ್ತು. ಯೆಹೂದಿ ಅಂಗಳದ ಹೊರಗೆ ಅನ್ಯಜನರ ಅಂಗಳವಿತ್ತು, ಮತ್ತು ಅದರ ಹಿಂದುಗಡೆಯಷ್ಟೆ ಸ್ತ್ರೀಯರ ಅಂಗಳವಿತ್ತು. ಯೇಸು ಆ ಎಲ್ಲಾ ಅಡ್ಡಗೋಡೆಗಳನ್ನು ತೆಗೆದು ಹಾಕಿದನು. ನಾವು ನಮ್ಮ ತಂದೆಯ ಬಳಿಗೆ, ಯಜ್ಞವೇದಿಯ ಹತ್ತಿರಕ್ಕೆ ಸಹ "ಸಮೀಪವಾಗಿ ಬರುವ" ಹಾಗೆ ಅನುಮತಿಸಲ್ಪಟ್ಟಿದ್ದೇವೆ (ನೋಡಿರಿ 10:22). ನಾವು ಪ್ರಾರ್ಥನೆಯಲ್ಲಿ ದೇವರ ಪ್ರಸನ್ನತೆಯೊಳಗೆ ಪ್ರವೇಶಿಸುತ್ತೇವೆ, ಸ್ವತಃ ದೇವರ ಸಮೀಪಕ್ಕೆ ಬರುತ್ತೇವೆ. ಆತನ ಬಳಿಗೆ ನಾವು ಯಾವದೇ ಸಮಯದಲ್ಲಿಯೂ ಹೋಗಬಹುದಾಗಿದೆ. Wiersbeಯು ಈ ಅಭಿಪ್ರಾಯ ಪಡುತ್ತಾನೆ,

> ಇಸ್ರಾಯೇಲ್ಯನು ಶೋಧನೆಗೊಳಗಾದಾಗ, ಆತನು ಸಹಾಯಕ್ಕಾಗಿ ಸುಲಭವಾಗಿ ಮಹಾಯಾಜಕನ ಬಳಿಗೆ ಓಡಿ ಹೋಗುವದಕ್ಕಾಗುತ್ತಿರಲಿಲ್ಲ; ಮತ್ತು ಆತನು ಖಂಡಿತವಾಗಿಯೂ ದೇವರ ಸಹಾಯಕ್ಕಾಗಿ ಅತಿ ಪರಿಶುದ್ಧ ಸ್ಥಳದೊಳಗೆ ಪ್ರವೇಶಿಸುವದಕ್ಕಂತೂ ಸಾಧ್ಯವಿರಲಿಲ್ಲ. ಆದರೆ ಯೇಸು ಕ್ರಿಸ್ತನಲ್ಲಿ ವಿಶ್ವಾಸಿಗಳಾಗಿ, ನಾವು ಯಾವ ಸಮಯದಲ್ಲಾದರೂ ಯಾವದೇ ಪರಿಸ್ಥಿತಿಯಲ್ಲಾದರೂ ನಮ್ಮ ಮಹಾಯಾಜಕನ ಬಳಿಗೆ ಓಡಿ ಹೋಗಬಲ್ಲೆವು, ಮತ್ತು ನಮಗೆ ಅಗತ್ಯವಾದ ಸಹಾಯವನ್ನು ಪಡೆದುಕೊಳ್ಳಬಹುದು.[55]

ಅಷ್ಟುಮಾತ್ರವಲ್ಲದೆ, ವಿಗ್ರಹಾರಾಧಕ ಜನಾಂಗದವರು ತಮ್ಮ ದೇವರುಗಳ ಹತ್ತಿರ ಭಯ ಮತ್ತು ನಡುಗುವವರಾಗಿ ಹೋಗುವ ರೀತಿಯಲ್ಲಿ ನಾವು ಆತನ ಬಳಿಗೆ ಹೋಗಬೇಕಾಗಿಲ್ಲ.

ಯೆಹೂದ್ಯರು ಸಹ "ಪರಲೋಕದಲ್ಲಿರುವ ನಮ್ಮ ತಂದೆಯೇ" ಎಂದು ಪ್ರಾರ್ಥಿಸುವದಕ್ಕೆ ಧೈರ್ಯಮಾಡಲಿಲ್ಲ (ಮತ್ತಾಯ 6:9). ದೈವಿಕ ದೇವರೊಂದಿಗೆ ಅಂಥ ಸಂಬಂಧವು ಹಳೆಯ ಒಡಂಬಡಿಕೆಯಲ್ಲಿ ಅಭಿವೃದ್ಧಿಗೊಂಡಿರಲಿಲ್ಲ. ಇಂದು, ಕ್ರೈಸ್ತರಾಗಿ, ನಾವು ಆತನ ಬಳಿಗೆ **ಧೈರ್ಯದಿಂದ** ಬರಬಹುದು, ಮಗನು ಅರ್ಥಮಾಡಿಕೊಳ್ಳುತ್ತಾನೆ ಮತ್ತು ಸ್ವತಃ **ಕೃಪಾಸನ**ದ ಬಳಿಗೆ ದಾರಿಯನ್ನು ಮಾಡಿರುತ್ತಾನೆ, ಆತನು ತನ್ನ ತಂದೆಯ ಬಲಗಡೆಯಲ್ಲಿ ಮಹಾಯಾಜಕನಾಗಿದ್ದು ನಮ್ಮನ್ನು ಲಕ್ಷ್ಯವಿಟ್ಟು ಕೇಳಿಸಿಕೊಳ್ಳು ತ್ತಾನೆಂಬುದನ್ನು ಬಲ್ಲವರಾಗಿದ್ದೇವೆ. ಖಂಡಿತವಾಗಿಯೂ, ನಾವು ನಮ್ಮಷ್ಟಕ್ಕೆ ನಾವೇ ನಮ್ಮ ಸ್ವಂತ ಯೋಗ್ಯತೆಗಳಿಂದ ದೇವರ ಮುಂದೆ ಹೋದರೆ, ನಮ್ಮ ಮೊರೆಯು ಕೇಳಿಸಿಕೊಳ್ಳಲ್ಪಡುವದಿಲ್ಲ.

"ಕೃಪಾಸನ" ಎಂಬುದು "ದೇವರ ಸಿಂಹಾಸನ" ಎಂದು ಹೇಳುವ ಇನ್ನೊಂದು ಯೆಹೂದಿ ವಿಧವಾಗಿತ್ತು. ಯೆಹೂದ್ಯರು ದೇವರ ಹೆಸರನ್ನು ದುರುಪಯೋಗ ಮಾಡಬಾರದೆಂಬುದಕ್ಕಾಗಿ, ಅದನ್ನು ಹೇಳುವದರಿಂದ ದೂರವಿರುವದು ಯೆಹೂದ್ಯರ ವೈಶಿಷ್ಟ್ಯವಾಗಿತ್ತು. ಇಲ್ಲಿ "ಸಿಂಹಾಸನ" ಒಂದು ಸೌಮ್ಯೋಕ್ತಿಯಾಗಿರುತ್ತದೆ-ಸ್ವತಃ ದೇವರನ್ನೇ ಪ್ರತಿನಿಧಿಸುವದಾಗಿದೆ. ಆತನು "ಸಕಲ ಕೃಪೆಯ ದೇವರು [ಕೃಪಾಪೂರ್ಣನಾದ]" ಎಂದು ಕರೆಯಲ್ಪಟ್ಟಿದ್ದಾನೆ (1 ಪೇತ್ರ 5:10). ಇದು ಆತನಿಗೆ ಒಂದು ಸೂಕ್ತವಾದ ಬಿರುದು ಆಗಿರುತ್ತದೆ ಯಾಕೆಂದರೆ ಆತನ ಸ್ವಭಾವದ ತಿರುಳು **ಕೃಪೆ** (ಕರುಣೆ) ಆಗಿರುತ್ತದೆ. ಆತನ ನಸನ್ನಿಧಿಯಲ್ಲಿ ನಮಗೆ **ಸಮಯೋಚಿತವಾದ ಸಹಾಯವು** ದೊರಕುತ್ತದೆ. ನಾವು ಗ್ರಹಿಸಿಕೊಂಡರೂ ಸರಿಯೇ ಅಥವಾ ಗ್ರಹಿಸಿಕೊಳ್ಳದಿದ್ದರೂ ಸರಿಯೇ, ನಾವು ಯಾವಾಗಲೂ ಅಗತ್ಯತೆಯಲ್ಲಿರುತ್ತೇವೆ. ದೇವರ ಕರುಣೆಯುಳ್ಳ ಸ್ವಭಾವವನ್ನು ಬಲ್ಲವರಾಗಿರುವದು ಪ್ರಾರ್ಥನೆಯಲ್ಲಿ ಆತನನ್ನು ಧೈರ್ಯವಾಗಿ ಸಮೀಪಿಸುವಂತೆ, ನಮ್ಮ ತಂದೆಯೊಂದಿಗೆ ಮುಕ್ತವಾಗಿ ಮಾತಾಡುವಂತೆ ಶಕ್ತಗೊಳಿಸುತ್ತದೆ. ಈ ಅಮೋಘವಾದ ಯೋಚನೆಯು ನಮಗೆ ಎಂಥ ಆದರಣೆಯನ್ನು ತರುವದಾಗಿದೆ! ದೇವರ ಸಿಂಹಾಸನವು

ಕೃಪಾಕಟಾಕ್ಷವನ್ನು ಹುಡುಕುವ ಮತ್ತು ಸಿಕ್ಕುವಂತಹ ಸ್ಥಳವಾಗಿರುತ್ತದೆ. ಅನೇಕ ಸಂದರ್ಭಗಳಲ್ಲಿ ನಮ್ಮ ಕರ್ತನು ಸಮೀಪಿಸಿದ ರೀತಿಯಲ್ಲಿ, ನಾವು ಸಿಂಹಾಸನದ ಸಮೀಪ ಬರುವಾಗ, ನಾವು ಆತನ ಮಹಿಮೆಯಲ್ಲಿ ಸ್ವಲ್ಪವನ್ನು ಹಂಚಿಕೊಳ್ಳುವೆವು.

ಇಬ್ರಿಯ 4:14-16 ಮತ್ತು 10:19-23ರಲ್ಲಿ ಹೋಲಿಕೆಗಳನ್ನು ಕಾಣಬಹುದು – ಎರಡೂ ಸಹ ನಮ್ಮ ಪ್ರತಿಜ್ಞೆಯನ್ನು ಬಿಡದೆ ಹಿಡಿದುಕೊಂಡಿರುವದು ಮತ್ತು ದೇವರ ಬಳಿಗೆ ಧೈರ್ಯದಿಂದ ಬರುವದರ ಕುರಿತು ಸೂಚಿಸುತ್ತವೆ. ಈ ಪತ್ರಿಕೆಯು ಒಂದು ಉತ್ತಮವಾಗಿ ಸಂಘಟಿಸಲ್ಪಟ್ಟಿರುವ ಪ್ರಕರಣ ಗ್ರಂಥವಾಗಿದೆ; ಲೇಖಕನು ವಿಚಾರಗಳನ್ನು ತೆರೆದಿಡುತ್ತಾನೆ ಮತ್ತು ಬಳಿಕ ಅವುಗಳ ಬಳಿಗೆ ಹಿಂದಿರುಗಿ ಬಂದು ತಾನು ಹೇಳಲಿಚ್ಛಿಸುವದನ್ನು ಇನ್ನಷ್ಟು ಬಲಯುತವಾಗುವಂತೆ ತಿಳಿಸುತ್ತಾನೆ. ಮೊದಲು, 4:14-16 ವಚನಗಳು ನಮ್ಮ ಮಹಾಯಾಜಕನಿಂದಾಗುವ ಪ್ರಯೋಜನಗಳನ್ನು ಪರಿಚಯಿಸುತ್ತವೆ, ಮತ್ತು ಬಳಿಕ 10:19-23 ವಚನಗಳು ಅದನ್ನು ಪುನರ್ದೃಢಪಡಿಸುತ್ತವೆ. 5ರಿಂದ 9 ಅಧ್ಯಾಯಗಳು ಈ ಯೋಚನೆಯೆಡೆಗೆ ಪುನಃ ಪುನಃ ಮರಳುತ್ತದೆ, ವಾಚಕರಿಗೋಸ್ಕರ ಅದನ್ನು ಒತ್ತಿ ಹೇಳುತ್ತವೆ. ಯೆಹೂದ್ಯ ಕ್ರೈಸ್ತರಿಗೆ ಯಾಜಕತ್ವದ ಬಗ್ಗೆ ಪರಿಚಯವಿತ್ತು ಮತ್ತು ಅವರು ಈ ವಾದದಿಂದ ಹೆಚ್ಚು ಪರಿಣಾಮಕ್ಕೊಳಗಾಗಿರಬಹುದು.

ನಮ್ಮ ಮಹಾಯಾಜಕನಾದ ಕ್ರಿಸ್ತನು, ನಮಗೋಸ್ಕರ ವಿಜ್ಞಾಪನೆ ಮಾಡುತ್ತಾನೆ. ಒಬ್ಬ ಯಾಜಕನಾಗಿ ಮತ್ತು ಒಬ್ಬ ಅರಸನಾಗಿ, ಆತನು ಮೊದಲ ಮಹಾಯಾಜಕನಾದ ಆರೋನನಿಗಿಂತ ಮತ್ತು ಹಳೆಯ ಒಡಂಬಡಿಕೆಯ ಎಲ್ಲಾ ಯಾಜಕರಿಗಿಂತಲೂ ಅತ್ಯಂಥ ಶ್ರೇಷ್ಠನಾಗಿದ್ದನು. ಆತನು ಪಾಪರಹಿತ ಜೀವಿತವನ್ನು ನಡಿಸಿದನಾದರೂ, ಆತನಿಗೆ ಬಾಧೆ ಮತ್ತು ಶೋಧನೆಯ ಕುರಿತು ಬಲ್ಲವನಾಗಿದ್ದಾನೆ. ಆತನಿಗೆ ನಮ್ಮ ನಿರ್ಬಲಾವಸ್ಥೆಗಳು ಅರ್ಥವಾಗುತ್ತದೆ ಮತ್ತು ಆತನು ನಮ್ಮ ಮೇಲೆ ಕರುಣೆಯನ್ನು ಹೊಂದಿದ್ದಾನೆ.

## ಹೆಚ್ಚಿನ ಅಧ್ಯಯನಕ್ಕಾಗಿ:
## ಪ್ರಾಣ ಮತ್ತು ಆತ್ಮ (4:12)

"ಆತ್ಮ" (πνεῦμα, *pneuma*) ಮತ್ತು "ಪ್ರಾಣ" (ψυχή, *psuchē*) ಬೇರೆ ಬೇರೆಯಾಗಿ ಇರುವಂಥವುಗಳೋ, ಅಥವಾ ಅವುಗಳು ಯಾವಾಗಲೂ ಒಂದೇ ಸಂಗತಿಯ ವಿವಿಧ ಭಿನ್ನರೂಪಗಳೋ? ಕೆಲವೊಮ್ಮೆ ಅವುಗಳಲ್ಲಿ ವ್ಯತ್ಯಾಸ ಗುರುತಿಸುವದು ಕಷ್ಟಕರವಾಗುತ್ತದೆ: ಒಬ್ಬನ "ಪ್ರಾಣ"ವನ್ನು ಕಳಕೊಳ್ಳುವದೆಂದರೆ ಆತನ ಆತ್ಮವನ್ನು ನಿತ್ಯವಾಗಿ ಕಳಕೊಳ್ಳುವದು ಎಂದರ್ಥವಲ್ಲವೋ (ಮತ್ತಾಯ 16:26)? ಹೇಗೂ, "ಪ್ರಾಣ"ವು ಸಾಯುವ ಬಗ್ಗೆ ಒಬ್ಬನು ಓದಬಹುದು, ಆದರೆ "ಆತ್ಮ"ದ ಬಗ್ಗೆ ಅಲ್ಲ. ಶಿಲುಬೆಯ ಮೇಲೆ ಯೇಸು ತನ್ನ "ಆತ್ಮ"ವನ್ನು (*pneuma*) ತಂದೆಯ ಕೈಗೆ ಒಪ್ಪಿಸುತ್ತೇನೆಂದು ಹೇಳುತ್ತಾನೆ (ಲೂಕ 23:46), ಆದರೆ ಆತನ "ಪ್ರಾಣ"ವನ್ನು ಒಪ್ಪಿಸುತ್ತೇನೆಂದು ಹೇಳಲಿಲ್ಲ. ಕೆಲವು ಸಾರಿ "ಪ್ರಾಣವು" ಇಡೀ ವ್ಯಕ್ತಿಯನ್ನೊಳಗೊಂಡಿರುವಂತೆ ತೋರುತ್ತದೆ, ನಾವೆಯಲ್ಲಿ ರಕ್ಷಿಸಲ್ಪಟ್ಟ "ಎಂಟೇ ಜನರು" ಅಥವಾ "ಪ್ರಾಣಗಳು" (*psuchē* ಎಂಬದರಿಂದ ಬಂದದ್ದು) ಎಂಬದರ ಉಲ್ಲೇಖನದಲ್ಲಿರುವ ಪ್ರಕಾರ (1 ಪೇತ್ರ 3:20). ಇನ್ನು ಕೆಲವು ಸಂದರ್ಭಗಳಲ್ಲಿ, *psuchē* ಎಂಬುದು "ಆತ್ಮ" ಎಂಬ ಅರ್ಥವನ್ನೇ ಕೊಡುವಂತೆ ಕಾಣಿಸುತ್ತದೆ.

ಮನುಷ್ಯನು ಖಂಡಿತವಾಗಿಯೂ ಉನ್ನತವಾದ ಸ್ವಭಾವವನ್ನು ಹೊಂದಿದ್ದಾನೆ, ಅದು "ಆತ್ಮ" ಎಂಬ ಪದದಲ್ಲಿ ಉದ್ದೇಶಿಸಲ್ಪಟ್ಟಿರತಕ್ಕದ್ದು. ಆತನ ತಳಹದಿಯ ಸ್ವಭಾವವು ಆತನ "ಪ್ರಾಣ" (*psuchē*) ಆಗಿರಬಹುದಾಗಿದೆ, ಅದು ಅನೇಕ ಸಾರಿ ಒಬ್ಬನ ಪ್ರಾಣ ಜೀವ

ಎಂದರ್ಥವಾಗಿರುತ್ತದೆ. "ಆತ್ಮ" ಎಂದಿಗೂ ಮನುಷ್ಯನ ಕೆಳಮಟ್ಟದ ಜೀವವಾಗಿರುವದಿಲ್ಲ. ದೇವರ ವಾಕ್ಯವು ಕೀಲುಮಜ್ಜೆಗಳನ್ನು ವಿಭಾಗಿಸುವಂತೆಯೇ ಪ್ರಾಣವನ್ನು ಆತ್ಮದಿಂದ ವಿಭಾಗಿಸಬಲ್ಲದು.[56] ಇಬ್ರಿಯರಿಗೆ ಪತ್ರಿಕೆಯು ಕರೆಯುವಂತೆ, ನಾವು ಒಬ್ಬ ವ್ಯಕ್ತಿಯ "ದೇಹ," "ಪ್ರಾಣ," ಮತ್ತು "ಆತ್ಮ" ಎಂದು ಕರೆಯಬಹುದು (1 ಥೆಸಲೋನಿಕ 5:23). ಈ ಪದಗಳನ್ನು ನಾವು ಹೇಗೆ ನೋಡಿದರೂ ಸರಿಯೇ, ದೇವರು ನಮ್ಮ ಇಡೀ ವ್ಯಕ್ತಿಗಳನ್ನು ಮಹಿಮೆಯಲ್ಲಿ ರಕ್ಷಿಸುವನು – ನಿತ್ಯವಾಗಿ ರಕ್ಷಿಸಲ್ಪಡಲಿರುವ ನೂತನ ಆತ್ಮೀಕ ದೇಹಗಳು ಸಹ ಸೇರಿದಂತೆ – ಎಂಬುದನ್ನು ನಾವು ಬಲ್ಲೆವು. ಒಂದು ದಿನ ಆತನು ನಮ್ಮ ಹೃದಯಗಳಲ್ಲಿ ನೆಲೆಸಿರುವ "ಗುಪ್ತಕಾರ್ಯಗಳನ್ನು ಬೆಳಕಿಗೆ ತರುವನು" (1 ಕೊರಿಂಥ 4:5) ಮತ್ತು ಎಲ್ಲವುಗಳನ್ನು ನಮ್ಮ ಸ್ವಭಾವಕ್ಕೆ ಸ್ಪಷ್ಟಗೊಳಿಸುವನು. ದೇವರ ವಾಕ್ಯವು "ಮಾನವ ಜೀವಿಗಳಿಗೆ ಅಸಾಧ್ಯವಾಗಿರುವಂಥ ವಿಭಾಗಗಳನ್ನು ಮತ್ತಯ ವ್ಯತ್ಯಾಸಗಳನ್ನು" ಮಾಡಬಲ್ಲದು ಎಂದು George Wesley Buchanan ಹೇಳಿದ್ದು ನಿಶ್ಚಯವಾಗಿಯೂ ಸರಿಯಾಗಿಯೇ ಇರುತ್ತದೆ.[57]

1 ಥೆಸಲೋನಿಕ 5:23ನೇ ವಚನವು ಮನುಷ್ಯನಲ್ಲಿರುವ ಮೂರು ವಿಧವಾದ ಸ್ವಭಾವವನ್ನು ಸೂಚಿಸುತ್ತದೆ. ಹೇಗೂ, ಪ್ರಾಣ ಮತ್ತು ಆತ್ಮಗಳ ನಡುವೆ ವ್ಯತ್ಯಾಸವನ್ನು ಗುರುತಿಸುವ ಪ್ರಯತ್ನವು ಹುಟ್ಟುಹಾಕಲ್ಪಟ್ಟದ್ದಾಗಿ ತೋರುತ್ತದೆ. ಒಂದು ವಿಧವೆಂದರೆ ಇದಾಗಿದೆ: "ದೇಹವು ಪ್ರಾಣಕ್ಕೆ ನಿವಾಸವಾಗಿದ್ದು ಅದು ದೇಹಕ್ಕೆ ಜೀವ ತುಂಬುತ್ತದೆ, ಮತ್ತು ಪ್ರಾಣವು ದೇಹಕ್ಕೆ ಜೀವ ತುಂಬುವ ವೇಳೆ ಆತ್ಮವು ಪ್ರಾಣಕ್ಕೆ ಮಾರ್ಗದರ್ಶನ ನಿಡಬೇಕೆಂದು ದೇವರಿಂದ ಉದ್ದೇಶಿಸಲ್ಪಟ್ಟಿರುತ್ತದೆ."[58]

## ಅನ್ವಯಿಸುವಿಕೆ

### ಉಳಿದಿರುವ ವಿಶ್ರಾಂತಿ (4:1-11)

ದೇವರು ನಂಬಿಗಸ್ತರಿಗಾಗಿ ಇಟ್ಟಿರುವ ನಿತ್ಯವಾದ "ವಿಶ್ರಾಂತಿ"ಯಲ್ಲಿ ಪೂರ್ಣ ಭರವಸವನ್ನು ಹೊಂದಿರುವಾಗ ಶಾಂತ ಮನಸ್ಸು ನಮ್ಮದಾಗಬಲ್ಲದು. ನಮ್ಮ ಭಾವೋನ್ಮತ್ತ ಮತ್ತು ಗೊಂದಲಕ್ಕೀಡಾಗಿರುವ ಲೋಕವು ಅಂಥ ಶಾಂತಿಗಾಗಿರುವ ಅಗತ್ಯತೆಯನ್ನು ನಿಶ್ಚಯವಾಗಿಯೂ ಅರ್ಥಮಾಡಿಕೊಳ್ಳುತ್ತದೆ. ವಾರಕ್ಕೊಮ್ಮೆ ಕೆಲಸವನ್ನು ನಿಲ್ಲಿಸಬೇಕೆಂಬ ಆಜ್ಞೆಯಿರುವ ದಿನವಿಲ್ಲದೆಯೇ ಕ್ರೈಸ್ತರು ಒಂದು ಸಬ್ಬತ್ ವಿಶ್ರಾಂತಿಯನ್ನು ಹೊಂದಿದ್ದಾರೆ.[59]

ಹಳೆಯ ಒಡಂಬಡಿಕೆಯ ಯಜ್ಞವು ಕ್ರಿಸ್ತನ ಯಜ್ಞಕ್ಕೆ ಸಂಕೇತವಾಗಿದ್ದಂತೆಯೇ, ಹಳೆಯ ಒಡಂಬಡಿಕೆಯ ಸಬ್ಬತ್ ವಿಶ್ರಾಂತಿಯು ಹೊಸ ಒಡಂಬಡಿಕೆಯಡಿಯಲ್ಲಿ ಒದಗಿಸಲ್ಪಡುವ ವಿಶ್ರಾಂತಿಗೆ ಛಾಯೆಯಾಗಿತ್ತು. ನಮೂನೆಗಳು ಮತ್ತು ಛಾಯೆಗಳ ಕುರಿತ ಒಂದು ಪಾಠವು ಈ ಅಂಶದಿಂದ ಆರಂಭಗೊಳ್ಳುತ್ತದೆ. "ದೇವರು ತನ್ನ ಕೆಲಸಗಳನ್ನು ಮುಗಿಸಿ" ವಿಶ್ರಮಿಸಿಕೊಂಡ ಪ್ರಕಾರವೇ ನಂಬಿಗಸ್ತರು ತಮ್ಮ ಕೆಲಸಗಳನ್ನು ಮುಗಿಸಿ ವಿಶ್ರಮಿಸಿಕೊಳ್ಳುವ ಸಮಯವು ಬರಲಿದೆ (4:10). ನಮ್ಮ ವಿಶ್ರಾಂತಿಯು ಯೆಹೂದಿ ಸಬ್ಬತ್ ವಿಶ್ರಾಂತಿಗೆ ಸಂಬಂಧವನ್ನು ಹೊಂದಿರುವದು ಮಾತ್ರವೇ ಆಗಿರುವದಿಲ್ಲ, ಆದರೆ "ದೇವರ ಸ್ವಂತ ವಿರಾಮ"[60] ದೊಂದಿಗೆ ಸಹ ಸಂಬಂಧ ಹೊಂದಿರುತ್ತದೆ. ಹೇಗೂ, ನಿತ್ಯತ್ವವನ್ನು ಮಾಡುವದಕ್ಕೆ ಏನೂ ಇಲ್ಲದವರಾಗಿ, ಕೆಲಸವಿಲ್ಲದೆ ಕಳೆಯುವೆವೆಂಬ ಯೋಚನೆಯು ಪರಲೋಕದ ಕುರಿತು ಬೈಬಲ್ ದೃಷ್ಟಿಕೋನವಾಗಿರುವದಿಲ್ಲ. ನಾವು ನಿತ್ಯತ್ವದುದ್ದಕ್ಕೂ ಕೆಲಸದಲ್ಲಿ ನಿರತರಾಗಿರಬಹುದು, ಆದರೆ ಇನ್ನು ಮೇಲೆ ನಮಗೆ ಭಾರವಿರುವದಿಲ್ಲ. "ಕೆಲಸವನ್ನು ಪ್ರೀತಿಯ ನಿಮಿತ್ತವಾಗಿ

ಮಾಡುವದಾದರೆ, ಮಾಡಿ ಮುಗಿಸುವ ಕೆಲಸದಿಂದಾಗುವ ಆನಂದದ, ಕೈಕೆಲಸದ ಹೆಮ್ಮೆ, ಮತ್ತು ಅದರ ಸೇವೆಯನ್ನು ಪಡೆಯುವವರ ಹಿತದ ನಿಮಿತ್ತವಾಗಿ ಮಾಡುವದಾದರೆ ಅದೊಂದು ಶಾಪ ಆಗುವದಿಲ್ಲ. ಅಂಥ ಕೆಲಸವನ್ನು ಹೊಂದಿರದೆ ಇರುವದು ಜೀವನದ ನಿಜವಾದ ಶಾಪ ಆಗುತ್ತದೆ."[61]

**"ಭಯ ಪಡೋಣ" (4:1)**

ಭಯದ ಕುರಿತು ಶಾಸ್ತ್ರಗಳಲ್ಲಿ ವಿರೋಧಾಭಾಸದ ಉಪದೇಶವು ಸಿಕ್ಕುತ್ತದೆ. ನಾವು ಹೆದರಬಾರದು ಎಂದು ಯೇಸು ಹೇಳಿದನು (ಯೋಹಾನ 14:27), ಮತ್ತು ದೇವರು ನಮಗೆ "ಕೊಟ್ಟಿರುವ ಆತ್ಮವು ಹೇಡಿತನದ ಆತ್ಮವಲ್ಲ" ಎಂದು ಪೌಲನು ತಿಮೊಥೆಯನಿಗೆ ಬುದ್ಧಿವಾದ ಹೇಳುತ್ತಾನೆ (2 ತಿಮೊಥೆ 1:7). ಹಾಗಿದ್ದರೂ, ನಮಗೆ "ದೇವರಿಗೆ ಭಯಪಡಿರಿ" ಎಂದು (1 ಪೇತ್ರ 2:17; ಪ್ರಸಂಗಿ 5:7ರಿಂದ ಉಲ್ಲೇಖಿಸಲ್ಪಟ್ಟಿದ್ದು) ಮತ್ತು "ಮನೋಭೀತಿಯಿಂದ ನಡುಗುವವರಾಗಿ" ನಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಬೇಕೆಂದು ಹೇಳಲಾಗಿರುತ್ತದೆ (ಫಿಲಿಪ್ಪಿ 2:12). ಕೀರ್ತನೆಗಳುದ್ದಕ್ಕೂ, ದೇವರಿಗೆ ಭಯ ಪಡುವ ಕುರಿತು ಉಲ್ಲೇಖನಗಳನ್ನು ನೋಡುತ್ತೇವೆ. ಜ್ಞಾನೋಕ್ತಿ 9:10 "ಯೆಹೋವನ ಭಯವೇ ಜ್ಞಾನಕ್ಕೆ ಮೂಲ" ಎಂದು ಹೇಳುತ್ತದೆ. ಯೇಸುವು "ಆತ್ಮ ದೇಹ ಎರಡನ್ನೂ ಕೂಡ ನರಕದಲ್ಲಿ ಹಾಕಿ ನಾಶಮಾಡಬಲ್ಲಾತನಿಗೆ ಹೆದರಿರಿ" ಎಂದು ಹೇಳುತ್ತಾನೆ (ಮತ್ತಾಯ 10:28). ದೆವ್ವಗಳು ನಂಬುತ್ತವೆ ಮತ್ತು ಹೆದರಿ ನಡುಗುತ್ತವೆ (ಯಾಕೋಬ 2:19).

ನಾವು ಗಹನವಾದ, ಭಯಭಕ್ತಿಯಿಂದ ಮತ್ತು ಗೌರವದಿಂದ ದೇವರಿಗೆ ಭಯ ಪಡಬೇಕು. ಇಬ್ರಿಯ 4:1ರಲ್ಲಿ ದೇವರು ವಾಗ್ದಾನ ಮಾಡಿದ ವಿಶ್ರಾಂತಿಯನ್ನು ಹೊಂದದೆ ತಪ್ಪುವವರಾದೆಯೋ ಎಂದು ಭಯಪಡಿರಿ ಎಂದು ನಮಗೆ ಬುದ್ಧಿವಾದ ಹೇಳಲಾಗಿರುತ್ತದೆ. ಆದದರಿಂದ ಎಲ್ಲಾ ಭಯಗಳು ತಪ್ಪು ಆಗಿರುವದಕ್ಕೆ ಸಾಧ್ಯವಿಲ್ಲ. "ಭಯ ಪಡಿರಿ" ಎಂಬುದಕ್ಕೆ ಗ್ರೀಕ್ ಪದವು φοβέω (*phobeō*), ಇದು φόβος (*phobos*) ಎಂಬುದರಿಂದ ಬಂದದ್ದು, ಪ್ರಾಥಮಿಕ ಅದು "ಭಯ" ಎಂಬ ಅರ್ಥವನ್ನು ಹೊಂದಿದೆ, ಆದರೆ ಅದರಲ್ಲಿ ಗೌರವಪೂರ್ವ ಭಯವು ಸಹ ಸೇರಿರುತ್ತದೆ. ಖಂಡಿತವಾಗಿಯೂ, ಪೂರ್ಣ ಪ್ರೀತಿಯು ಹೆದರಿಕೆಯನ್ನು ಹೊರಡಿಸಿ ಬಿಡುತ್ತದೆ (1 ಯೋಹಾನ 4:18), ಆದರೆ ನಮ್ಮಲ್ಲಿ ಯಾರು *ಪೂರ್ಣ* ಪ್ರೀತಿಯನ್ನು ಹೊಂದಿದ್ದೇವೆ? ನಿರ್ಬಲರು, ಪರಿಪಕ್ವವಿಲ್ಲದವರು ಅಥವಾ ಕ್ರೈಸ್ತೀಯ *ಪೂರ್ಣ*ತೆಯನ್ನು ಹೊಂದದಿರುವವರು ಈಗಲೂ ಸ್ವಲ್ಪ ಭಯವನ್ನು ಹೊಂದಿರುವ ಅಗತ್ಯವಿರುತ್ತದೆ. ನಮ್ಮನ್ನು ನೆಟ್ಟನೆಯ ಮತ್ತು ಇಕ್ಕಟ್ಟಾದ ದಾರಿಯಲ್ಲಿ ಇರುವಂತೆ ಮಾಡುವದಕ್ಕೆ ಒಂದು ಭಯದ ಅಂಶವು ಅಗತ್ಯವಿರುತ್ತದೆ (ಮತ್ತಾಯ 7:14; KJV). ಹಿಂಜಾರುವ ಹಂತದಲ್ಲಿರುವವರಿಗೆ ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೀಗೆ ಹೇಳಿದನು, "ಜೀವಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿ ಬೀಳುವದು ಭಯಂಕರವಾದದ್ದು" (ಇಬ್ರಿಯ 10:31). 12:29ರಲ್ಲಿ ಆತನು "ಭಕ್ತಿಯಿಂದಲೂ ಭಯದಿಂದಲೂ" (εὐλάβεια, *eulabeia*), ಇರಬೇಕೆಂದು ಶಿಷ್ಯರನ್ನು ಬೇಡಿಕೊಳ್ಳುತ್ತಾನೆ, ಅದು ಗೌರವಪೂರ್ವಕ ಭಕ್ತಿ ಅಥವಾ ಭಯ ಎಂದರ್ಥವಾಗಿದೆ, ಆದರೆ ಅದು ಹೆದರಿ ನಡುವಿಕೆ ಎಂದು ಸಹ ಸೂಚಿಸುತ್ತದೆ. ನಾವು ಒಂದು ರೀತಿಯ "phobia" ಇಲ್ಲದೆ ದೇವರನ್ನು ಹಿಂಬಾಲಿಸುವದಕ್ಕೆ ಸಾಧ್ಯವಿಲ್ಲ, ಅದು "ಭಯ" ಎಂಬುದಕ್ಕಿರುವ ಗ್ರೀಕ್ ಪದವಾಗಿದೆ. ತಾವು ಪಶ್ಚಾತ್ತಾಪವಿಲ್ಲದ ಪಾಪಿಗಳಾಗಿ ದೇವರ ಕೈಗಳಲ್ಲಿ ಸಿಕ್ಕಿ ಬೀಳುವ ಕುರಿತು ಒಂದು ಭಯದ ಅಂಶವು ಇಲ್ಲವಾದಲ್ಲಿ ಅನೇಕ ಜನರು ದೇವರಿಗೆ ವಿಧೇಯರಾಗುವದಿಲ್ಲ ಎಂಬುದು ಒಂದು ವಾಸ್ತವಾಂಶವಾಗಿದೆ. ಅಂಥ ಉದ್ದೇಶದೊಂದಿಗೆ

ದೇವರ ಕಡೆಗೆ ತಿರುಗಿಕೊಳ್ಳುವದು ಅವರಲ್ಲಿ ದೀನ ಹೃದಯಗಳನ್ನು, ವಿಧೇಯರಾಗುವದಕ್ಕೆ ಮನಸ್ಸನ್ನು ಉಂಟು ಮಾಡುವದು, ಮತ್ತು ಕ್ರಮೇಣದಲ್ಲಿ ಅವರ ಹೃದಯಗಳಲ್ಲಿ ಭಯದ ಅಗತ್ಯತೆಯನ್ನು ಅಳಿಸಿ ಹಾಕುವಂತಾಗುವದೆಂದು ನಾವು ನಿರೀಕ್ಷಿಸುತ್ತೇವೆ.

**"ನಂಬದೆ ಹೋದ ಕಾರಣ" (4:2)**

ದೇವರ ದೃಷ್ಟಿಯಲ್ಲಿ ಭರವಸೆ ಅಥವಾ ಜೀವವುಳ್ಳ ನಂಬಿಕೆಯಾಗಿರಬೇಕೆಂದರೆ ನಂಬಿಕೆಯ ಜೊತೆಗೆ ವಿಧೇಯತೆಯನ್ನು ಸೇರಿಸಿಕೊಳ್ಳತಕ್ಕದ್ದು. ಇಸ್ರಾಯೇಲ್ಯರು ಐಗುಪ್ತ ದೇಶವನ್ನು ತೊರೆದು ಕಾನಾನ್ ದೇಶಕ್ಕೆ ಪ್ರಯಾಣ ಮಾಡುವ ಹೊತ್ತಿಗೆ ದೇವರ ಪರಾಕ್ರಮದ ಕೆಲಸಗಳನ್ನು ಮತ್ತು ಮಹಿಮೆಯನ್ನು ಕಂಡಿದ್ದರು. ಹೇಗೂ, ಬಲಿಷ್ಠರ (Nephilim) ಕುರಿತಾದ "ಕೆಟ್ಟ" ವರದಿಯಿಂದಾಗಿ ಅವರು ಅದರ ಗಡಿಯಲ್ಲಿಯೇ ನಿಂತು ಬಿಟ್ಟರು (ಅರಣ್ಯಕಾಂಡ 13; 14). ಬಲಿಷ್ಠರು ನಿಸ್ಸಂಶಯವಾಗಿ ಕುಳ್ಳರಾಗಿದ್ದ ಇಸ್ರಾಯೇಲ್ಯರಿಗಿಂತ ಆಕಾರದಲ್ಲಿ ಬೃಹತ್ ಗಾತ್ರದ ಜನರಾಗಿದ್ದರು, ಅವರು ತಿನ್ನುತ್ತಿದ್ದ ಆಹಾರವು ಐಗುಪ್ತದ ದಾಸರಾಗಿ ಬಹಳ ಕಡಿಮೆ ಪ್ರಮಾಣದಲ್ಲಿದ್ದಿರಬಹುದು. ವೈರಿಯ ಗಾತ್ರವು ಇಸ್ರಾಯೇಲ್ಯರ ಭಾವಗಳನ್ನು ಕುಗ್ಗಿಸಿ ಬಿಟ್ಟಿತ್ತು ಮತ್ತು ಜನರ ನಂಬಿಕೆಯನ್ನು ಹಾಳು ಮಾಡಿತ್ತು. ದೇವರೊಂದಿಗೆ ಇರುವಾಗ, ಗಾತ್ರವು ಮಹತ್ವವನ್ನೇ ಹೊಂದಿರುವದಿಲ್ಲ – ಕೇವಲ ನಂಬಿಕೆಯು ಮಹತ್ವವಾಗಿರುತ್ತದೆ.

ನಂಬಿಕೆಯು ವಿಧೇಯತೆಯ ಕೆಲಸಗಳಿಂದ ತೋರ್ಪಡಿಸಲ್ಪಡತಕ್ಕದ್ದು. ಇಲ್ಲವಾದರೆ, ಅದೊಂದು "ಜೀವವಿಲ್ಲ ನಂಬಿಕೆ" ಆಗುವದು (ಯಾಕೋಬ 2:17). ಹೇಗೂ, ನಂಬಿಕೆ ಸಹ ಒಂದು ಕೆಲಸವಾಗಿದೆ – ಮಾನವರು ಮಾಡಬೇಕೆಂಬುದಕ್ಕಾಗಿ ದೇವರು ನೇಮಿಸಿರುವ ಕೆಲಸವಾಗಿದೆ (ಯೋಹಾನ 6:28, 29). ಆತನು ಅದ್ಭುತಕರವಾಗಿ ನಂಬಿಕೆಯನ್ನು ನಮ್ಮ ಹೃದಯಗಳಲ್ಲಿ ನೇಡುವದಿಲ್ಲ; ಆದರೆ ಆತನು ತನ್ನ ವಾಕ್ಯದಲ್ಲಿ ಪುರಾವೆಯನ್ನು ಒದಗಿಸಿದ್ದು ಅದನ್ನು ಆಲಿಸಿ, ಕಿವಿಗೊಟ್ಟರೆ ಅದು ನಂಬಿಕೆಯನ್ನು ಉಂಟು ಮಾಡುತ್ತದೆ (ರೋಮಾ 10:17). ಆದದರಿಂದ, ನಮ್ಮ ರಕ್ಷಣೆಯನ್ನು ಸಂಪಾದಿಸಿಕೊಳ್ಳುವ ವಿಷಯದಲ್ಲಿ ಹೊರಗಿಡಲ್ಪಟ್ಟಿರುವ ಕೆಲಸಗಳು, ಎಫೆಸ 2:8, 9 ಮತ್ತು ರೋಮಾ 3:28ರಲ್ಲಿ ಹೇಳಲ್ಪಟ್ಟಿರುವ ಪ್ರಕಾರವಾಗಿ, "ಧರ್ಮಶಾಸ್ತ್ರದ ಕ್ರಿಯೆಗಳು" ಅಥವಾ ರಕ್ಷಣೆಯನ್ನು *ಸಂಪಾದಿಸಿ*ಕೊಳ್ಳಬೇಕೆಂದು ಪ್ರಯಾಸ ಪಡುವ ಕ್ರಿಯೆಗಳು. ಜೀವನದಲ್ಲಿ ನಮಗಿರುವ ಪರಿಪೂರ್ಣತೆಯ ಕೊರತೆಯ ಕಾರಣದಿಂದ ರಕ್ಷಣೆಯನ್ನು ಸಂಪಾದಿಸಿಕೊಳ್ಳುವದು ಅಸಾಧ್ಯವಾಗಿರುತ್ತದಾದ್ದರಿಂದ, ರಕ್ಷಣೆಯ ದಾರಿಯಾಗಿ ನಾವು ನಂಬಿಕೆಯ ಮೇಲೆ ಅವಲಂಭಿತರಾಗಬೇಕು – *ನಂಬಿಕೆ*ಯು ರಕ್ಷಣೆಯನ್ನು ಹೊಂದಿಕೊಳ್ಳುವದಕ್ಕೆ ಮಾಡಬೇಕೆಂದು ದೇವರು ನೇಮಿಸಿರುವ ಕೆಲಸ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು (ಯೋಹಾನ 6:29). ಮನುಷ್ಯನು ರಕ್ಷಣೆಯನ್ನು ಸಂಪಾದಿಸಿಕೊಳ್ಳಲು ಏನನ್ನೂ ಮಾಡುವ ದಿಲ್ಲವೆಂದಾದರೆ, ಪೇತ್ರನು ಏಕೆ ". . . ನಿಮ್ಮನ್ನು ರಕ್ಷಿಸಿಕೊಳ್ಳಿರಿ" ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 2:40; KJV)? ಪೌಲನು ಏಕೆ ಕ್ರೈಸ್ತರಿಗೆ "ಮನೋಭೀತಿಯಿಂದ ನಡುಗುವವರಾಗಿ ನಿಮ್ಮ ರಕ್ಷಣೆಯನ್ನು ಕಾಪಾಡಿಕೊಳ್ಳಿರಿ" ಎಂದು ಸಲಹೆ ಮಾಡಿದನು (ಫಿಲಿಪ್ಪಿ 2:12)? ಖಂಡಿತವಾಗಿಯೂ, ನಾವು ದೇವರಿಗೆ ವಿಧೇಯರಾಗುವಾಗ, ತಂದೆಯು ನಮ್ಮ ಮೂಲಕವಾಗಿ ಕಾರ್ಯಸಾಧಿಸುವವನಾಗಿರುತ್ತಾನೆ – ಆದರೆ ನಮ್ಮ ವೈಯಕ್ತಿಕ ಕಾರ್ಯಪ್ರವೃತ್ತತೆ ಅಥವಾ ವಿಧೇಯರಾಗುವದಕ್ಕೆ ಮನಸ್ಸಿಲ್ಲದಿರುವಿಕೆಯನ್ನು ಮೀರಿ ಯಾವದೇ ಒತ್ತಾಯದಿಂದ ಮಾಡುವದಿಲ್ಲ.

ಲೌಕಿಕ ಜನರು ಅನೇಕ ಸಾರಿ ತಮ್ಮ ಆತ್ಮವು ಇರುವದೆಂದು ಹಾಗೂ ಅದರ

ಅಗತ್ಯತೆಗಳೇನೆಂದು ಗುರುತಿಸಿದೆಯೇ, ತಮ್ಮ ಮನಸ್ಸುಗಳನ್ನು ಭೌತಿಕ ಕಸದಿಂದ ತುಂಬಿಸಿಕೊಳ್ಳುತ್ತಾರೆ. ಹಲವಾರು ವರ್ಷಗಳ ಹಿಂದೆ, ಅಸ್ಟ್ರೇಲಿಯಾದ ಜನವಸತಿಯಿಲ್ಲದ ಹಿನ್ನಾಡಿನಲ್ಲಿ ಮೂರು ಶವಗಳು ಸಿಕ್ಕವು. ಅವರು ಹಸಿವೆಯಿಂದ ಬಳಲಿ ಸತ್ತಿದ್ದರು, ಆದರೆ ಅವರ ಹೊಟ್ಟೆಗಳು ತುಂಬಿದವುಗಳಾಗಿದ್ದವು. ಅವರು ಯಾವದೇ ಆಹಾರ ಮೌಲ್ಯವೇ ಇಲ್ಲದ ಗಿಡವೊಂದನ್ನು ಸೇವಿಸಿದ್ದರು. ಮಾನವರು ಅಮೂಲ್ಯವೆಂದು ಕೂಡಿಸಿಟ್ಟುಕೊಳ್ಳುವ ಅಲ್ಪ ಕಾರ್ಯಗಳು – ಲೌಕಿಕ ಯಶಸ್ಸು, ಶೈಕ್ಷಣಿಕ ಸಾಧನೆ, ಮತ್ತು ಐಶ್ವರ್ಯಗಳು – ಆತ್ಮಕ್ಕೆ ಊಣ ಬಡಿಸುವದಕ್ಕೆ ಅಯೋಗ್ಯವಾಗಿವೆ. ಸುವಾರ್ತೆಯನ್ನು ಕೇಳಿದವರು ಪಾಪದಲ್ಲಿ ಸಾಯುವಾಗ, ಅವರು ಸಹ ಬೈಬಲ್‌ಗೆ ಅನುಮತಿಯಿಲ್ಲದ ಅನ್ಯದೇಶಗಳಲ್ಲಿ ಹುಟ್ಟಿರಬಹುದಾಗಿದೆ.

## ಸೃಷ್ಟಿಯ ದಿನಗಳು (4:3, 4)

ಸೃಷ್ಟಿಯ ಒಂದೊಂದು ದಿನವು ಒಂದು ಸಾವಿರ ವರ್ಷಗಳಿಗೆ ಸಮವಾಗಿರುತ್ತದೆಂಬ ಮತ್ತು ಲೋಕವು ಏಳು ಸಾವಿರ ವರ್ಷಗಳ ನಂತರ ಅಂತ್ಯಗೊಳ್ಳುವದೆಂಬ ಅಭಿಪ್ರಾಯವನ್ನು ಕೆಲವರು ಬೆಂಬಲಿಸುತ್ತಾರೆ. ಈ ಯೋಚನೆಯು ಸಹಸ್ರವರ್ಷಾಡಳಿತಪೂರ್ವ ಅಭಿಪ್ರಾಯದ ವ್ಯವಸ್ಥೆಯ ಭಾಗವಾಗಿರುತ್ತದೆ, ಅದಕ್ಕೆ ಶಾಸ್ತ್ರಗಳಲ್ಲಿ ಯಾವದೇ ಆಧಾರವು ಇರುವದಿಲ್ಲ. ಅದು 2 ಪೇತ್ರ 3:8ರಿಂದ ಬೆಂಬಲಿಸಲ್ಪಟ್ಟದ್ದೆಂದು ಊಹಿಸಿಕೊಳ್ಳಲಾಗುತ್ತದೆ: "ಕರ್ತನ ಎಣಿಕೆಯಲ್ಲಿ ಒಂದು ದಿನವು ಸಾವಿರ ವರುಷಗಳಂತೆಯೂ ಸಾವಿರ ವರುಷಗಳು ಒಂದು ದಿನದಂತೆಯೂ ಅವೆ." ದೇವರ ಎಣಿಕೆಯಲ್ಲಿ ಒಂದು ದಿನವು ಅಕ್ಷರಶಃ ಒಂದು ಸಾವಿರ ವರುಷಗಳೆಂಬದು ಪೇತ್ರನ ತಾತ್ಪರ್ಯವಾಗಿದ್ದಲ್ಲಿ, ಒಂದು ಸಾವಿರ ವರುಷಗಳು ಅಕ್ಷರಶಃ ಒಂದು ದಿನವಾಗಿರಬೇಕಷ್ಟೆ, ಅದು ಆತನ ಅರ್ಥವಾಗಿರಲಿಕ್ಕೆ ಸಾಧ್ಯವಿಲ್ಲ. ಸಾವಿರ ವರ್ಷಗಳು ಮೊದಲು ಗತಿಸಿ ಹೋದಾಗ್ಯೂ, ದೇವರು ತಕ್ಕ ಕಾಲದಲ್ಲಿ ತನ್ನ ವಾಗ್ದಾನಗಳನ್ನು ನೆವೇರಿಸುವನು ಎಂಬುದು ಪೇತ್ರನ ಅಭಿಪ್ರಾಯವಾಗಿತ್ತು. ನಾವು ಸ್ವಲ್ಪ ಕಾಲವಾದ ಬಳಿಕ ವಾಗ್ದಾನಗಳನ್ನು ಮರೆಯುವ ಪ್ರವೃತ್ತಿ ಹೊಂದಿರುತ್ತೇವೆ, ಆದರೆ ದೇವರು ಮರೆಯುವದಿಲ್ಲ. "ಒಂದುದಿನ – ಸಾವಿರ ವರ್ಷ ವಾದ" ಯೋಚನೆಯು ಎರಡನೆಯ ಶತಮಾನದಲ್ಲಿ ಅಸ್ತಿತ್ವದಲ್ಲಿತ್ತು; ಅದು *Epistle of Barnabas*ದಲ್ಲಿ (15:4, 5) ಮೊದಲ ಬಾರಿಗೆ ಮುಂದಿಡಲ್ಪಟ್ಟಿತು ಮತ್ತು ಅಂದಿನಿಂದ ಅದು ಸ್ವಲ್ಪ ವಿರಾಮ ಕೊಟ್ಟು ಕೊಟ್ಟು ಪ್ರಚಾರ ಮಾಡಲ್ಪಡುತ್ತಲೇ ಬಂದಿರುತ್ತದೆ.[62] ದೇವರು ಲೋಕವನ್ನು ಸೃಷ್ಟಿಸುವ ಕೆಲಸವನ್ನು ಪೂರ್ತಿ ಮಾಡಿದ ಕೂಡಲೆ ಕೆಲಸ ಮಾಡುವದನ್ನು ನಿಲ್ಲಿಸಿ ಬಿಡಲಿಲ್ಲ; ಆತನು ಸೃಷ್ಟಿಸುವ ಕಾರ್ಯವನ್ನು ನಿಲ್ಲಿಸಿ ವಿಶ್ರಮಿಸಿದನಷ್ಟೆ.

## ಈಹೊತ್ತೇ ದೇವರ ದಿನ (4:7)

ದೇವರು ಪ್ರತಿ "ಈ ದಿನ [ಹೊತ್ತು] ವನ್ನು" ನಿಯಂತ್ರಿಸುತ್ತಾನೆ, ಮತ್ತು ಆತನು ನಿಮ್ಮ ನಾಳೆಯನ್ನು ಸಹ ನಿಯಂತ್ರಿಸುವನು; ಆತನು ಪ್ರತಿ ದಿನವನ್ನು ಅಂತಿಮವಾಗಿ ನಿಮ್ಮ ಹಿತಕ್ಕೋಸ್ಕರ ಆಶೀರ್ವದಿಸುವನು (ರೋಮಾ 8:28). ಆತನು ಈ ದಿನ ಮತ್ತು ನಾಳೆಯನ್ನು ಉತ್ಸಾಹಕರವಾಗಿಯೂ ಅದ್ಭುತಕರವಾಗಿಯೂ ಮಾಡಬಲ್ಲನು. ಈ ಅಭಿಪ್ರಾಯವು ಉಂಟು ಮಾಡತಕ್ಕ ಆಶಾವಾದವನ್ನು ನಾವು ಕಾಪಾಡಿಕೊಂಡು ಹೋಗತಕ್ಕದ್ದು. ಒಬ್ಬ ಚಿಕ್ಕ ಬಾಲಕಿಯು ಹಳೆಯ ಒಡಂಬಡಿಕೆಯಿಂದ ಕೆಲವೊಂದು ಕಥೆಗಳನ್ನು ಕೇಳಿಸಿಕೊಂಡು ಹೀಗೆ ಹೇಳಿಕೆ ನೀಡಿದಳು, "ಹಾಗಾದರೆ ದೇವರು ಬಹಳ ರೋಮಾಂಚಕಾರಿನ ಆಗಿದ್ದನೆಂದಾಯಿತು."[63] ನಾವು ಸಭೆಯ ಅತ್ಯಂತ ಶ್ರೇಷ್ಠ ದಿನಗಳು ನಮ್ಮ ಹಿಂದಿರುತ್ತವೆನೋ ಎಂಬಂತೆ ನಾವು ಯಾವಾಗಲೂ

ಹಿಂದಿನದನ್ನು ಜ್ಞಾಪಿಸಿಕೊಳ್ಳುವ ಪ್ರವೃತ್ತಿ ಹೊಂದಿದ್ದೇವೆ. 1950 ಮತ್ತು 1960ರ ಹೊತ್ತಿನಲ್ಲಿ, ಕರ್ತನ ಸಭೆಯು ಅಮೆರಿಕದಲ್ಲಿ ಅತ್ಯಂದ ದೊಡ್ಡ ಬೆಳವಣಿಗೆಯನ್ನು ಅನುಭವಿಸಿತು – ಆದರೆ ಅದು ಹೆಚ್ಚು ಕಡಿಮೆ ಐವತ್ತು ವರ್ಷಗಳಷ್ಟು ಕಡಿಮೆ ಬೆಳವಣಿಯ ದಿನಗಳನ್ನು ದಾಟಿಕೊಂಡು ಬಂದಿತ್ತು. ಈಗ, ಇಪ್ಪತ್ತೊಂದನೆಯ ಶತಮಾನದ ಆರಂಭದ ವೇಳೆಯಲ್ಲಿ, ದೇವರ ರಾಜ್ಯದಲ್ಲಿ ನಾವು ಪುನಃ ಅಮೋಘವಾದ ಬೆಳವಣಿಗೆಯನ್ನು ಕಾಣಬಹುದಾಗಿದೆ.

ಧರ್ಮದ ವಿಷಯವಾಗಿ ಲೋಕವು ಒಂದು ಗೊಂದಲದ ಸ್ಥಿತಿಯಲ್ಲಿರುತ್ತದೆ, ಮತ್ತು ಜನರು ಸರಳವಾದ ಬೈಬಲ್ ಸತ್ಯಕ್ಕಾಗಿ ಮೊರೆಯಿಡುತ್ತಿದ್ದಾರೆ. ಹೇಗೂ, ಅನೇಕರು ಅತಿಯಾಶೆಯುಳ್ಳವರಾಗಿ ಬೈಬಲ್‌ನ್ನು ಹೊರತು ಪಡಿಸಿ ಬೇರೆ ಎಲ್ಲಾ ಕಡೆಗಳಲ್ಲಿಯೂ ಉತ್ತರಗಳನ್ನು ಹುಡುಕುತ್ತಾರೆ. ಇತ್ತೀಚಿಗೆ ನನ್ನ ಕಾಲೇಜಿನಲ್ಲಿ ಧಾರ್ಮಿಕ ಸಿದ್ಧಾಂತಗಳ ಮೇಲಿನ ತರಗತಿಯಲ್ಲಿ, ಈಗಿನ ಯುವಜನರು ಪಂಗಡದ ಜಗತ್ತಿನಲ್ಲಿ ಸಿದ್ಧಾಂತಗಳು ಪ್ರಚಾರ ಮಾಡಲ್ಪಡುವದನ್ನು ಕುರಿತು ಯುವ ಜನರು ಎಷ್ಟು ಅರಿತವರಾಗಿದ್ದಾರೆಂಬುದನ್ನು ಕಂಡುಕೊಂಡದ್ದಕ್ಕೆ ನಾನು ಆಶ್ಚರ್ಯಗೊಳ್ಳಬಾರದಿತ್ತು. ನನ್ನ ತರಗತಿಯು ಧಾರ್ಮಿಕ ಗುಂಪೊಂದರ ಉಪದೇಶದ ಬಗ್ಗೆ ಚರ್ಚೆ ಮಾಡುತ್ತಿರುವ ವೇಳೆ, ಒಬ್ಬ ವಿದ್ಯಾರ್ಥಿಯು ಹೀಗೆ ಹೇಳಿದನು, “ಅವರು ಹೇಗೆ ಅದನ್ನು ನಂಬುವದಕ್ಕೆ ಸಾಧ್ಯ?” ಉತ್ತರವೇನೆಂದರೆ ಅವರು ಅದರಲ್ಲಿ ಬೆಳೆದು ಬಂದಿರುತ್ತಾರೆ; ಬಾಲ್ಯದಿಂದಲೇ ಅದನ್ನು ನಂಬುವಂತೆ ಅವರನ್ನು ತರಬೇತುಗೊಳಿಸಲಾಗಿರುತ್ತದೆ. ದೇವರ ಕುರಿತ ಸುಳ್ಳಾದ ಅಭಿಪ್ರಾಯವನ್ನು ನಂಬುವಂತೆ ಅಷ್ಟೊಂದು ಜನರು ಗೆದ್ದುಕೊಳ್ಳಲ್ಪಡುವದಕ್ಕೆ ಸಾದ್ಯವಾದರೆ, ನಮ್ಮಲ್ಲಿ ಹೆಚ್ಚು ಸುವಾರ್ತಿಕ ವೈರಾಗ್ಯವುಳ್ಳ ಭಾವನೆಯನ್ನು ಬೆಳೆಸಿಕೊಳ್ಳುವ ಮೂಲಕ ಸರಳವಾದ ಹೊಸ ಒಡಂಬಡಿಕೆಯ ಕ್ರೈಸ್ತತ್ವದೆಡೆಗೆ ಜನರನ್ನು ಗೆಲ್ಲುವದು ನಿಶ್ಚಯವಾಗಿಯೂ ಸಾಧ್ಯವಿರುತ್ತದೆ. ನಾವು ಜನರಿಗೆ ಸತ್ಯವನ್ನು ತೋರಿಸಿ ಕೊಡುವಾಗ ಅವರನ್ನು ಪರಿವರ್ತಿಸುವದು ಸುಲಭವಾಗಿರುತ್ತದೆ.

ನಾವು ಏನಾದರೂ ಶ್ರೇಷ್ಠವಾದದ್ದನ್ನು ಸಾಧಿಸುವದಕ್ಕೆ ಇತಿಹಾಸದಲ್ಲಿ ಬಹಳ ತಡವಾಗಿ ಬಂದು ತಲುಪಿರುತ್ತೇವೆ ಅಥವಾ ಸಭೆಯ ಅಮೋಘವಾದ ಬೆಳವಣಿಗೆಯನ್ನು ಸಾಧಿಸುವದಕ್ಕೆ ಕರ್ತನು ನಿಮ್ಮ ಮೂಲಕ ಮತ್ತು ಬೇರೆಯವರ ಮೂಲಕ ಕಾರ್ಯಮಾಡುವ ತುದಿಯಂಚಿನಲ್ಲಿರುವದಿಲ್ಲ ಎಂದು ಎಂದಿಗೂ ಯೋಚಿಸಬಾರದು. ಇದು ಈಗಲೂ ದೇವರ “ಈಹೊತ್ತು” ಆಗಿರುತ್ತದೆ!

### “ನಿಮ್ಮ ಹೃದಯಗಳನ್ನು ಕಠಿಣಮಾಡಿಕೊಳ್ಳಬೇಡಿರಿ” (4:7)

ದಿನಾಲೂ ಒಂದು ತೆರೆದ ಮನಸ್ಸಿನಿಂದ ದೇವರ ವಾಕ್ಯವನ್ನು ಕೇಳಿಸಿಕೊಳ್ಳಿರಿ, ಮತ್ತು ನಿಮ್ಮ ಹೃದಯವು ಎಂದಿಗೂ ಕಠಿಣಗೊಳ್ಳುವದಿಲ್ಲ.

> ಬದಲಾವಣೆಯನ್ನು ಮಾಡಬೇಕೆಂಬ ದೇವರ ಬೇಡಿಕೊಳ್ಳುವಿಕೆಗೆ ಪ್ರತಿಯೊಂದು ಭುಜವನ್ನು ಕೊಸರಿಕೊಳ್ಳುವಿಕೆ, “ನಾನು ಮಾಡಬೇಕು ಎಂದು ಬಲ್ಲೆನು, ಆದರೆ ನನಗೆ ಚಿಂತೆಯಿಲ್ಲ” ಎಂದು ಹೇಳುವ ಪ್ರತಿಯೊಂದು ಅಸಡ್ಡೆಯ ತಲೆಯಾಡಿಸುವಿಕೆ, ಆಂತರ್ಯದ ಸಮರ್ಪಣೆಯಿಲ್ಲದೆ ಬಾಹ್ಯ ಅನುಸರಿಸುವಿಕೆಯ ಪ್ರತಿಯೊಂದು ಪ್ರಯತ್ನವು ಹೃದಯದ ಕಠಿಣತೆಯನ್ನು ಉಂಟು ಮಾಡುತ್ತದೆ, ಅದು ಪಶ್ಚಾತ್ತಾಪ ಪಡುವದನ್ನು ಹೆಚ್ಚೆಚ್ಚು ಕಠಿಣಗೊಳಿಸುತ್ತಾ ಹೋಗುತ್ತದೆ.[64]

ಜೀವಿತವು ಇರುವಷ್ಟು ಕಾಲ, ಅದು ನಮ್ಮ “ಈಹೊತ್ತು” ಆಗಿರುತ್ತದೆ. ಪಶ್ಚಾತ್ತಾಪ ಪಡುವ ಮೂಲಕ, ನಮ್ಮ ಹೃದಯಗಳಲ್ಲಿ ಕಠಿಣವಾಗುವದರ ಆರಂಭವನ್ನು ಜಯಿಸಬಲ್ಲವರಾಗುತ್ತೇವೆ.

## ಆ ವಿಶ್ರಾಂತಿಯನ್ನು ಪ್ರವೇಶಿಸುವದಕ್ಕೆ ಪ್ರಯಾಸ ಪಡಿರಿ (4:11)

ರಕ್ಷಣೆಯು "ಕ್ರಿಯೆಗಳಿಂದ ಸಂಪಾದಿಸಿಕೊಳ್ಳಲ್ಪಡಬಲ್ಲದು" ಎಂಬುದರ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸಿದ ಬಳಿಕ, Raymond Brownನು ಮುಂದುವರೆದು ಸುವಾರ್ತೆಗೆ ವಿಧೇಯರಾದ ಬಳಿಕ ತಾವು ಎರಡನೆಯ "ಶುದ್ಧೀಕರಣ"ವನ್ನು ಸಂಪಾದಿಸಿಕೊಳ್ಳಬೇಕೆಂದು ಯೋಚಿಸುವವರನ್ನು ಖಂಡಿಸುತ್ತಾನೆ. ಆತನು ವಾದ ಮಾಡಿದ್ದೇನೆಂದರೆ, "ಶುದ್ಧೀಕರಿಸಲ್ಪಟ್ಟ ಕ್ರೈಸ್ತನಾಗಬೇಕೆಂದರೆ, ಒಬ್ಬನು ಪ್ರತಿಯೊಂದು ನರವನ್ನು ವಿಶ್ರಮಿಸಿ ನೈತಿಕ ಹೋರಾಟದ ಯಾವದೇ ಯೋಚನೆಯನ್ನು ಬಿಟ್ಟು ಬಿಡಬೇಕೆಂಬ ಸಲಹೆಯೊಂದಿಗೆ ಇರುವ 'ಕೈ ಬಿಟ್ಟು ಬಿಡು ಮತ್ತು ದೇವರಿಗೆ ಅವಕಾಶ ಕೊಡು' ಎಂಬ ಭಾವನೆಯು ಅತಿಯಾದ ಆಸ್ವಾದನೆಯನ್ನು ಕೊಡುವಂಥದ್ದು."[65] ಅಂತಹ ಕಲ್ಪನೆಯು ನಮ್ಮ ರಕ್ಷಣೆಯನ್ನು ಸಂಪಾದಿಸಿಕೊಳ್ಳಲು ಮತ್ತು ಕಾಪಾಡಿಕೊಳ್ಳಲು ನಾವು ಹೋರಾಟವನ್ನು ಪಡಬೇಕಿಲ್ಲವೆಂದು ಸಲಹೆ ಮಾಡುವದಾಗಿದೆ, ಯಾಕೆಂದರೆ ಅದು ರಕ್ಷಣೆಯನ್ನು ಹೊಂದಿಕೊಳ್ಳಲು "ಕ್ರಿಯೆ" ಮಾಡಿದ ಹಾಗಾಗುವದು. ನಮ್ಮ ಸಮಸ್ಯೆಗಳನ್ನು ಮಾನಸಿಕವಾಗಿ ದೇವರಿಗೆ ಬಿಟ್ಟು ಕೊಡುವ ಮೂಲಕ ಮಾತ್ರವೇ ನಮ್ಮ ರಕ್ಷಣೆ ಹಾಗೂ ಶುದ್ಧೀಕರಣಗಳು ಸಾಧಿಸಿಕೊಳ್ಳಲ್ಪಡುತ್ತವೆಂದು ನಾವು ಊಹಿಸಿಕೊಳ್ಳುವದಾದರೆ, ನಾವು ಇದರಲ್ಲಿ ಪ್ರಯಾಸ ಪಡುವ ಸಾಧ್ಯತೆಯು ಇರುವದಿಲ್ಲ ಮತ್ತು "ನೈತಿಕ ಹೋರಾಟ"ವನ್ನು ಕೈ ಬಿಟ್ಟು ಬಿಡಬಹುದಾಗಿದೆ. ಈ ವಾಕ್ಯಭಾಗದಿಂದ, ಒಂದು "ನೈತಿಕ ಹೋರಾಟ"ವು ಅವಶ್ಯಕವೆಂಬುದು ಸ್ಪಷ್ಟವಾಗತಕ್ಕದ್ದು.

ಒಬ್ಬನು ಪ್ರತಿಯೊಬ್ಬ ವ್ಯಕ್ತಿಯಿಂದಾಗುವ ಹೋರಾಟವನ್ನು ಗುರುತಿಸುವಾಗ ಅಲ್ಲೊಂದು ಅಸಾಮಂಜಸ್ಯತೆಯು ಇರುತ್ತದೆ ಆದರೆ ಹಾಗಿದ್ದರೂ "ದೇವರಿಗೆ ಅದನ್ನು ಮಾಡಲು ಬಿಡು!" ದೈವಶಾಸ್ತ್ರದ ಪರವಾಗಿ ವಾದಿಸುತ್ತಾನೆ. ಕೆಲವು ದೈವಶಾಸ್ತ್ರಜ್ಞರು ಆ ಎರಡು ಭಿನ್ನವಿಭಿನ್ನವಾದ ಭಾವನೆಗಳ ನಡುವೆ ಸಾಮರಸ್ಯವನ್ನು ಮೂಡಿಸಬಹುದೆಂದು ಯೋಚಿಸುತ್ತಾರೆ, ಆದರೆ ಅದಕ್ಕೆ ಒಂದು ರೀತಿಯಲ್ಲಿ ಇಂಗ್ಲೆಂಡಿನಲ್ಲಿ ಒಂದು ಹಳೇ ಇಸ್ತ್ರೀ ಅಂಗಡಿಯ ಮೇಲಿನ ಜಾಹಿರಾತಿನಂತಹ ಕರಕುಶಲತೆಯ ಅಗತ್ಯವಿರುತ್ತದೆ: "ಇಲ್ಲಿ ಎಲ್ಲಾ ರೀತಿಯ ಅಭಿರುಚಿಗಳ ತಿರುವುಗಳನ್ನು ಮತ್ತು ತಿರುಚುವಿಕೆಗಳನ್ನು ಮಾಡಲಾಗುವದು!"

ಯಾಕೋಬನು "ಅಂಥ ನಂಬಿಕೆಯು ಅವನನ್ನು ರಕ್ಷಿಸುವದೋ?" ಎಂದು ಕೇಳುವಾಗ, ಆತನು ನಂಬಿಕೆಯಿಂದ ಮಾಡಿದ ಕ್ರಿಯೆಗಳ ಅವಶ್ಯಕತೆಯನ್ನು ಘೋಷಿಸುವವನಾಗಿದ್ದನು (ಯಾಕೋಬ 2:14). ಆತನು ಕೇವಲ ಒಬ್ಬನ ನಂಬಿಕೆಯನ್ನು ಜೊತೆಯ ಮನುಷ್ಯನಿಗೆ ತೋರಿಸುವದರ ಬಗ್ಗೆ ಮಾತ್ರವೇ ಅಲ್ಲ, ಆದರೆ ನಿಜವಾಗಿ ರಕ್ಷಣೆಯನ್ನು ಉಂಟು ಮಾಡುವ ನಂಬಿಕೆಯ ಬಗ್ಗೆ ಮಾತಾಡುತ್ತಿದ್ದಾನೆ. ನಾವು ಯಾಕೋಬನ ಘೋಷಣೆಯನ್ನು ನಿರಾಕರಿಸುವದಕ್ಕೆ ಸಾಧ್ಯವಿಲ್ಲ. ನಿಶ್ಚಯವಾಗಿಯೂ, ದೇವರು ರಕ್ಷಣೆ ಮತ್ತು ಶುದ್ಧೀಕರಣದ ದಾರಿಯನ್ನು ಒದಗಿಸುತ್ತಾನೆ, ಆದರೆ ಎಲ್ಲಾ ಕೆಲಸವನ್ನು ನಮಗೋಸ್ಕರ ಆತನೇ ಮಾಡುವದಿಲ್ಲ. ಪೌಲನು ಕೊರಿಂಥದವರಿಗೆ ಹೀಗೆ ಹೇಳಿದನು, "ಪ್ರಿಯರೇ, ಈ ವಾಗ್ದಾನಗಳು ನಮಗಿರುವದರಿಂದ ನಾವು ಶರೀರಾತ್ಮಗಳ ಕಲ್ಮಶವನ್ನು ತೊಲಗಿಸಿ ನಮ್ಮನ್ನು ಶುಚಿಮಾಡಿಕೊಂಡು ದೇವರ ಭಯದಿಂದ ಕೂಡಿದವರಾಗಿ *ಪವಿತ್ರತ್ವವನ್ನು* ಸಿದ್ಧಿಗೆ ತರುವದಕ್ಕೆ ಪ್ರಯತ್ನಿಸೋಣ" (2 ಕೊರಿಂಥ 7:1). ನಮ್ಮ ವಿಧೇಯತೆಯ ಮೂಲಕ ನಮ್ಮನ್ನು ಪರಿಶುದ್ಧಗೊಳಿಸುವದರಲ್ಲಿ ದೇವರು ಕಾರ್ಯ ಮಾಡುತ್ತಾನೆ, ಮತ್ತು ಅದನ್ನು ಹೊರತಾಗಿಸಿ ಮಾಡುವದಿಲ್ಲ (ಫಿಲಿಪ್ಪಿ 2:12, 13).

ಪೌಲನ ಮೂಲಕ ಮಾಡಿದಂತೆ ದೇವರು ನಮ್ಮ ಮೂಲಕ ಕಾರ್ಯ ಮಾಡುವದನ್ನು ನಾವು

ಎದುರುನೋಡತಕ್ಕದ್ದು, ಪೌಲನು ಹೀಗೆ ಹೇಳಿದನು, "ನನ್ನನ್ನು ಬಲಪಡಿಸುವಾತನಲ್ಲಿದ್ದು ಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ" (ಫಿಲಿಪ್ಪಿ 4:13). ನಾವು ನಿಜವಾಗಿಯೂ ದೇವರೊಂದಿಗೆ "ಜೊತೆಯ ಕೆಲಸದವರು" ಆಗಿರಬಲ್ಲೆವು (1 ಕೊರಿಂಥ 3:9). ಇದೊಂದು ಅದ್ಭುತವಾದ ಯೋಚನೆಯಾಗಿದೆ: ನಾವು ಒದಗಿರಬಹುದಾದ "ದೀನ ಸೇವೆ" ಏನೇ ಆಗಿದ್ದರೂ ಸರಿಯೇ, ನಾವು ದೇವರ ಸಂಗಡ ಕೆಲಸ ಮಾಡುತ್ತಿದ್ದೇವೆಂದು ಬಲ್ಲೆವು! ಮಾನವ ಪ್ರಯಾಸವು ಅವಶ್ಯಕ, ಆದರೆ ನಾವು ದೇವರ ಸಂಗಡ ಕೆಲಸ ಮಾಡುವಾಗ ಸಂತೋಷಗೊಳ್ಳಬಹುದು!

ಇಸ್ರಾಯೇಲ್ಯರು ಪಡೆದುಕೊಂಡ "ವಿಶ್ರಾಂತಿ"ಯು ಕಾನಾನ್ ದೇಶವಾಗಿದೆ ಆದರೆ ಅದು ಕ್ರೈಸ್ತರು ಪಡೆದುಕೊಳ್ಳಲಿರುವದರ ಒಂದು *ಛಾಯೆ*ಯಾಗಿರುತ್ತದೆ. ವಿಶೇಷ ಆಹಾರಗಳನ್ನು ಮಾತ್ರವೇ ತಿನ್ನುವದು ಅಥವಾ ಸಬ್ಬತ್ ದಿನವನ್ನು ಪಾಲಿಸುವದು ಸೇರಿದಂತೆ ಹಳೆಯ ಧರ್ಮಶಾಸ್ತ್ರದ ಧಾರ್ಮಿಕ ವಿಧಿಗಳೆಲ್ಲವೂ ಕ್ರಿಸ್ತನಲ್ಲಿ ಸಿಕ್ಕುವ ನಿಜಸ್ವರೂಪದ ಛಾಯೆಗಳಾಗಿದ್ದವೆಂಬ ಭಾವನೆಯನ್ನು ಕೊಲೊಸ್ಸೆ 2:16, 17 ವಚನಗಳು ಮುಂದಿಡುತ್ತವೆ. ವಾಗ್ದಾನ ದೇಶದಲ್ಲಿನ ಒಂದು ವಿಶ್ರಾಂತಿಯಲ್ಲಿ ಇಸ್ರಾಯೇಲ್ಯರ ಶಾಂತಿಯು ಅಡಕವಾಗಿತ್ತು: ಉತ್ತಮ ಫಸಲುಗಳು ಮತ್ತು ಆಕ್ರಮಣ ಮಾಡುವ ವೈರಿಗಳಿಂದ, ಬೆಳೆಯ ವಿಫಲತೆಯಿಂದ, ಮತ್ತು ಕ್ಷಾಮದಿಂದ ವಿಮುಕ್ತಿಗಳು ಅವರ ನಂಬಿಗಸ್ತಿಕೆಯ ಮೂಲಕ ಅವರಿಗೆ ಸಿಕ್ಕಬಹುದಾಗಿತ್ತು. ಹೇಗೂ, ಆ ಮಹಾ ಆಶೀರ್ವಾದಗಳು ಶಾರೀರಿಕವಾಗಿದ್ದವು ಮತ್ತು ನಿರಂತರವಾಗಿ ಉಳಿಯುವ ತೃಪ್ತಿಯನ್ನು ಕೊಟ್ಟಿರಲಾರದವುಗಳಾಗಿದ್ದವು. ಕ್ರೈಸ್ತನ ವಿಶ್ರಾಂತಿಯು ಶಾಂತ ಮನಸ್ಸನ್ನು ಮತ್ತು ದೇವರ ಸನ್ನಿಧಿಯಲ್ಲಿ ಒಂದು ಮಹಿಮಕರವಾದ ನಿತ್ಯತ್ವವನ್ನು ತಂದು ಕೊಡುವಂಥದು. ಇದೇ ನಿಜವಾದ ಸಬ್ಬತ್ ಆಚರಣೆಯಾಗಿರುತ್ತದೆ.

## ಒಂದು ದಿನ ತಡವಾಗಿ — ಅವಿಧೇಯತೆಗೆ ಒಂದು ಉದಾಹರಣೆ (4:11)

ಕಾಲೇಬ ಮತ್ತು ಯೆಹೋಶುವರು ಜನರಿಗೆ ತಕ್ಷಣವೇ ನಾವು ಹೋಗಿ ದೇಶವನ್ನು ವಶಪಡಿಸಿಕೊಳ್ಳಬೇಕೆಂದು ಹೇಳಿದಾಗ ಅವರು ಅಸಮ್ಮತಿಯನ್ನು ಸೂಚಿಸಿ "ಆ ರಾತ್ರಿಯೆಲ್ಲಾ ಅಳುತ್ತಿದ್ದರು" (ಅರಣ್ಯಕಾಂಡ 14:1). ಜನರ ಕಾಲೇಬನ ಮತ್ತು ಯೆಹೋಶುವನ ಅಥವಾ ಮೋಶೆಯ ಮತ್ತು ಆರೋನನ ಮಾತುಗಳಿಂದ ಮನವರಿಕೆಗೊಳ್ಳಲಿಲ್ಲ. ಹೇಗೂ, ಅವರು ಕೂಡಿ ಬಂದಿದ್ದ ಗುಡಾರದಲ್ಲಿ "ಯೆಹೋವನ ತೇಜಸ್ಸು" ಕಾಣಿಸಿಕೊಂಡು (ಅರಣ್ಯಕಾಂಡ 14:10) ಮೋಶೆ ಮತ್ತು ಆರೋನರ ಪ್ರಾರ್ಥನೆಗೆ ಯೆಹೋವನ ಪ್ರತ್ಯುತ್ತರ ಏನೆಂಬುದನ್ನು ಸಭಿಕರಿಗೆ ಹೇಳಿದಾಗ, ಅವರು ತಮಗೆ ನಂಬಿಕೆಯಿಲ್ಲದ್ದಕ್ಕಾಗಿ ವಿಷಾದಿಸಿಕೊಂಡರು. ಆಗ ಅವರು ವಿಧೇಯರಾಗಲು ಮತ್ತು ಹೋಗಿ ದೇಶವನ್ನು ಗೆದ್ದುಕೊಳ್ಳುವದಕ್ಕೆ ತೀರ್ಮಾನಿಸಿಕೊಂಡರು (ಅರಣ್ಯಕಾಂಡ 14:39, 40), ಆದರೆ ಅದು ಈಗಾಗಲೆ ಒಂದು ದಿನದಷ್ಟು ಬಹಳ ತಡವಾಗಿ ಹೋಗಿತ್ತು.[66] ಅವರು ಅವಿಧೇಯರಾಗಿದ್ದರು ಮತ್ತು ಅದರ ಪರಿಣಾಮಗಳನ್ನು ಅನುಭವಿಸಬೇಕಾಗಿತ್ತು, ಅದರರ್ಥವು ಅವರು ಅರಣ್ಯದಲ್ಲಿ ಮರಣಿಸಬೇಕಾಗಿತ್ತು. ಕರ್ತನಿಗೆ ವಿಧೇಯರಾಗುವದಕ್ಕೆ ಒಂದು ಸದವಕಾಶವುಳ್ಳ ಸಮಯವು ಇರುತ್ತದೆ, ಮತ್ತು ಆ ಸಮಯವು "ಈಹೊತ್ತು" ಆಗಿದೆ (ಇಬ್ರಿಯ 4:7). ದೇವರು "ಅಷ್ಟರ ತನಕ ಮತ್ತು ಇನ್ನು ಮುಂದಕ್ಕೆ ಇಲ್ಲ" ಎಂಬ ಹಂತವನ್ನು ಹೊಂದಿದ್ದಾನೆ. ಪಶ್ಚಾತ್ತಾಪ ಪಡಬೇಕು ಮತ್ತು ಕ್ಷಮಾಪಣೆಯ್ನು ಹೊಂದಬೇಕೆಂದು ಆತನ ಕೊಡುಗೆಗಳು ಈ ಜೀವನದಲ್ಲಿ ಪಾಪ ಪರಿಣಾಮಗಳನ್ನು ತೆಗೆದು ಹಾಕಲಾರದೆ ಇರಬಹುದು. ದೇವರು ಪಾಪ ಮಾಡಿದ್ದ ಇಸ್ರಾಯೇಲ್ಯರನ್ನು ಕ್ಷಮಿಸುವದಕ್ಕೆ ತೀರ್ಮಾನಿಸಿದರೂ, ಅವರು ಆಗಲೂ ಅರಣ್ಯದಲ್ಲಿ ಸತ್ತರು. ಅದೇ ರೀತಿಯಲ್ಲಿ ನಾವು ಆರಂಭದಲ್ಲಿ ದೇವರಿಗೆ ವಿಧೇಯರಾಗುವದಕ್ಕೆ

ನಿರಾಕರಿಸಬಹುದು ಮತ್ತು ಹಾಗಿದ್ದರೂ ಕ್ರಮೇಣದಲ್ಲಿ ರಕ್ಷಣೆಯನ್ನು ಹೊಂದಿಕೊಳ್ಳಬಹುದು. ಹೇಗೂ, ನಿತ್ಯತ್ವದ ಹಂತಕ್ಕೆ ಬರುವ ಮುನ್ನ, ನಾವು ನಮ್ಮ ತಾತ್ಕಾಲಿಕ ಅವಿಧೇಯತೆಗಾಗಿ ಅಸಂಖ್ಯಾತ ದಾರಿಗಳಲ್ಲಿ ಬಾಧೆಯನ್ನನುಭವಿಸಬಹುದು.

ಇಸ್ರಾಯೇಲ್ಯರ ಅವಿಧೇಯತೆಯು ಅವರ ಬೀಳುವಿಕೆಯಲ್ಲಿ (πίπτω, *piptō*) ಫಲಿತಗೊಂಡಿತು, ಅದರರ್ಥವು "ವಿಫಲವಾಗು" ಅಥವಾ "ಕೆಳಕ್ಕೆ ಬೀಳು" ಎಂದಾಗಿದೆ. ರೋಮಾ 11:22ರಲ್ಲಿ, ಅದೇ ಪದವು ಬಳಸಲ್ಪಟ್ಟಿದೆ, ಅದು ಕೃಪೆಯಿಂದ ಬಿದ್ದು ಹೋಗುವದರ ಸಾಧ್ಯತೆಯ ಕುರಿತು ಬೈಬಲಿನ ಅತ್ಯಂಥ ಸ್ಪಷ್ಟವಾದ ಹೇಳಿಕೆಗಳಲ್ಲೊಂದಾಗಿದೆ. ಒಬ್ಬನು ದೇವರ ಒಳ್ಳೇತನದಲ್ಲಿ ಮುಂದುವರೆಯುವದಕ್ಕೆ ನಿರಾಕರಿಸುವದಾದರೆ ಅವನು "ಕಡಿದುಹಾಕಲ್ಪಡುವನು." ಮತಭ್ರಷ್ಟತೆಯ ಅಪಾಯವು ವಾಸ್ತವವಾದದ್ದು, ಮತ್ತು ಯಾವದೇ ಸಿದ್ಧಾಂತಿಕ ವಾಗ್ವಾದವು ಈ ಸತ್ಯವನ್ನು ಬದಲಾಯಿಸಲಾರದು.

### ಶಕ್ತಿಶಾಲಿ ವಾಕ್ಯ (4:12, 13)

ಅದಕ್ಕಿರುವ ಶಕ್ತಿಯ ಕಾರಣದಿಂದ, ವಾಕ್ಯವು ಪ್ರಸಂಗಪೀಠಗಳಿಂದ, ತರಗತಿಯ ಕೋಣೆಗಳಲ್ಲಿ, ಮತ್ತು ಮನೆಗಳಲ್ಲಿ ಸಾರಲ್ಪಡತಕ್ಕದ್ದು ಮತ್ತು ಉಪದೇಶಿಸಲ್ಪಡತಕ್ಕದ್ದು. ವಾಕ್ಯವು – ಹಳೆಯ ಮತ್ತು ಹೊಸ ಎರಡೂ ಒಡಂಬಡಿಕೆಗಳು – ಕಾರ್ಯರೂಪದ ಅನ್ವಯಿಕೆಯೊಂದಿಗೆ ಒಂದು ನಿರಂತರವಾದ ಜ್ಞಾನ ಹೊಳೆಯಾಗಿ ಪ್ರಸಂಪೀಠದಿಂದ ಬಯಲುಪಡಿಸತಕ್ಕದ್ದು. ಸಭೆಯ ನಾಯಕರ ಪ್ರಾಥಮಿಕ ಕೆಲಸವು ನಿರಂತರವಾಗಿ ವಾಕ್ಯವು ಕಲಿಸಲ್ಪಡುವಂತೆ ಜಾಗ್ರತೆ ವಹಿಸುವದು, ಯಾಕೆಂದರೆ ವಾಕ್ಯಕ್ಕೆ ಮನುಷ್ಯರ ಹೃದಯದ ರಹಸ್ಯಗಳನ್ನು ಬೈಲಿಗೆ ತಂದು ಅವರನ್ನು ನೀತಿಯ ಕಡೆಗೆ ತಿರುಗಿಸುವ ಶಕ್ತಿಯಿರುತ್ತದೆ. ಬೈಬಲ್ ತರಗತಿಯಲ್ಲಿ ಉಪದೇಶ ಮತ್ತು ಮನೆಗಳಲ್ಲಿನ ಅಧ್ಯಯನಗಳು, ಎಷ್ಟೇ ಒಳ್ಳೇದಾಗಿದ್ದರೂ, ಅವುಗಳು ಸಾಮಾನ್ಯವಾಗಿ ವಾಕ್ಯವನ್ನು ಮುಕ್ತವಾಗಿ ಮತ್ತು ಸರಳವಾಗಿ ಬೋಧಿಸುವ ಒತ್ತು ಹಾಗೂ ಬಲವನ್ನು ಹೊಂದಿರುವದಿಲ್ಲ.

ವಾಕ್ಯಕ್ಕೆ "ತೂರಿಹೋಗುವ" ಶಕ್ತಿಯಿರುತ್ತದೆ. ಒಬ್ಬನು ವಾಕ್ಯದ ಧ್ಯಾನವನ್ನು ಮಾಡುವಂತೆ ಅದನ್ನು ತನ್ನ ಹೃದಯದಲ್ಲಿ ಉಳಿಯುವದಕ್ಕೆ ಬಿಡುವಾಗ ಅದು ಅವನಲ್ಲಿ ಆತನ ಪಾಪದ ಕುರಿತು ಮನವರಿಕೆಯನ್ನುಂಟು ಮಾಡವದು ಎಂಬ ಅರ್ಥದಲ್ಲಿ ಇದನ್ನು ತೆಗೆದುಕೊಳ್ಳಬಹುದು. ನಾವು ಅದನ್ನು ಮಾಡಿದ್ದೇವೋ? ಪಂಚಾಶತ್ತಮ ದಿನದಲ್ಲಿದ್ದವರ "ಹೃದಯಗಳಲ್ಲಿ ಅಲುಗು ನೆಟ್ಟಂತಾದರು" (ಅಪೊಸ್ತಲರ ಕೃತ್ಯಗಳು 2:37) ಅಥವಾ ಪಶ್ಚಾತ್ತಾಪದಿಂದ ತುಂಬಿದವರಾದರು. ವಾಕ್ಯವು ಅವರನ್ನು ಇಬ್ಭಾಗ ಮಾಡಿತ್ತು. ಅವರು ಮುಂದೆ ಪೇತ್ರನು ಆಜ್ಞಾಪಿಸಿದ ಪಶ್ಚಾತ್ತಾಪ ಮತ್ತು ದೀಕ್ಷಾಸ್ನಾನಕ್ಕೆ ಸಿದ್ಧರಾಗಿದ್ದರು (2:38). ನೀವು ಯಾವ ಹಂತವನ್ನು ಎಂದಿಗೂ ತಲುಪಿಲ್ಲವಾದರೆ, ನೀವು ದೇವರ ವಾಕ್ಯದಿಂದ "ತಿವಿಯಲ್ಪಟ್ಟಿಲ್ಲ" ಮತ್ತು ಇಬ್ಭಾಗಿಸಲ್ಪಟ್ಟಿಲ್ಲ ಎಂದರ್ಥ.

12 ಮತ್ತು 13 ವಚನಗಳ ಪ್ರಕಾರ ವಾಕ್ಯವು ಏನಾಗಿದೆ ಮತ್ತು ಏನು ಮಾಡಬಲ್ಲದು ಎಂಬುದನ್ನು ಈ ಕೆಳಗಿನದು ಸಾರಾಂಶಗೊಳಿಸುತ್ತದೆ: (1) ಅದು ದೇವರ ವಾಕ್ಯ. (2) ಅದು ಸಜೀವವಾದದ್ದು. (3) ಅದು ಬಲಿಷ್ಠ ಮತ್ತು ಶಕ್ತಿಶಾಲಿ. (4) ಅದು ಕಾರ್ಯಸಾಧಕ, "ಯಾವ ಇಬ್ಬಾಯಿ ಕತ್ತಿಗಿಂತಲೂ ಹದವಾದದ್ದು." (5) ಅದು ತೂರಿಹೋಗುವಂಥದ್ದು. (6) ಪುನರ್ಜೀವಗೊಳಿಸುವಂಥದ್ದು, "ಪ್ರಾಣ ಆತ್ಮಗಳನ್ನು ವಿಭಾಗಿಸುವಷ್ಟು ಮಟ್ಟಿಗೂ ತೂರಿಹೋಗುವಂಥದು." (7) ಅದು ಪ್ರಕಟಿಸುವಂಥದ್ದು, ಬಯಲುಗೊಳಿಸುವಂಥದ್ದು, "ಹೃದಯದ

ಆಲೋಚನೆಗಳನ್ನೂ ಉದ್ದೇಶಗಳನ್ನೂ."[67] ನಾವೇನಾಗಿದ್ದೇವೆಂಬುದನ್ನು ವಾಕ್ಯವು ಕನ್ನಡಿಯಲ್ಲಿ ನೋಡುವದಕ್ಕಿಂತಲೂ ಉತ್ತಮವಾಗಿ ಪ್ರತಿಬಿಂಬಿಸುವದು (ಯಾಕೋಬ 1:25; 2 ಕೊರಿಂಥ 3:18).

## ದೇವರಿಗೆ ನಾವು ಲೆಕ್ಕವನ್ನು ಒಪ್ಪಿಸತಕ್ಕದ್ದು (4:13)

ಬರಲಿರುವ ನ್ಯಾಯತೀರ್ಪಿನ ಬಗ್ಗೆ ನಾವು ಏಕೆ ಸಾರಬೇಕು? ಯಾಕೆಂದರೆ "ನಾವು ಯಾವಾತನಿಗೆ ಲೆಕ್ಕ ಒಪ್ಪಿಸಬೇಕಾಗಿದೆಯೋ ಆತನ ದೃಷ್ಟಿಗೆ ಸಮಸ್ತವೂ ಮುಚ್ಚುಮರೆಯಿಲ್ಲದ್ದಾಗಿಯೂ ಬೈಲಾದದ್ದಾಗಿಯೂ ಅದೆ" (ವ. 13). ಲೇಖಕನು ತನ್ನ ವಾಚಕರಿಗೆ ಬರಲಿರುವ ನ್ಯಾಯತೀರ್ಪಿನ ಬಗ್ಗೆ ಹಲವಾರು ಸಾರಿ ಜ್ಞಾಪಿಸುತ್ತಾನಾದರೂ (6:1, 2; 9:27; 10:27), ಅವರಿಗೆ ಬೈಬಲ್ ಸಿದ್ಧಾಂತವು ಚೆನ್ನಾಗಿ ಪರಿಚಿತವಿತ್ತೆಂಬುದು ಸ್ಪಷ್ಟವಾಗಿ ರುತ್ತದೆ. ಕ್ರಿಸ್ತನ ನ್ಯಾಯಾಸನದ ಮುಂದೆ ಎಲ್ಲರೂ ಕಾಣಿಸಿಕೊಳ್ಳಬೇಕು (2 ಕೊರಿಂಥ 5:10, 11). ಪೌಲನು ಪೂರ್ಣವಾಗಿ ಅಂಗೀಕರಿಸಿಕೊಂಡಿದ್ದಂತಹ, ಆ ಸತ್ಯದ ನಿಮಿತ್ತವಾಗಿ ಕ್ರಿಸ್ತನಿಗೆ ವಿಧೇಯರಾಗುವಂತೆ "ಮನುಷ್ಯರನ್ನು ಒಡಂಬಡಿಸುವದಕ್ಕೆ" ಒತ್ತಾಯಿಸಲ್ಪ ಟ್ಟಿದ್ದನು.

ಅಂತ್ಯದಲ್ಲಿ ಎಲ್ಲರಿಗೂ ಒಂದು ನ್ಯಾಯತೀರ್ಪು ಇರುವದು (ಇಬ್ರಿಯ 9:27). ಸಹಸ್ರವರ್ಷದಿಂದ ವಿಭಾಗಿಸಲ್ಪಟ್ಟಿರುವ ಎರಡು ಅಥವಾ ಮೂರು ನ್ಯಾಯತೀರ್ಪುಗಳಿರುತ್ತವೆಂಬಂತಹ ಯಾವದೇ ಕಾರ್ಯವು ಇರುವದಿಲ್ಲ, ಯಾಕೆಂದರೆ ನಾವೆಲ್ಲರೂ ನಮ್ಮನ್ನು ಸತ್ತವರೊಳಗಿಂದ ಎಬ್ಬಿಸುವಾತನ ಎದುರಿಗೆ ನಿಲ್ಲಬೇಕಾಗುವದು (ಯೋಹಾನ 5:28, 29). ಹಿರಿಯರು ತಮ್ಮ ವಶದಲ್ಲಿ ಕೊಡಲ್ಪಟ್ಟಿರುವ ಕುರಿಗಳ ವಿಷಯದಲ್ಲಿ "ಲೆಕ್ಕ"ವನ್ನು ಒಪ್ಪಿಸುವರು (ಇಬ್ರಿಯ 13:17). ಅವಿಧೇಯ ಆತ್ಮಗಳಿಗೆ, ನ್ಯಾಯತೀರ್ಪು ಒಂದು ಭಯಂಕರವಾದ ತೀರ್ಪನ್ನು ಒಳಗೊಂಡಿರುತ್ತದೆ: ". . . ಶಾಪಗ್ರಸ್ತರೇ, ನನ್ನನ್ನು ಬಿಟ್ಟು ಪಿಶಾಚನಿಗೂ ಅವನ ದೂತರಿಗೂ ಸಿದ್ಧಮಾಡಿರುವ ನಿತ್ಯ ಬೆಂಕಿಯೊಳಗೆ ಹೋಗಿರಿ" (ಮತ್ತಾಯ 25:41). ಒಂದು ನಿತ್ಯವಾದ ನರಕಕ್ಕೆ ಹೋಗಬೇಕೆಂದು ತೀರ್ಪು ಹೊಂದುವ ಸಾಧ್ಯತೆಯಿಲ್ಲವೆಂದಾದರೆ, ಒಂದು ನ್ಯಾಯತೀರ್ಪಿಗೆ ಸ್ವಲ್ಪ ಅಥವಾ ಯಾವದೇ ಅರ್ಥವು ಇರುವದಿಲ್ಲ. ಅದು ಜನಪ್ರಿಯವಲ್ಲ ಎಂಬ ಭಯದಿಂದ ನಾವು ಆ ವಿಷಯವನ್ನು ಸಾರುವದರಿಂದ ದೂರವಿರಬಾರದು. ಮನುಷ್ಯರು ನರಕದ ಬಗ್ಗೆ ಹುಡುಗಾಟಿಕೆಯಿಂದ ಮಾತಾಡಿ ಅದರ ನಿಜವಾದ ಸ್ವಭಾವದ ಕುರಿತು ಯಾವದೇ ಕಾಳಜಿಯನ್ನು ತೋರದಿರುವಾಗ, ಆ ವಿಷಯದ ಕುರಿತು ಹೆಚ್ಚು ಬಲಯುತವಾಗಿ ಮಾತಾಡುವದಕ್ಕೆ ಇದು ಸಕಾಲವಾಗಿರುತ್ತದೆ. ನ್ಯಾಯತೀರ್ಪಿನ ದಿನದಂದು, ಒಂದು ಕಾಲದಲ್ಲಿ ನ್ಯಾಯತೀರ್ಪಿನ ಬಗ್ಗೆ ಶಕ್ತಿಯುತವಾಗಿ ಪ್ರಸಂಗಿಸಿದವನು ನಂತರದ ದಿನಗಳಲ್ಲಿ ಅತಿಯಾದ "ಕೃಪೆಯಿಂದ ತುಂಬಿದವನಾಗಿ" ನಾಶನದಲ್ಲಿರುವವರಿಗೆ ಎಚ್ಚರಿಸಲು ವಿಫಲನಾದ ಭೋಧಕನಿಗೆ ಎಷ್ಟು ದುಃಖಕರವಾಗಿರುವದು!

## ನಮ್ಮಂತೆಯೇ ಶೋಧನೆಗೆ ಗುರಿಯಾದನು (4:14, 15)

G. C. Brewerನು ಈ ಕೆಳಗಿನ ಕಥನದ ಮೂಲಕ ಭೂಮಿಯ ಮೇಲೆ ಯೇಸು ಎಷ್ಟರ ಮಟ್ಟಿಗೆ ಅನುಭವಿಸಿದನೆಂಬುದನ್ನು ದೃಷ್ಟಾಂತಗೊಳಿಸುತ್ತಾನೆ. ಆತನು Tennesseeಯ Chattanoogaನಲ್ಲಿ ಒಂದು ಭಾನುವಾರದ ಸಾಯಂಕಾಲದಲ್ಲಿ ಬೋಧಿಸುತ್ತಿದ್ದನು, ಮತ್ತು ನಾವು ಎದುರಿಸತಕ್ಕ ಎಲ್ಲಾ ಭಾವಗಳನ್ನು ನಮ್ಮ ಕರ್ತನು ಅನುಭವಿಸಿದ್ದರ ಕುರಿತು ಮಾತಾಡಿದನು. 1920ರ ಹೊತ್ತಿನಲ್ಲಿ, ಕರ್ತನ ಆ ಸಭೆಯು ವಿವಿಧ ಚಟುವಟಿಕೆಗಳಿಗಾಗಿ ಬಳಕೆಯಾಗುತ್ತಿದ್ದ ಒಂದು

ಕಟ್ಟಡದಲ್ಲಿ ಕೂಡಿ ಬರುತ್ತಿತ್ತು. ಸಂದೇಶದ ಬಳಿಕ ದ್ವಾರದ ಬಳಿಯಲ್ಲಿ ಒಬ್ಬ ಯುವಕನು ಆತನನ್ನು ಸಂಧಿಸಿದನು ಮತ್ತು Brewerನು ಬೋಧಿಸಿದ ಸಂಗತಿಯನ್ನು ಆತನು ನಂಬಲಿಲ್ಲ ಎಂಬದಾಗಿ ಘೋಷಿಸಿದನು. ಆತನು ಹೇಳಿದ್ದೇನೆಂದರೆ, "ನಾನು ಏನು ಎದುರಿಸುತ್ತಿದ್ದೇನೋ ಅಂಥದ್ದನ್ನು ಯೇಸು ಎಂದಿಗೂ ಅನುಭವಿಸಬೇಕಾಗಿ ಬಂದಿರಲಿಲ್ಲ." ಸಹೋದರ Brewerನು ಆ ಯುವಕನನ್ನು ಒಂದು ಪ್ರಶಾಂತವಾದ ಕೋಣೆಗೆ ಬರುವಂತೆ ಆಮಂತ್ರಿಸಿದನು, ಅಲ್ಲಿ ಆತನು ತನ್ನ ಹೆಂಡತಿಯು ಮತ್ತೊಬ್ಬ ಪುರುಷನನ್ನು ಪ್ರೀತಿಸಿ ಆತನನ್ನು ತೊರೆದು ಹೋಗಿದ್ದರ ಬಗ್ಗೆ, ಅವರ ಹಸುಗೂಸನ್ನು ಜೊತೆಗೆ ತೆಗೆದುಕೊಂಡು ಹೋಗಿದ್ದಾಳೆಂಬ ವಿಷಯವನ್ನು ಹೊರಗೆ ಹಾಕಿದನು. ಆ ಸಾಯಂಕಾಲ ತಾನು ಅವರಿಗಾಗಿ ಕಾಯುತ್ತಿದ್ದನೆಂದು, ಮತ್ತು ಆ ಮನುಷ್ಯನನ್ನು ಕೊಂದು ತನ್ನ ಹೆಂಡತಿ ಹಾಗೂ ಮಗುವನ್ನು ಹಿಂದಕ್ಕೆ ಕರೆದೊಯ್ಯಬೇಕೆಂದು ಯೋಜನೆ ಹಾಕಿಕೊಂಡಿದ್ದನೆಂಬುದನ್ನು ಅರಿಕೆ ಮಾಡಿದನು. "ಯೇಸು ಎಂದಿಗೂ ವಿವಾಹವಾಗಲಿಲ್ಲ ಮತ್ತು ಎಂದಿಗೂ ಒಬ್ಬ ಹೆಂಡತಿಯನ್ನು ಹಾಗೂ ಮಗುವನ್ನು ಕಳಕೊಳ್ಳಲಿಲ್ಲ!" ಎಂದು ಹೇಳುತ್ತಾ ಆ ಮನುಷ್ಯನು ಹತಾಶೆಯಿಂದ ಅತ್ತನು. ತಾನು ಒಂದು ಕ್ಷಣ ಬೆಚ್ಚಿಬಿದ್ದನೆಂದು ಸಹೋದರ Brewerನು ಹೇಳುತ್ತಾನೆ, ಆದರೆ ಅನಂತರದಲ್ಲಿ ಆತನು ಮೂಲೆಯಲ್ಲಿ ಸೇರಿರುವ ಜನರ ಗುಂಪಿನ ಮುಂದೆ ಒಂದು ಪಿಯಾನೋ ಇರುವದನ್ನು ಕಂಡನು. ಅದು ಆತನಿಗೊಂದು ಯೋಚನೆಯನ್ನು ಹೊಳೆಯುವಂತೆ ಮಾಡಿತು. ಆತನು ಹೀಗೆ ಹೇಳಿದನು, "ಆ ಪಿಯಾನೋ ನೋಡು. ಅದು ಲೋಕವು ಇದುವರೆಗೂ ಕೇಳಿರದ ಎಲ್ಲಾ ಸಂಗೀತದ ತುಣುಕುಗಳನ್ನೂ ನುಡಿಸಿರುವದಿಲ್ಲ, ಆದರೆ ಅದು ಬಾರಿಸಬಹುದಾದ ಸಕಲ ಧ್ವನಿ ಹುಟ್ಟಿಸಲು ಕೀಲಿಕೈಗಳನ್ನುಂತೂ ಹೊಂದಿದೆ. ಅದೇ ರೀತಿಯಲ್ಲಿಯೇ, ಯೇಸು ನಿಖರವಾಗಿ ನಿನ್ನ ಅನುಭವವನ್ನೇ ಎಂದಿಗೂ ಹೊಂದಲಿಲ್ಲ – ಆದರೆ ತಾನು ಗಾಢವಾಗಿ ಪ್ರೀತಿಸಿದ ಒಬ್ಬನಿಂದ ದ್ರೋಹಕ್ಕೊಳಗಾಗುವದರಲ್ಲಿ ಅತ್ಯಂಥ ದೊಡ್ಡ ನಷ್ಟವನ್ನು ಅನುಭವಿಸಿದ್ದನು. ಹೌದು, ನೀನು ಅನುಭವಿಸುತ್ತಿರುವ ನೋವು ಆತನಿಗೆ ಗೊತ್ತದೆ."

ನಾವು ಎಲ್ಲರಿಂದ ಕೈ ಬಿಡಲ್ಪಟ್ಟಿರುವಿಕೆ ಮತ್ತು ಹತಾಶೆಯನ್ನು ಅನುಭವಿಸುತ್ತಿರುವದಾದರೆ, ನಾವು ಯೇಸುವನ್ನು ದೃಷ್ಟಿಸೋಣ. ಆತನ ಇಡೀ ಜೀವನವು ಇದರೆಡೆಗೆ ಹಂತಹಂತವಾಗಿ ಸಾಗಿ ಕೊನೆಗೆ ಶಿಲುಬೆಯ ವರೆಗೂ ಬಂದಿತ್ತು ಮತ್ತು ಆತನು ತನ್ನ ಏಕಾಂಗತೆಯು ಪರಾಕಾಷ್ಠೆಯಲ್ಲಿ, "ನನ್ನ ತಂದೆಯೇ, ನನ್ನ ತಂದೆಯೇ, ಏಕೆ ನನ್ನನ್ನು ಕೈ ಬಿಟ್ಟಿದ್ದೀ?" ಎಂದು ಕೂಗುತ್ತಾನೆ (ಮತ್ತಾಯ 27:46). ಪುನರುತ್ಥಾನಗೊಂಡ ಕರ್ತನಲ್ಲಿ ನಂಬಿಕೆಯನ್ನಿಟ್ಟವರಾಗಿ, ನಾವು ಶಿಲುಬೆಯಲ್ಲಿ ಆತನು ಅನುಭವಿಸಿದ ಏಕಾಂಗಿತನದಷ್ಟೆ ಪೂರ್ಣವಾದ ಏಕಾಂಗಿತನವನ್ನು ಎಂದಿಗೂ ಅನುಭವಿಸಬೇಕಿಲ್ಲ. ನಾವು ಪ್ರಾರ್ಥನೆಯಲ್ಲಿ ಕ್ರಿಸ್ತನ ಮೂಲಕವಾಗಿ "ಧೈರ್ಯದಿಂದ" ತಂದೆಯ ಬಳಿಗೆ ಬರಬಹುದು (ವ. 16). ನಮ್ಮ ಅತ್ಯಂಥ ಆಳವಾದ ಅಗತ್ಯತೆಗಳಿಗೆ ನಮ್ಮ ಕರ್ತನು ಎಂದಾದರೂ "ಇಲ್ಲ" ಎಂದು ಹೇಳುವನೋ? ನಾನಂತೂ ಅದನ್ನು ಸಂಶಯಿಸುತ್ತೇನೆ, ಯಾಕೆಂದರೆ ಆತನು "ಹೌದು" ಎಂಬುದರ ಕರ್ತನಾಗಿದ್ದಾನೆ! (ನೋಡಿರಿ 2 ಕೊರಿಂಥ 1:19, 20.)

ಎಲ್ಲವೂ ತಪ್ಪಾಗಿ ಸಾಗುತ್ತಿದೆ ಎಂದು ಅನ್ನಿಸುವಾಗ ಪ್ರಾರ್ಥನೆಯಲ್ಲಿ ದೇವರ ಕಡೆಗೆ ತಿರುಗಿಕೊಳ್ಳಿರಿ, ಯಾಕೆಂದರೆ ಈ "ಕಾರ್ಯರೂಪ"ದ ಯುಗದಲ್ಲಿ ನಮ್ಮ ಪ್ರೀತಿಯ ತಂದೆಯ ಮೇಲೆ ಅವಲಂಭಿತರಾಗುವದನ್ನು ನಿರ್ಲಕ್ಷಿಸುವದಕ್ಕಿಂತಲೂ ಘೋರವಾದ ಪಾಪವು ಮತ್ತೊಂದಿರುವದಿಲ್ಲ. ನಮ್ಮ ಅಗತ್ಯತೆಯು ಈ ಹಳೆಯ ಹಾಡಿನ ಮೂಲಕ ಸುಂದರವಾಗಿ ವ್ಯಕ್ತಗೊಳಿಸಲಾಗಿದೆ:

ನಮಗೆ ಕಷ್ಟಗಳು ಮತ್ತು ಶೋಧನೆಗಳಿದ್ದಾವೋ?
ಎಲ್ಲಾದರೂ ಸಮಸ್ಯೆಯಿದೆಯೋ?
ನಾವೆಂದಿಗೂ ನಿರಾಶರಾಗಬಾರದು,
ಅದನ್ನು ಪ್ರಾರ್ಥನೆಯಲ್ಲಿ ಕರ್ತನ ಬಳಿಗೆ ಒಯ್ಯಿರಿ.
ನಮ್ಮ ಕಷ್ಟಗಳನ್ನು ಹಂಚಿಕೊಳ್ಳುವ,
ಅಷ್ಟೊಂದು ನಂಬಿಗಸ್ತ ಮಿತ್ರನು ಸಿಕ್ಕಬಲ್ಲನೋ?
ಯೇಸು ನಮ್ಮ ಪ್ರತಿಯೊಂದು ಬಲಹೀನತೆಯನ್ನು ಬಲ್ಲನು:
ಅದನ್ನು ಪ್ರಾರ್ಥನೆಯಲ್ಲಿ ಕರ್ತನ ಬಳಿಗೆ ಒಯ್ಯಿರಿ.[68]

## ಅನುತಾಪ ತೋರುವ ಕರ್ತನು (4:15)

ಈ ಅಧ್ಯಾಯದ ಮುಕ್ತಾಯದ ಮಾತುಗಳು ಬಲವಾದ ಪ್ರೋತ್ಸಾಹವನ್ನು ಒದಗಿಸುತ್ತವೆ. "ಆಕಾಶಮಂಡಲಗಳನ್ನು ದಾಟಿದ"ವನು ನಮಗೋಸ್ಕರ ತನ್ನ ಕಾಳಜಿಯನ್ನು ತೋರಿಸಿದ್ದಾನೆ! ಅನೇಕ ಬೇರೆ ಬೇರೆ ಸಂದರ್ಭಗಳಲ್ಲಿ ಅನುತಾಪವುಳ್ಳ ಕರುಣೆಯನ್ನು ತೋರ್ಪಡಿಸಿದ್ದಾನೆ. ಮತ್ತಾಯ 9:36ರಲ್ಲಿ ಆತನು ಕುರುಬನಿಲ್ಲದ ಕುರಿಗಳಂತಿದ್ದ ಜನಸಮೂಹದ ಮೇಲೆ ಕನಿಕರ ಪಟ್ಟನು. ಮತ್ತಾಯ 14:14ರಲ್ಲಿ ತನ್ನನ್ನು ಹಿಂಬಾಲಿಸಿ ಬಂದಿದ್ದ ಮತ್ತು ಹಸಿವೆಗೊಂಡಿದ್ದ ಐದು ಸಾವಿರ ಜನರ ಬಹುದೊಡ್ಡ ಗುಂಪನ್ನು (ಸ್ತ್ರೀಯರು ಮತ್ತು ಮಕ್ಕಳನ್ನು ಲೆಕ್ಕ ಮಾಡದೆ) ನೋಡಿ ಕನಿಕರಗೊಂಡನು. ಮತ್ತಾಯ 15:32-38ರಲ್ಲಿ, ಆತನು ನಾಲ್ಕು ಸಾವಿರ ಪುರುಷರು, ಸ್ತ್ರೀಯರು ಮತ್ತು ಮಕ್ಕಳ ವಿಷಯದಲ್ಲಿ ಅದನ್ನೇ ಮಾಡಿದನು.

ಮತ್ತಾಯ 18:23-35ರಲ್ಲಿ, ಯೇಸು ಕನಿಕರದ ಅಗತ್ಯತೆಯನ್ನು ತೋರಿಸುವದಕ್ಕೆ ಬಿತ್ತುವವನ ಸಾಮ್ಯವನ್ನು ಕಲಿಸಿದನು. ಮತ್ತಾಯ 20:30-34ರಲ್ಲಿ, ಆತನು ಯೆರಿಕೋದಲ್ಲಿ ಇಬ್ಬರು ಕುರುಡರನ್ನು ಗುಣಪಡಿಸಿದನು. ಮಾರ್ಕ 1:40-45ರಲ್ಲಿ, ಆತನು ಒಬ್ಬ ಕುಷ್ಠರೋಗಿಯನ್ನು ಗುಣಪಡಿಸಿದನು. ಮಾರ್ಕ 5:1-20ನೇ ವಾಕ್ಯಭಾಗವು ನಮ್ಮ ಕರ್ತನು ದೆವ್ವ ಪೀಡಿತನ ಮೇಲೆ ಕನಿಕರ ತೋರಿದನೆಂದು ಹೇಳುತ್ತದೆ. ಮಾರ್ಕ 9:14-27ರಲ್ಲಿ, ಆತನು ದೆವ್ವ ಪೀಡಿತ ಬಾಲಕನ ಮೇಲೆ "ಕನಿಕರಗೊಂಡನು." ಲೂಕ 7:11-17ರಲ್ಲಿ, ಆತನು ನಾಯಿನೆಂಬ ಊರಿನ ವಿಧವೆಯೊಬ್ಬಳ ಒಬ್ಬನೇ ಮಗನನ್ನು ಸತ್ತವರೊಳಗಿಂದ ಎಬ್ಬಿಸಿದನು. ಲೂಕ 10:30-37 ವಚನಗಳು ಸಮಾರ್ಯದವನ ಕಥೆಯನ್ನು ದಾಖಲಿಸುತ್ತವೆ, ಅದರಲ್ಲಿ ಯೇಸು ಕನಿಕರದ ಕುರಿತು ಒಂದು ವಿಶೇಷವಾದ ರೀತಿಯಲ್ಲಿ ಕಲಿಸಿದನು. ಅಂತಿಮವಾಗಿ, ಲೂಕ 15:11-24ರಲ್ಲಿ, ಯೇಸು ತಪ್ಪು ಮಾಡಿದ ಮಗನ ಮೇಲೆ ತಂದೆಯು ತೋರಿದ ಕನಿಕರದ ಉದಾಹರಣೆಯನ್ನು ನೀಡಿ ಫರಿಸಾಯರ ಮನೋಭಾವವನ್ನು ಖಂಡಿಸುತ್ತಾನೆ. ಯೇಸುವಿನ ಹೃದಯವು ಬಡವರು, ಶೋಷಣೆಗೊಳಗಾದವು, ವ್ಯಾಧಿಯಲ್ಲಿರುವವರು ಮತ್ತು ಬಾಧೆಗೊಳಗಾದವರ ಕುರಿತು ಕನಿಕರದಿಂದ ತುಂಬಿತ್ತು. ನಾವು ಯಾವ ವಿಧದಲ್ಲಿಯೂ ಕಡಿಮೆಯಾಗಿರಲು ಸಾಧ್ಯವೋ? ನಿಶ್ಚಯವಾಗಿಯೂ, ಆತನು ಕನಿಕರ ತೋರುವವರ ಮೇಲೆ ಕನಿಕರವನ್ನು ಮತ್ತು ಕರುಣೆಯುಳ್ಳವರಿಗೆ ಕರುಣೆಯನ್ನು ತೋರುವನು. ಆತನು ಅತ್ಯಂಥ ದೀನ ಸೇವೆಯನ್ನು ಒದಗಿಸುವದಕ್ಕೆ ಯಾವಾಗಲೂ ಸಿದ್ಧನಿರುತ್ತಾನೆ – ನಮ್ಮ ಪಾದಗಳನ್ನು ತೊಳೆಯಲು, ನಮ್ಮ ಬಿದ್ದು ಹೋಗಿರುವ ಸ್ಥಿತಿಯಿಂದ ನಮ್ಮನ್ನು ಪುನಃ ಹಿಂದಕ್ಕೆ ತರುವದಕ್ಕೆ, ಮತ್ತು ನಮ್ಮ ರಕ್ಷಣೆಯ ಆನಂದವನ್ನು ಪುನಃಸ್ಥಾಪಿಸುವದಕ್ಕೆ ಸಿದ್ಧನಿರುತ್ತಾನೆ. ನಾವು ನಿಜವಾಗಿಯೂ ಪಶ್ಚಾತ್ತಾಪ ಪಟ್ಟು ಆತನಂತೆಯೇ ಕನಿಕರವನ್ನು ಅನುಸರಿಸುವದಾದರೆ ಇದೆಲ್ಲವೂ ಸತ್ಯವಾಗುವದು.

## ನಮ್ಮ ಕನಿಕರವುಳ್ಳ ರಕ್ಷಕನು (4:15)

ಮೊದಲ ಶತಮಾನದಲ್ಲಿನ ಜನರಿಗೆ ಅಗತ್ಯವಿದ್ದ ರೀತಿಯಲ್ಲಿಯೇ ನಮಗೂ ಒಬ್ಬ ಕನಿಕರವುಳ್ಳ ರಕ್ಷಕನ ಅಗತ್ಯತೆಯಿರುತ್ತದೆ. ಗ್ರೀಕ್ ಭಾಷೆಯನ್ನಾಡುವ ದೇಶಗಳಲ್ಲಿ ಸ್ತೋಯಿಕರ ತತ್ವಜ್ಞಾನವು ಬಲವಾಗಿತ್ತು. ದೇವರು ಮಾನವರ ಬಗ್ಗೆ ಭಾವಗಳನ್ನು ಹೊಂದಿರುವದಕ್ಕೆ ಅಥವಾ ವ್ಯಕ್ತಿಗಳ ಬಗ್ಗೆ ಕಳಕಳಿ ಹೊಂದಿರುವದಕ್ಕೆ ಅಸಮರ್ಥನು ಎಂಬದಾಗಿ ಸ್ತೋಯಿಕರು ನಂಬುತ್ತಿದ್ದರು. ದೇವರ ಕುರಿತು ಅವರಿಗಿದ್ದ ಭಾವನೆಯು *apatheia* ಎಂಬ ಪದದಿಂದ ಬಣ್ಣಿಸಲ್ಪಟ್ಟಿರುತ್ತದೆ, ಅದರಿಂದಲೇ ನಮಗೆ "apathetic" (ಭಾವಶೂನ್ಯ) ಎಂಬ ಬಂದಿರುತ್ತದೆ. ದೇವರಲ್ಲಿ ನಂಬಿಕೆಯಿಡುವವರಾದವರು ಜೀವನದ ಕುರಿತ ತಮ್ಮ ಇಡೀ ಬಾಹ್ಯನೋಟವನ್ನೇ ಬದಲಾಯಿಸಿಕೊಳ್ಳಬೇಕಾಯಿತು. ಅನೇಕರಿಗೆ, ಈ ಸುದ್ದಿಯು ಭಯಂಕರವಾದ ಭಾರವನ್ನು ಎತ್ತಿ ಹಾಕಿರಬಹುದಾಗಿದೆ. "ನಮ್ಮ ದೇವರು ಕಳಕಳಿಯಿರುವವನು!" ಈ ಲೋಕವು ಆತನು ಕಾಳಜಿ ಮಾಡುತ್ತಾನೆಂಬುದಕ್ಕೆ ಸಾಕಷ್ಟು ಪುರಾವೆಯನ್ನು ಒದಗಿಸುತ್ತದೆ (ರೋಮಾ 1:19, 20). ಆತನು ಸೂರ್ಯನ ಪ್ರಕಾಶವನ್ನು ಮತ್ತು ಮಳೆಯನ್ನು, ಸಮೃದ್ಧಿಯಾದ ಫಸಲುಗಳನ್ನು, ಮತ್ತು ತನ್ನ ಸೃಷ್ಟಿಯ ಸಕಲ ಸಂತೋಷಗಳನ್ನು ಅನುಗ್ರಹಿಸುತ್ತಾನೆ. ಯೇಸುವಿನ ಶಾಂತಭಾವದ ಹಿಂಬಾಲಕರು "ಭೂಮಿಯನ್ನು ಬಾಧ್ಯವಾಗಿ ಹೊಂದುವರು" ಎಂಬು ಓದುತ್ತೇವೆ (ಮತ್ತಾಯ 5:5), ಯಾಕೆಂದರೆ ನಿಜವಾದ ವಿಶ್ವಾಸಿಗಳು ಮಾತ್ರವೇ ಎಲ್ಲಾ ಒಳ್ಳೇದರಲ್ಲಿಯೂ ದೇವರ ಹಸ್ತವನ್ನು ಕಾಣಬಲ್ಲರು. ಆತನ ಸೃಷ್ಟಿಯೇ ಸ್ವತಃ "ನಾನು ಕಾಳಜಿ ಮಾಡುತ್ತೇನೆ!" ಎಂದು ಕೂಗುತ್ತದೆ. ಆತನು ಎಂದಿಗೂ ಒಬ್ಬ ಭಾವಶೂನ್ಯ ದೇವರಲ್ಲ.

ಕ್ರೈಸ್ತರು ಜೀವನದ ಸಮಸ್ಯೆಗಳು ಮತ್ತು ಹೃದಯವೇದನೆಗಳನ್ನು ವ್ಯತ್ಯಾಸವಾದ ಭಾವನೆಯಿಂದ ನೋಡಬಹುದು. ನಾವು ಈ ಲೋಕವನ್ನು ದಾಟಿ ನಿತ್ಯತ್ವವನ್ನು ನೋಡಬಲ್ಲೆವು ಮತ್ತು ಪರಲೋಕದಲ್ಲಿನ ಒಂದು ನಿವಾಸಕ್ಕೆ ಹೋಲಿಸಿದರೆ ನಮ್ಮ ಸಂಕಷ್ಟಗಳು ಹಗುರು ಹಾಗೂ ತೇಲಾಡುವಂಥವುಗಳೆಂಬುದನ್ನು ತಿಳಿದುಕೊಳ್ಳಬಲ್ಲೆವು (2 ಕೊರಿಂಥ 4:16-18). ನಾವು ಕ್ರೈಸ್ತೇತರರಿಗೆ ತಿಳಿಯದಂತಹ ಒಂದು ಸುವರ್ಣ ಸೂರ್ಯಾಸ್ತಮಾನವನ್ನು ಅಥವಾ ಹಚ್ಚಹಸುರಾದ ವಸಂತಕಾಲವನ್ನು ನೋಡಬಲ್ಲೆವು. ನಮಗೆ ಕ್ರಿಸ್ತನಲ್ಲಿರುವ ಭರವಸೆಯ ಕಾರಣದಿಂದ ಲೋಕವನ್ನು ನಾವು ಉತ್ತಮವಾಗಿ ಆನಂದಿಸುವದಕ್ಕೆ ಶಕ್ತರಾಗುವೆವು.

## ಆತನ ಹೆಸರಿನಲ್ಲಿ ಬರುವದು (4:16)

ಅಂತರ್ಯುದ್ಧದ ಒಂದು ಕಥೆಯು ಒಬ್ಬ ಬ್ಯಾಂಕಿನವನು ತನ್ನ ಮಗನನ್ನು ಯುದ್ಧಕ್ಕೆ ಕಳುಹಿಸಿ ಕೊಡುವದರ ಬಗ್ಗೆ ಹೇಳುತ್ತದೆ. ತಂದೆಯು ತನ್ನ ಮಗನ ಮತ್ತು ಸೈನ್ಯದ ಹಿತದ ಬಗ್ಗೆ ಎಷ್ಟೊಂದು ಕಳಕಳಿಗೊಂಡಿದ್ದನೆಂದರೆ ಆತನು ಗಾಯಗೊಂಡ ಸೈನಿಕರ ಶೂಶ್ರುಷೆಗಾಗಿ ದೊಡ್ಡ ಮೊತ್ತದ ಹಣವನ್ನು ಖರ್ಚು ಮಾಡುವದಕ್ಕೆ ಆರಂಭಿಸಿದನು. ಆತನು ಈ ಕೆಲಸಕ್ಕೆ ಬಹಳಷ್ಟು ಸಮಯವನ್ನು ಕಳೆಯುತ್ತಿದ್ದ ಕಾರಣ ಆತನ ಮೇಲಾಧಿಕಾರಿಗಳು ಅವನಿಗೆ ಛೀಮಾರಿ ಹಾಕಿದ್ದರು. ಹೇಗೂ, ಒಂದು ದಿನ, ಆತನ ಕಚೇರಿಗೆ ಒಬ್ಬ ಯುವಕನು ಬಂದನು. ಆತನು ಕಳೆಗುಂದಿದವನಾಗಿದ್ದನು, ಯುದ್ಧದಿಂದ ಹಿಂದಿರುಗಿದವನಂತೆ ಆದರೆ ತನ್ನ ಗಾಯಗಳಿಂದ ಇನ್ನೂ ಪೂರ್ಣವಾಗಿ ಚೇತರಿಸಿಕೊಂಡಿರದವನಂತೆ ತೋರಿದನು. ಆ ಯುವಕನು ತನ್ನ ಜೇಬಿನೊಳಗೆ ಕೈ ಹಾಕಿ ಬಿರುಮಳೆಯ ಹೊಡೆತಕ್ಕೊಳಗಾಗಿದ್ದ ಒಂದು ಪತ್ರವನ್ನು ಹೊರಗೆ ತೆಗೆದನು. ಆತನು ಅದನ್ನು ಬ್ಯಾಂಕಿನವನ ಕೈಗೆ ಕೊಟ್ಟನು, ಆತನು ಹೀಗೆ ಬರೆದಿರುವದನ್ನು ಓದಿದನು, "ಪ್ರಿಯ ತಂದೆಯೇ, ಈ ಮನುಷ್ಯನು ಯುದ್ಧದಲ್ಲಿ ನನ್ನ ಪಕ್ಕದಲ್ಲಿ ಗಾಯಗೊಂಡ ನನ್ನ

ಜೊತೆಯ ಸೈನಿಕನಾಗಿದ್ದಾನೆ. ದಯವಿಟ್ಟು ನನ್ನನ್ನು ಶೂಶ್ರುಷೆ ಮಾಡುವ ಪ್ರಕಾರವೇ ಆತನನ್ನು ಶೂಶ್ರುಷೆ ಮಾಡು. ನಿಮ್ಮ ಮಗನಾದ ಜಾನ್." ಬ್ಯಾಂಕಿನವನು ಶೀಘ್ರವೇ ಆ ಯುವ ಸೈನಿಕನಿಗೆ ಅಗತ್ಯವಾದದ್ದನ್ನೆಲ್ಲಾ ಒದಗಿಸಿದನು. ಆತನು ತನ್ನ ಸ್ವಂತ ಹೆಸರಿನ ಮೇಲೆ ಬಂದಿದ್ದರೆ, ಆತನನ್ನು ಹಿಂದಕ್ಕೆ ಕಳುಹಿಸಿಲಾಗುತ್ತಿತ್ತು; ಆದರೆ ಆತನು ಬ್ಯಾಂಕಿನವನ ಮಗನ ಹೆಸರಿನಲ್ಲಿ ಬಂದಿದ್ದನು. ತಂದೆಗೆ ಸಮೀಪವಾದವನು ಮತ್ತು ಪ್ರಿಯವಾದವನು ಆಗಿರುವ ಒಬ್ಬ ಪ್ರತಿವಾದಿಯನ್ನು ಹೊಂದಿರುವದು ಎಂಥ ಒಂದು ಆಶೀರ್ವಾದ! ನಮ್ಮ ಮಹಾಯಾಜಕನಾದ ಕ್ರಿಸ್ತನ ನಿಮಿತ್ತವಾಗಿ, ಆತನು ನಮ್ಮ ಮನವಿಗಳನ್ನು ಆಲಿಸುವನೆಂದು ನಾವು ಬಲ್ಲೆವು!

## ದೇವರ ಬಳಿಗೆ ಬರುವದು (4:16)

ಕ್ರೈಸ್ತರಾಗಿ ನಾವು ದೇವರನ್ನು ಸಮೀಪಿಸುವದಕ್ಕೆ ನಿರ್ಬಂಧ ಹೊಂದಿದವರಲ್ಲ. ನಾವು ಆತನೊಂದಿಗೆ ಮಾತಾಡಬಲ್ಲವಾದ್ದರಿಂದ, ಯಾವ ಮನುಷ್ಯನನ್ನು ನಮ್ಮ ಮಧ್ಯಸ್ಥನನ್ನಾಗಿಟ್ಟುಕೊಳ್ಳುವ ಅವಶ್ಯಕತೆಯಿಲ್ಲ. ನಾವೊಬ್ಬೊಬ್ಬರು ದೇವರಿಗೆ ಯಾಜಕರಾಗಿದ್ದೇವೆ, ಒಂದು ಪರಿಶುದ್ಧ ಮತ್ತು ರಾಜವಂಶದ ಯಾಜಕತ್ವದ ಭಾಗವಾಗಿದ್ದೇವೆ (1 ಪೇತ್ರ 2:5, 9). ಇದರರ್ಥವು ನಾವು ದೇವರಿಗೆ ಅಮೂಲ್ಯವಾಗಿದ್ದೇವೆ ಎಂಬದೆ. ಪ್ರತಿಯೊಬ್ಬ ದೇವಮನುಷ್ಯನು ತನ್ನದೇ ಆಗಿರುವ ಕರ್ತವ್ಯವನ್ನು ಮಾಡುವಂತೆ ನೇಮಿಸಲ್ಪಟ್ಟಿರುತ್ತಾನೆ ಮತ್ತು ಪ್ರಾರ್ಥನೆಯ ಮಾಧ್ಯಮದ ಮೂಲಕ ದೇವರ ಬಳಿಗೆ ಬರುವ ಭಾಗ್ಯವನ್ನು ಹೊಂದಿದ್ದಾನೆ. ನಾವು ಪ್ರಾರ್ಥನೆಯ ಮಾಡುವ ಪ್ರತಿ ಸಾರಿ ಸಂತೋಷದಿಂದ ಹೀಗೆ ಯೋಚಿಸಬಹುದು, "ನಾನು ನನ್ನ ಮಧ್ಯಸ್ಥನಾದ ಯೇಸುವಿನ ಮೂಲಕ ದೇವರೊಂದಿಗೆ ಮಾತಾಡುವದಕ್ಕೆ ಸ್ವತಃ ಸಿಂಹಾಸನದ ಕೋಣೆಯೊಳಗೆ ಆತ್ಮನಲ್ಲಿ ಪ್ರವೇಶಿಸುತ್ತಿದ್ದೇನೆ."

## ಕೃಪಾಸನದ ಸಮೀಪಕ್ಕೆ ಬರುವದು (4:16)

ದೇವರು ಒಂದು ನ್ಯಾಯವನ್ನು ಒದಗಿಸುವದಕ್ಕೆ ಮತ್ತು ಇನ್ನೊಂದು ಕರುಣೆಯನ್ನು ನೀಡುವದಕ್ಕೆ ಎಂಬಂತೆ ಎರಡು ಸಿಂಹಾಸನಗಳನ್ನು ಹೊಂದಿರುವದಿಲ್ಲ. ಒಂದೇ ಸಿಂಹಾಸನವು ಅವಿಧೇಯರೊಳಗೆ ಭಯವನ್ನು ಹುಟ್ಟಿಸುತ್ತದೆ ಮತ್ತು ನಂಬಿಗಸ್ತರಿಗೆ ಆದರಣೆಯನ್ನು ಕೊಡುತ್ತದೆ. ದೇವರ ಮಕ್ಕಳು ". . . ನಮ್ಮ ತಂದೆಯೇ" ಎಂದು ಹೇಳಬಲ್ಲರು, ಅದೇ ನಮಗೆ ಮನಸ್ಸಿಗೆ ಪ್ರಶಾಂತತೆಯನ್ನು ಒದಗಿಸುತ್ತದೆ. ಪಾಪಿಗೆ ಏನು ಹೇಳಬೇಕೋ ತಿಳಿಯದು ಮತ್ತು ದೇವರ ಬಳಿಗೆ ಬರುವದಕ್ಕೆ ಧೈರ್ಯವನ್ನು ಹೊಂದಿರುವದಿಲ್ಲ. ನಾವು ಆತನಿಗೆ "ಧೈರ್ಯ ತಂದುಕೋ!" ಎಂದು ಸಹ ಹೇಳುವದಿಲ್ಲ. ಹೇಗೂ, ದೇವರ ಮಕ್ಕಳು ಪೂರ್ವಿಕನನ್ನು ಪ್ರೀತಿಯುಳ್ಳ ತಂದೆಯಂತೆ ಸಮೀಪಿಸಬಹುದು. ನಾವು ಪ್ರಾರ್ಥನೆಯ ಸಮಯಗಳಲ್ಲಿ ದೇವಕುಮಾರನೊಂದಿಗೆ ಕೂಡಿಕೊಳ್ಳಬಲ್ಲೆವು, ಆತನು ನಮ್ಮನ್ನು ಕನಿಕರದಿಂದ ನೋಡುತ್ತಾ ಮತ್ತು ನಮಗೋಸ್ಕರ ವಿಜ್ಞಾಪನೆಯನ್ನು ಮಾಡುತ್ತಾ ಕೂತಿರುತ್ತಾನೆ (ಇಬ್ರಿಯ 7:25). ಆತನು ದೇವರು ಮತ್ತು ಮನುಷ್ಯನ ನಡುವಿನ ಏಕೈಕ ಮಧ್ಯಸ್ಥನಾಗಿ ಸೇವೆ ಸಲ್ಲಿಸುತ್ತಾ ನಮಗೆ ಸಹಾಯ ಮಾಡುತ್ತಾನೆ, ಸ್ವತಃ ಯಾವಾಗಲೂ ಪರಲೋಕದಲ್ಲಿರುವ ನಮ್ಮ ಮನುಷ್ಯನಾಗಿ ಇರುತ್ತಾನೆ (ನೋಡಿರಿ 1 ತಿಮೊಥೆ 2:5).

## ಅಡಿಟಿಪ್ಪಣಿಗಳು

[1]F. F. Bruce, *The Epistle to the Hebrews*, The New International Commentary on the New Testament (Grand Rapids, Mich.: Wm. B. Eerdmans Publishing Co., 1964), 73, n. 17. [2]Philo ಹೇಳಿದ್ದೇನೆಂದರೆ "ದೇವರು ಸದಾಕಾಲವೂ ವಿಶ್ರಾಂತಿ ಅನುಭವಿಸುವದನ್ನು ನಿಲ್ಲಿಸಲಾರನು" (*Philo On the Cherubim* 87-90). "ವಿಶ್ರಾಂತಿ" ಎಂಬುದು ಮತ್ತಾಯ 11:28ರಲ್ಲಿರುವ ಪ್ರಕಾರವೇ ವರ್ತಮಾನಕಾಲವನ್ನು ಸೂಚಿಸುತ್ತದೆಂಬುದನ್ನು Neil R. Lightfoot ಒಪ್ಪಿಕೊಳ್ಳುತ್ತಾನೆ. (Neil R. Lightfoot, *Jesus Christ Today: A Commentary on the Book of Hebrews* [Grand Rapids, Mich.: Baker Book House, 1976], 96.) [3]William Barclay, *The Letter to the Hebrews*, 2d ed., The Daily Study Bible Series (Philadelphia: Westminster Press, 1957), 31. [4]Alexander C. Purdy, "The Epistle to the Hebrews: Introduction and Exegesis," in *The Interpreter's Bible* (Nashville: Abingdon Press, 1955), 11:630-31. [5]Jimmy Allen, *Survey of Hebrews*, 2d ed (Searcy, Ark.: by the author, 1984), 51. [6]1 ಕೊರಿಂಥ 10:1-13 ಮತ್ತು ರೋಮಾ 15:4 ಎರಡೂ ಸಹ ಹಳೆಯ ಒಡಂಬಡಿಕೆಯು ಈ ಕಾರಣಕ್ಕೆ ಅಮೂಲ್ಯವಾಗಿರುತ್ತದೆಂಬುದನ್ನು ತೋರಿಸುತ್ತವೆ. [7]Thomas Hewitt, *The Epistle to the Hebrews: An Introduction and Commentary*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1960), 86. [8]ಸುವಾರ್ತೆಯು ಎಲ್ಲರಿಗೂ ಸಾರೋಣವಾಯಿತೆಂದು ಪೌಲನು ಹೇಳಿದಾಗ ಅದರ ಸೂಚ್ಯಾರ್ಥವು ಹೆಚ್ಚುಕಡಿಮೆ ಇಡೀ ಲೋಕವು ಪರಿವರ್ತನೆಗೊಂಡಿತ್ತೆಂದಾಗಿರಲಿಲ್ಲ (ಕೊಲೊಸ್ಸೆ 1:5, 6, 23). [9]ಹಸ್ತಪ್ರತಿಗಳಲ್ಲಿರುವ ವ್ಯತ್ಯಾಸಗಳಿಂದಾಗಿ ಪದಗುಚ್ಛಕ್ಕೆ "ಅದನ್ನು ಕೇಳಿದವರು ಅದಕ್ಕೆ ನಂಬಿಕೆಯನ್ನು ಸೇರಿಸದೆ ಹೋಗಿದ್ದರಿಂದ" ಎಂದು NKJV ಅನುವಾದಕರು ಅನುವಾದಿಸುವಂತೆ ಕಾರಣವಾಗಿರುತ್ತದೆ. NASBಯಲ್ಲಿ ಅರ್ಥವು ಸಾರಭೂತವಾಗಿ ಒಂದೇ ಆಗಿರುತ್ತದೆ. [10]Donald Guthrie, *The Letter to the Hebrews: An Introduction and Commentary*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1983), 112. Acts 19:1-6 ಸಹ ನೋಡಿರಿ, ಅಲ್ಲಿ ಪೌಲನು ಆಪೊಲ್ಲೋಸ ಮತ್ತು ಇತರ ಶಿಷ್ಯರ ಆರಂಭದಲ್ಲಿ ಪರಿವರ್ತನೆಗೊಂಡದ್ದರ ಬಗ್ಗೆ ವಿಚಾರಿಸುತ್ತಾ "ನೀವು ನಂಬಿದಾಗ" ಎಂದು ಕೇಳುತ್ತಾನೆ. ಅವರು ಪವಿತ್ರಾತ್ಮನ ಕುರಿತು ಕೇಳಿರಲಿಲ್ಲವಾದ್ದರಿಂದ, ಅವರ ದೀಕ್ಷಾಸ್ನಾನವು ಉರ್ಜಿತವಲ್ಲ ಎಂಬುದನ್ನು ತಕ್ಷಣವೆ ಅರಿತುಕೊಂಡಿದ್ದನು, ಅದು ಬಳಕೆಯಲ್ಲಿರದ ಯೋಹಾನನ ದೀಕ್ಷಾಸ್ನಾನವಾಗಿತ್ತು. ಯಾವನಾದರೂ ನಂಬಿದನೆಂದು ಹೇಳಿದರೆ ಆತನು ದೀಕ್ಷಾಸ್ನಾನವನ್ನು ಸಹ ಮಾಡಿಸಿಕೊಂಡವನೆಂದು ಆತನು ಊಹಿಸಿಕೊಳ್ಳಬಲ್ಲವನಾಗಿದ್ದನು.

[11]Ibid. [12]ASV ಮತ್ತು NKJV ತರ್ಜುಮೆಗಳು ಹೆಚ್ಚುಕಡಿಮೆ ಒಂದೇ ಅನುವಾದವನ್ನು ಹೊಂದಿವೆ. NIV ಯಲ್ಲಿ "ಅವರು ಎಂದಿಗೂ ನನ್ನ ವಿಶ್ರಾಂತಿಯಲ್ಲಿ ಸೇರುವದಿಲ್ಲ" ಎಂದಿದೆ. [13]Gareth L. Reese, *A Critical and Exegetical Commentary on the Epistle to the Hebrews* (Moberly, Mo.: Scripture Exposition Books, 1992), 54, n. 4. [14]Ibid., 57, n. 20. ನೋಡಿರಿ ಇಬ್ರಿಯ 9:26; ಮತ್ತಾಯ 13:35; 25:34; ಲೂಕ 11:50; ಯೋಹಾನ 17:24; ಎಫೆಸ 1:4; 1 ಪೇತ್ರ 1:20; ಪ್ರಕಟನೆ 13:8; 17:8. [15]Arthur W. Pink, *An Exposition of Hebrews* (Grand Rapids, Mich.: Baker Book House, 1954), 205. [16]J. Harry Cotton, "The Epistle to the Hebrews: Exposition," in *The Interpreter's Bible*, ed. George Arthur Buttrick (Nashville: Abingdon Press, 1955), 11:631ರಿಂದ ಆಯ್ದುಕೊಳ್ಳಲ್ಪಟ್ಟಿದ್ದು. [17]Brooke Foss Westcott, *The Epistle to the Hebrews: The Greek Text with Notes and Essays* (London: Macmillan & Co., 1889; reprint, Grand Rapids, Mich.: Wm. B. Eerdmans Publishing Co., 1973), 96. Examples cited from Clement of Rome and Philo show that this usage was common. [18]ಹೇಗೂ, "ಬೇಕು" ಎಂಬುದು ಗ್ರೀಕ್ ವಾಕ್ಯದಲ್ಲಿ ಕಾಣಿಸಿಕೊಳ್ಳುವದಿಲ್ಲ. [19]*Midrash Qoheleth* 10:20.1. ಅರಣ್ಯದಲ್ಲಿ ನಂಬಿಕೆಯ ನಷ್ಟದ ಕಾರಣದಿಂದ ಎಲ್ಲವೂ ನಾಶನಕ್ಕೊಳಗಾಯಿತೆಂಬ ಯೋಚನೆಯ ವಿಷಯದಲ್ಲಿ ಸಮಸ್ಯೆಯನ್ನು ಹೊಂದಿದ್ದರು. ಆಗ ಅವರು ಕೋಪದಲ್ಲಿದ್ದ ಒಬ್ಬ ಅರಸನು ತನ್ನ ಮಗನು ಇನ್ನೆಂದಿಗೂ ಅರಮನೆಯನ್ನು ಪ್ರವೇಶಿಸಲಾರನು ಎಂದು ಪ್ರಮಾಣಮಾಡಿದ ಒಂದು ಸಾಮ್ಯವನ್ನು ಹುಟ್ಟು ಹಾಕಿದರು. ಆತನ ಕೋಪವು ತಣ್ಣಗಾದಾಗ, ಆತನು ಹಳೇ ಅರಮನೆಯನ್ನು ಒಡೆದು ಹಾಕಿ ಆತನು ಪ್ರವೇಶಿಸುವಂತಾಗಲು ಹೊಸ ಅರಮನೆಯನ್ನು ಕಟ್ಟಿಸಿದನು. (Reese, 59, n. 27.) ಸಾದೃಶ್ಯಗಳು ಏನನ್ನೂ ಸಾಬಿತುಪಡಿಸುವದಿಲ್ಲ; ಅವುಗಳು ಅನೇಕ ಸಾರಿ ಕೇವಲ "ನುಣುಚಿಕೊಳ್ಳುವ ದಾರಿಗಳ" ಹುಡುಕಾಟ ಮಾತ್ರವೇ ಆಗಿರುತ್ತವೆ, ಅದನ್ನು ಇಬ್ರಿಯರಿಗೆ ಪತ್ರಿಕೆಯು ಮಾಡುವದಿಲ್ಲ. [20]Guthrie, 114.

[21]ಹೇಗೂ, ಈ ವಾಕ್ಯಭಾಗವು ವಾಸ್ತವವಾದ ಯೇಸು ಎಂದರ್ಥವನ್ನು ನೀಡುತ್ತದೆ, ಯಾಕೆಂದರೆ ಆತನು ಬಂಡೆಯಲ್ಲಿ ಇದ್ದನು (1 ಕೊರಿಂಥ 10:4) ಮತ್ತು ಮೋಶೆಯು "ಕ್ರಿಸ್ತನ ನಿಂದನೆಯ" ಏನೋ ಒಂದು ಕಾರ್ಯವನ್ನು ಅರ್ಥಮಾಡಿಕೊಂಡನು (ಇಬ್ರಿಯ 11:26). [22]Westcott, 98. [23]Philip Edgcumbe Hughes, *A Commentary on the Epistle to the Hebrews* (Grand Rapids, Mich.: Wm. B. Eerdmans Publishing Co., 1977), 160-

61, n. 67; Plutarch *Morals* 166. [24]Robert Milligan, *A Commentary on the Epistle to the Hebrews,* New Testament Commentaries (Cincinnati: Chase and Hall, 1876; reprint, Nashville: Gospel Advocate Co., 1975), 166. [25]"ಒಬ್ಬನು" ಯೇಸು ಕ್ರಿಸ್ತನೇ ಎಂದು Reese ಹೇಳುತ್ತಾನೆ, 3:1ನ್ನು ಉಲ್ಲೇಖಿಸುತ್ತಾನೆ. (Reese, 61-62.) [26]Albert Barnes, *Notes on the New Testament: Hebrews to Jude* (London: Blackie & Son, 1884-85; reprint, Grand Rapids, Mich.: Baker Book House, 1985), 103. [27]Hughes, 62, n. 44. [28]Isaac Watts, "Am I a Soldier of the Cross?" *Songs of the Church*, comp. and ed. Alton H. Howard (West Monroe, La.: Howard Publishers, 1977). [29]Allen, 52. [30]Raymond Brown, *The Message of Hebrews: Christ Above All*, The Bible Speaks Today (Downers Grove, Ill.: Inter-Varsity Press, 1982), 90.

[31]Reese, 63. [32]Kenneth Samuel Wuest, *Hebrews in the Greek New Testament for the English Reader* (Grand Rapids, Mich.: Wm. B. Eerdmans Publishing Co., 1947), 88. [33]Hughes, 167. [34]Gerald F. Hawthorne, "Hebrews," in *The New International Bible Commentary*, ed. F. F. Bruce, H. L. Ellison, and G. C. D. Howley (Grand Rapids, Mich.: Zondervan Publishing House, 1986), 1513. [35]ನೋಡಿರಿ ಯೋಹಾನ 1:1-3, 14; 1 ಯೋಹಾನ 1:1, 10; ಪ್ರಕಟನೆ 19:13. ಕೆಲವು ಲೇಖಕರು Philoನು ಬಳಸುವಂತೆ *logos* ಎಂಬ ಪದವನ್ನು "ದೈವಿಕ ಯೋಚನೆ" ಎಂಬದರಲ್ಲಿ ಸಮಾನಾರ್ಥವನ್ನು ಕಾಣುತ್ತಾರೆ. λόγος (*logos*) ಎಂಬ ಪದವು ಇಲ್ಲಿ ಮತ್ತು ಯೋಹಾನನ ಸುವಾರ್ತೆಯಲ್ಲಿ ಸಹ (1:1)ರಲ್ಲಿ ಬಳಸಲ್ಪಟ್ಟಿದೆ, ಆದರೆ ಇಬ್ರಿಯರಿಗೆ ಪತ್ರಿಕೆಯಲ್ಲಿ ಅದು ಯೇಸುವಿನ ಬದಲಾಗಿ ದೇವರ "ದೈವಿಕ ವಾಕ್ಯ"ವನ್ನು ಸೂಚಿಸುತ್ತದೆ. (Westcott, 101.) [36]Warren W. Wiersbe, *Be Confident: An Expository Study of the Epistle to the Hebrews* (Wheaton, Ill.: Victor Books, 1982), 44. [37]Guthrie, 117. [38]Cotton, 11:630. [39]Hewitt, 90. Westcott ಅದೇ ರೀತಿಯ ಹೇಳಿಕೆಯನ್ನು ನೀಡಿದನು: "ಅದು [ವಾಕ್ಯವು] ನಮ್ಮ ಭೂಲೋಕದ ಚೌಕಟ್ಟಿನ ಪ್ರತಿಯೊಂದು ಅಂಶದ ಮೂಲಕ ತನ್ನ ದಾರಿಯನ್ನು ಕಂಡುಕೊಳ್ಳುತ್ತದೆ" (Westcott, 102). [40]R. C. H. Lenski, *The Interpretation of the Epistle to the Hebrews and the Epistle of James* (Columbus, Ohio: Wartburg Press, 1946), 144.

[41]James Burton Coffman, *Commentary on Hebrews* (Austin, Tex.: Firm Foundation Publishing House, 1971), 90-91. [42]Ray C. Stedman, *Hebrews,* The IVP New Testament Commentary Series (Downers Grove, Ill.: Inter-Varsity Press, 1992), 60. [43]Brown, 95. [44]Josephus *Antiquities* 3.6.4. [45]Westcott, 106. [46]Lightfoot, 100. [47]Westcott, 107. [48]ಇದು ಬಲಹೀನತೆಯಬದಲಾಗಿ ಬಲವನ್ನು ಸೂಚಿಸುತ್ತದೆ. [49]Coffman, 94. [50]Allen, 55-56.

[51]Gerald F. Hawthorne ಅಭಿಪ್ರಾಯ ಪಟ್ಟಿದ್ದೇನೆಂದರೆ ಯೇಸು ಪಾಪ ಮಾಡುವದಕ್ಕೆ ಅಸಮರ್ಥನಾಗಿದ್ದನು ಆದರೆ ಅದನ್ನು ಅರಿತವನಾಗಿಲ್ಲದಿರಬಹುದು ಯಾಕೆಂದರೆ ತನ್ನ ಮಾನವ ಸ್ಥಿತಿಯಲ್ಲಿರುವ ವೇಳೆ ಆತನು ಮಿತಿಯಾದ ಜ್ಞಾನವನ್ನು ಹೊಂದಿದ್ದನು (ಮಾರ್ಕ 13:32). (Hawthorne, 1513.) ಶಾಸ್ತ್ರವು ಆತನು ಪಾಪ ಮಾಡಲಿಲ್ಲ ಎಂದಷ್ಟೇ ಹೇಳುತ್ತದೆ (2 ಕೊರಿಂಥ 5:21; 1 ಪೇತ್ರ 2:21, 22; ನೋಡಿರಿ ಯೋಹಾನ 8:29, 46; 10:32; 1 ಯೋಹಾನ 3:6, 7). [52]Philo *On Dreams* 2.230-32. [53]LXXನಲ್ಲಿ ಈ ಪದವು ಒಂದು ತಾಂತ್ರಿಕ ಪದವಾಗಿದೆ "ದೇವರ ಬಳಿಗೆ ಸೇವೆಯಲ್ಲಿ ಯಾಜಕತ್ವದ ದಾರಿಯನ್ನು ಅನುಸರಿಸುವದು" (Westcott, 108). ಇದು ಯಾಜಕಕಾಂಡ 21:17, 21; 22:3ರಲ್ಲಿ ಈ ವಿಧವಾಗಿ ಬಳಸಲ್ಪಟ್ಟಿದೆ, ಆದರೂ ಅದಕ್ಕೊಂದು ವ್ಯಾಪಕವಾದ ಅನ್ವಯವೂ ಇರುತ್ತದೆ. [54]Ibid. [55]Wiersbe, 48. [56]Lenski ಆಕ್ಷೇಪಣೆ ವ್ಯಕ್ತಪಡಿಸುತ್ತಾ ಹೀಗೆ ಹೇಳುತ್ತಾನೆ, "ಆದರೆ ನಾವು ಈಗಲೂ ಪ್ರಾಣ ಮತ್ತು ಆತ್ಮಗಳು ಎರಡು ಘಟಕಗಳಾಗಿ ಹೇಗೆ ವಿಭಾಗಿಸಲ್ಪಡುತ್ತವೆಂಬುದನ್ನು ನೋಡುವದಕ್ಕೆ ಕಾಯುತ್ತಿದ್ದೇವೆ" (Lenski, 144). [57]George Wesley Buchanan, *To the Hebrews: Translation, Comment, and Conclusions*, The Anchor Bible, vol. 36 (Garden City, N.Y.: Doubleday, 1972), 75. [58]Reese, 64, n. 52. [59]ಸಬ್ಬತ್ ಕ್ರೈಸ್ತರು ಈಗಾಗಲೇ ಹೊಂದಿರುವ ಆತ್ಮೀಕ ವಿಶ್ರಾಂತಿ ಮತ್ತು ನಿತ್ಯವಾದ ನಿವಾಸವು ವಾಗ್ದಾನ ಮಾಡಲ್ಪಟ್ಟಿರುವಾಗಲೂ ಕೆಲವರು (Pink, 210-11ನಂಥವರು) ಹೇಗೆ ಇನ್ನೂ ಸಹ ನಮ್ಮ ಮೇಲೆ ಇದೆ ಎಂದು "ಕ್ರೈಸ್ತ ಸಬ್ಬತ್" ಪರವಾಗಿ ವಾದಿಸುತ್ತಾರೆಂಬುದು ಆಶ್ಚರ್ಯವುಂಟು ಮಾಡುತ್ತದೆ. [60]Craig R. Koester, *Hebrews: A New Translation with Introduction and Commentary*, The Anchor Bible, vol. 36 (New York: Doubleday, 2001), 279.

[61]Cotton, 632. [62]Bruce, 74-75, n. 20. Bruceನು ಈ ವಿಚಾರಗಳಲ್ಲಿ ಎಡನೆಯ ಶತಮಾನದ Barnabasನ ಅಭಿಪ್ರಾಯಗಳ ಮೇಲೆ ವಿಸ್ತಾರವಾಗಿ ಉಲ್ಲೇಖನ ಮಾಡುತ್ತಾನೆ. [63]Adapted from Barclay, 33ರಿಂದ ಆಯ್ದುಕೊಳ್ಳಲ್ಪಟ್ಟಿದ್ದು. [64]Stedman, 57. [65]Brown, 90. [66]"ಒಂದು ದಿನ ಅತಿ ತಡವಾಗಿ ಹೋಗಿರುತ್ತದೆ" ಎಂಬ ಯೋಚನೆಯು Pinkನ ಸಲಹೆಯಾಗಿದೆ, 214. [67]Pink, 217. ಆರನೆಯ ಹೇಳಿಕೆಯು ವಾಕ್ಯಭಾಗದ ಕುರಿತಾದ Pinkನ ಅಭಿಪ್ರಾಯವು ಸರಿಯಾದದ್ದೆಂದು ಭಾವಿಸಿಕೊಳ್ಳುತ್ತದೆ—ಒಂದು ಪುನರ್ಜನ್ಮವು ಅಕ್ಷರಶಃ ಪ್ರಾಣ ಮತ್ತು ಆತ್ಮಗಳನ್ನು

ವಿಭಾಗಿಸುವದ"ನ್ನು ಒಳಗೊಂಡಿರುತ್ತದೆಂಬ ಅರ್ಥ. [68]Joseph M. Scriven, "What a Friend We Have in Jesus," *Songs of Faith and Praise*, comp. and ed. Alton H. Howard (West Monroe, La.: Howard Publishing Co., 1994).